THE BOOK WAS DRENCHED

TEXT FLY WITHIN THE BOOK ONLY

TEXT PROBLEM WITHIN THE BOOK ONLY

UNIVERSAL LIBRARY
OU_198530
UNIVERSAL LIBRARY

ಕರ್ನಾಟಕ ಶಿಕ್ಷಣ ಸಮಿತಿಯ ೧೨ ನೇ ಗ್ರಂಥ.

ವೀರಮಾತೆ

# ಶ್ರೀಕುಂತೀದೇವಿಯ ಚರಿತ್ರೆ.

---

ಪ್ರಕಾಶಕರು :

ಶ್ರೀ. ಸುರೇಂದ್ರ ಶಿವರಾವ ದೇಸಾಯಿ, ಎಂ. ಎ.

ಕಾರ್ಯದರ್ಶಿ

ಕರ್ನಾಟಕ ಶಿಕ್ಷಣ ಸಮಿತಿ, ಧಾರವಾಡ

---

ಮುದ್ರಕರು :

ಬಿಂದೂರಾವ ನಾರಾಯಣರಾವ ಮುತಾಲೀಕದೇಸಾಯಿ,

ಶ್ರೀಕೃಷ್ಣ ಮುದ್ರಾಲಯ ಧಾರವಾಡ.

( ಈ ಗ್ರಂಥದ ಎಲ್ಲ ಹಕ್ಕುಗಳು ಸಮಿತಿಯವು )

೧೯೩೨.

---

ಬೆಲೆ, ರೂ. ೧-೦-೦.  ಅಂಚೆಯ ವೆಚ್ಚ ಬೇರೆ.

**ಧಾರವಾಡದ ' ಕರ್ನಾಟಕ ಶಿಕ್ಷಣ ಸಮಿತಿ ' ಯಿಂದ ಕಟವಾದ**
**ಸುಪ್ರಸಿದ್ಧ ಲೇಖಕರ ರಸಭರಿತವಾದ, ಗ್ರಂಥಗಳು !!**

ಮುಂಬಯಿ ಸರಕಾರದ ಶಿಕ್ಷಣ ಖಾತೆಯುವರು ಇವನ್ನು ಇನಾಮಿಗಾಗಿಯೂ ಗ್ರಂಥಾಲಯುಗಳಿಗಾಗಿಯೂ ಮಂಜೂರು ಮಾಡಿರುವರು.

**೧) ಆರ್ಯಧರ್ಮ ಪ್ರದೀಪ**– (ಸಚಿತ್ರ) ಸನಾತನ ಆರ್ಯಧರ್ಮದ ಮೂಲತತ್ವಗಳನ್ನರಿಯಲು ಉತ್ತಮ ಸಂಧಿ. ಧಾರ್ಮಿಕ ಶಿಕ್ಷಣಕ್ಕೆ ಯೋಗ್ಯಪತ್ಯ ಪುಸ್ತಕ, ೬೦೦ ಪುಟಗಳು. ಲೇ:– ಹೊಸಕೆರೆ ಚಿದಂಬರಯ್ಯನವರು. ಬೆಲೆ ರು. ೩–೦–೦

**೨) ಭರತಖಂಡದ ಜೀವಜ್ಯೋತಿಗಳು**–(ಸಚಿತ್ರ)–ಐತಿಹಾಸಿಕ, ಸಾಮಾಜಿಕ, ಧಾರ್ಮಿಕ ರಾಷ್ಟ್ರವೀರರ ೨೫ ಜೀವನಕಥೆಗಳನ್ನೊಳಗೊಂಡಿದೆ. ಲೇ:– ಚಿದಂಬರಯ್ಯನವರು. ಬೆಲೆ. ರೂ. ೧–೦–೦

**೩) ಭಾರತೀಯರ ಇತಿಹಾಸ** (ಸಚಿತ್ರ):—ಪ್ರಾಚೀನ ಆರ್ಯರ ಸ್ವಾತಂತ್ರ್ಯಪೂರ್ಣ, ಸಾಂಸ್ಕೃತಿಕ ಮತ್ತು ಜನಜೀವನದರ್ಶಕವಾದ ಚರಿತ್ರೆ. ಲೇ:– ನಾರಾಯಣ ಶರ್ಮಾ. ಬೆಲೆ. ರೂ. ೨–೮–೦

**೪) ಭಾವಗೀತೆ**:–ದಾಸರ ಮತ್ತು ಶಿವಶರಣರ ಉತ್ತಮ ಪದಗಳನ್ನೂ ಭಕ್ತಿ ಗೀತೆಗಳನ್ನೂ ಸಂಗ್ರಹಿಸಿದೆ. ೧೩೫ ಸುಂದರ ಪದಗಳಿವೆ. ಬೆಲೆ. ೧ ರೂ.

**೫) ಕರ್ನಾಟಕ ಗತವೈಭವ** (ಸಚಿತ್ರ):– ಕರ್ನಾಟಕ ದೇವಿಯು ಬಗ್ಗೆ ಅಭಿಮಾನವನ್ನೂ ಪ್ರೇಮೋತ್ಸಾಹಗಳನ್ನೂ ಉಂಟುಮಾಡಿ ಕರ್ನಾಟಕದ ಹಿಂದಿನ ಮೇಲ್ಕಾಲವನ್ನೂ ಸಂಕ್ಷಿಪ್ತ ಇತಿಹಾಸವನ್ನೂ ಬಣ್ಣಿಸುವ ಗ್ರಂಥ. ಲೇ:– ಆಲೂರ ವೆಂಕಟರಾಯರು ಬೆಲೆ. ರೂ. ೧–೪–೦

**೬) ಕರ್ನಾಟಕದ ವೀರರತ್ನಗಳು** (ಸಚಿತ್ರ):- ರಣಾಂಗಣದ ವೀರಕ್ಷತ್ರಿಯ ಭಾಷೆಯಲ್ಲಿ ವೀರರ ಹೃದಯವನ್ನು ಉಕ್ಕಿಸಿ ಹುರಿಗೊಳಿಸುವಂತೆ ಬರೆದದ್ದು. ಲೇ:- ಆಲೂರ ವೆಂಕಟರಾಯರು ಬೆಲೆ ರೂ. ೧–೦–೦

**೭) ಭಾರತೀಯರ ಮೇಲ್ಮೆ** (ಸಚಿತ್ರ):– ಸ್ವಾತಂತ್ರ್ಯಪ್ರಿಯ ಪ್ರಾಚೀನ ಆರ್ಯರು ತಮ್ಮ ಆದರ್ಶಭೂತವಾದ ಉಜ್ವಲ ಜೀವನಪ್ರವಾಹವನ್ನು ನಾನಾಮುಖವಾಗಿ ಹರಿಯಹಚ್ಚಿ ಪಾಶ್ಚಿಮಾತ್ಯರಿಗಿಂತಲೂ ಹೆಚ್ಚಿನ ಮೇಲ್ಮೆಯನ್ನು ಪಡೆದಿದ್ದರೆಂಬುದನ್ನು ಪಾಶ್ಚಿಮಾತ್ಯ ವಿದ್ವಾಂಸರೇ ಬಾಯಿ

ತುಂಬಾ ಹೊಗಳಿದ ಬರಹಗಳ ಆಧಾರದಿಂದಲೇ ತೋರಿಸುವ ಗ್ರಂಥ ಲೇ:- ನಾರಾಯಣ ಶರ್ಮಾ ಬೆಲೆ ರೂ ೧-೦-೦

**೮) ವೀರಮಾತಾ ಕುಂತೀದೇವಿ:-** ಉಜ್ವಲ ಜೀವನ ಕಥೆ. ಕುಣಿಸುವ ಹುರುಪಿನ ಭಾಷೆ. ಬಿಸಿನೆತ್ತರದ ಸ್ತ್ರೀಪುರುಷರು ಓದಲೇ ಬೇಕು. ಬೆಲೆ ರೂ. ೧-೦-೦

**೯) ಮಕ್ಕಳ ಮಹಾತ್ಮಾ ಗಾಂಧಿ** (ಸಚಿತ್ರ):- ಜಗತ್ತಿಗೆ ಮೇಲೆನಿಸಿದ ಗಾಂಧೀಜಿಯವರ ಸದ್ಗುಣ ರಾಶಿಯು ಚಿಕ್ಕಮಕ್ಕಳ ಎಳೇ ಅಂತಃಕರಣಗಳಲ್ಲಿ ಚನ್ನಾಗಿ ಒಡಮೂಡುವಂತೆ ಮಕ್ಕಳ ಭಾಷೆಯಲ್ಲಿಯೇ ಸುಲಭ ಮಾತಿನಲ್ಲಿ ಬರೆದ ತೇಜಸ್ವೀ ಜೀವನ ಕಥಾಸಾರಸಂಗ್ರಹ. ದೊಡ್ಡ ಟೈಪುಗಳು. ಅನೇಕ ಸುಂದರ ಚಿತ್ರಗಳು. ಬೆಲೆ ೪ ಆಣೆ.

**೧೦) ಸಾಧುಪುರುಷ ನಾಗಮಹಾಶಯರ ಚರಿತ್ರೆ** (ಸಚಿತ್ರ):- ಶ್ರೀ ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ ಸುಪ್ರಸಿದ್ಧ ಗೃಹಸ್ಥಾಶ್ರಮಿ ಶಿಷ್ಯಶ್ರೇಷ್ಠರಾದವರ ಅನೇಕ ಆಶ್ಚರ್ಯದ ಸಂಗತಿಗಳನ್ನೊಳಗೊಂಡ ದಿವ್ಯ ಚರಿತ್ರೆ. ಸತ್ಯ ಅಹಿಂಸೆಗಳ ಪ್ರತ್ಯಕ್ಷಚಿತ್ರ ಲೇ:-ಗೋವಿಂದ ಲಕ್ಷ್ಮಣ ಹಳ್ಳಿಪ್ಪನವರ. ಬೆಲೆ. ರೂ. ೧-೦ ೦

**೧೧) ವಿವೇಕಾನಂದಸ್ವಾಮಿಗಳ ಕರ್ಮಯೋಗ** (ಸಚಿತ್ರ):— ಜಗತ್ತಿನಲ್ಲೆಲ್ಲ ವೇದಾಂತಾಶ್ರಮಗಳನ್ನು ಸ್ಥಾಪಿಸಿ ಸನಾತನ ಆರ್ಯಧರ್ಮದ ಮೇಲ್ಮೆಯನ್ನು ದಿಕ್ಕುದಿಕ್ಕುಗಳಲ್ಲಿ ಬೆಳಗಿ ಕೀರ್ತಿಶರೀರಿಗಳಾದ ವೀರ ಸನ್ಯಾಸೀ ವಿವೇಕಾನಂದ ಸ್ವಾಮಿಗಳ ಕರ್ಮಯೋಗದ ಅನುವಾದ. ಅನುವಾದಕ:-ಸುರೇಂದ್ರ ಶಿವರಾವ ದೇಸಾಯಿ, ಎಂ. ಎ. ಬೆಲೆ. ರೂ. ೧-೦-೦

**೧೨) ನನ್ನ ಹಿಮಾಲಯ ಯಾತ್ರೆ** (ಚಿತ್ರಮಯ):- **ಹಿಮಾಲಯ** ಪರ್ವತದಲ್ಲಿಯ ಬದರೀ, ಕೇದಾರ, ಗಂಗೋತ್ರಿ, ಜಮನೋತ್ರಿ, ಕೈಲಾಸ, ನೇಪಾಳ, ಕಾಶ್ಮೀರ, ಮೊದಲಾದ ಪವಿತ್ರ ಪುಣ್ಯಕ್ಷೇತ್ರಗಳ ವರ್ಣನೆಯನ್ನೂ ಪ್ರವಾಸದ ಮಾಹಿತಿಯನ್ನೂ ಯಾತ್ರಿಕರಿಗೆ ಅನುಕೂಲವಾಗುವಂತೆ ಪ್ರತ್ಯಕ್ಷ ಅನುಭವದಿಂದ ಬರೆದ ಗ್ರಂಥ. ಅನೇಕ ಸುಂದರ ಚಿತ್ರಗಳಿವೆ. ಬೆಲೆ ೧ ರೂ.

**ವಿಳಾಸ:—ಕರ್ನಾಟಕ ಸಾಹಿತ್ಯ ಮಂದಿರ, ಧಾರವಾಡ.**

**ಮಾರುವ ಪೂರ್ಣ ಹಕ್ಕುಳ್ಳವರು.**

# ಪ್ರಕಾಶಕರ ಎರಡು ಮಾತು.

ಕನ್ನಡ ವಾಙ್ಮಯ ಪ್ರಪಂಚದಲ್ಲಿ ಇದೇ ಮೊದಲನೆಯ **ಕುಂತಿಯ ಚರಿತ್ರೆ**ಯೆಂದು ಹೇಳಬಹುದು. ಕುಂತಿಯು ಶಿವಾಜಿಯ ತಾಯಿಯಂತೆ ವೀರಮಾತೆಯೆಂಬ ವಿಷಯವನ್ನು, ಮಹಾಭಾರತಯುದ್ಧದ ವೀರಕರ್ಮಕ್ಕೆ ಆಕೆಯೇ ಪ್ರೇರಕಳೆಂಬ ವಿಷಯವನ್ನು ಕನ್ನಡಿಗರ ನಿದರ್ಶನಕ್ಕೆ ತಂದು ಕೊಟ್ಟವರಲ್ಲಿ ಈ ಗ್ರಂಥದ ಲೇಖಕರೇ ಮೊದಲಿನವರೆಂದು ಹೇಳಬಹುದು. ಈ ಗ್ರಂಥದ ವಾಚನದಿಂದ ಲೇಖಕರ ತೇಜಸ್ವೀ ವಿಚಾರಸರಣಿಯೂ, ಒಳ್ಳೆ ಹುರುಪಿನ ಭಾಷಾಶೈಲಿಯೂ ಕನ್ನಡಿಗರಿಗೆ ಪರಿಚಿತವಾಗುವದು. ಇಂಥ ಅಪೂರ್ವಪುಸ್ತಕವನ್ನು ಬರೆದುಕೊಟ್ಟದಕ್ಕಾಗಿ ಕರ್ನಾಟಕಶಿಕ್ಷಣಸಮಿತಿಯು ಅವರಿಗೆ ತುಂಬಾ ಋಣಿಯಾಗಿದೆ. ಅನೇಕ ತಿದ್ದುಪಾಟಗಳನ್ನು ಮಾಡಿಕೊಟ್ಟದ್ದಕ್ಕಾಗಿ ಶ್ರೀ. ನಾರಾಯಣ ಶರ್ಮರನ್ನೂ ವೇಳೆಗೆ ಸರಿಯಾಗಿ ಅಂದವಾಗಿ ಮುದ್ರಿಸಿಕೊಟ್ಟದಕ್ಕಾಗಿ ಶ್ರೀಕೃಷ್ಣ ಮುದ್ರಾಲಯದ ಒಡೆಯರನ್ನೂ ಸ್ಮರಿಸದಿರಲಾರೆವು. ಕನ್ನಡಿಗರು ಕುಂತೀ ಮಾತೆಯ ದಿವ್ಯ ತೇಜೋಮಯ ಚರಿತ್ರೆಯನ್ನು ಇಲ್ಲಿ ಕಂಡುಕೊಳ್ಳಲೆಂದು ಹಾರೈಸುತ್ತೇವೆ.

ಕ. ಶಿ. ಸಮಿತಿ, ಧಾರವಾಡ.
ತಾ|| ೧-೭-೧೯೩೨.

**ಸುರೇಂದ್ರ ಶಿವರಾವ ದೇಸಾಯಿ.**

# ಮೊದಲುಮಾತು.

---

"ಅಂತೂ ಇಂತೂ ಕುಂತಿಯ ಮಕ್ಕಳಿಗೆ ರಾಜ್ಯವಿಲ್ಲ" ಎಂಬುವ ವಾಡಿಕೆಯ ಗಾದಿಯ ಮಾತಿನಲ್ಲಿ ಕುಂತಿಯ ಮಕ್ಕಳಾದ ಪಾಂಡವರ ವನವಾಸದ ಕಲ್ಪನೆಯೇ ಸ್ಪಷ್ಟವಾಗಿರುವದೇ ಹೊರ್ತು, ಕುಂತಿಯು ತನ್ನ ಮಕ್ಕಳನ್ನು ಹುರಿದುಂಬಿಸಿ, ಕೈಬಿಟ್ಟುಹೋದ ಸಾಮ್ರಾಜ್ಯವನ್ನು ತಿರಿಗಿ ಗಳಿಸುವದರಲ್ಲಿ ಅವರನ್ನು ಪ್ರಚೋದಿಸಿದಳೆಂಬುದು ತಿಳಿಯುವದಿಲ್ಲ. ಇದರ ಮೇಲಿಂದಲೇ ನಮ್ಮ ಸಮಾಜದವರಿಗೆ ಕುಂತಿಯ ಯೋಗ್ಯತೆಯು ಎಷ್ಟರ ಮಟ್ಟಿಗೆ ತಿಳಿದಿರುವದೆಂಬುದರ ಕಲ್ಪನೆ ಬರುವಂತಿದೆ. ಮಹಾಭಾರತದಂಥ ವಿಶಾಲ ವನದೊಳಗೆ ಕುಂತೀದೇವಿಯ ಚರಿತ್ರೆಯು ಅಲ್ಲಲ್ಲಿ ಹರಡಿಕೊಂಡಿದ್ದರಿಂದ ಸೂಕ್ಷ್ಮ ದೃಷ್ಟಿಯಿಂದ ಓದುವವರಿಗಲ್ಲದೆ ಮಿಕ್ಕವರಿಗೆ ಆ ಮಹಾಮಹಿಮಳ ಚಾರಿತ್ರ್ಯದ ಭಾವನೆಯು ಕಂಡುಬಾರದು.

ಮಹಾಭಾರತದಿಂದ ನೋಡಿದರೆ, ಕುಂತೀದೇವಿಯು ಪಾಂಡವರನ್ನು ಎಡರಿನಿಂದ ಎದೆಗುಂದದೆಯೂ ಉಬ್ಬದೆಯೂ ಮುನ್ನಡಿಸುವ ಶಕ್ತಿ-ದೇವತೆಯೇ ಆಗಿದ್ದಳೆನ್ನಬಹುದು; ಕುರುಕುಲದ ಕೊನೆಮೊದಲುಗಳನ್ನು ಮುನ್ನೋಟದಿಂದಲೇ ತಿಳಿದ ಶ್ರೀಕೃಷ್ಣನಂಥ ಮಾಯಾವಿಯಾದ ಮಾಟಗಾರನು ಪಾಂಡವರ ಪಕ್ಕದಲ್ಲಿದ್ದರೂ, ಪಾಂಡವರಿಗೆ ಯುದ್ಧಮಾಡಲು ಸೊನ್ನೆಕೋಲು ಹಾಕಿ ಎಬ್ಬಿಸಿದವಳೆಂದರೆ ಕುಂತಿಯೇ! ದುಷ್ಟನಿಗ್ರಹ, ಶಿಷ್ಟಪರಿಪಾಲನೆ, ಕ್ಷತ್ರಿಯರ ಕರ್ತವ್ಯ, ಕ್ಷಾತ್ರನ ಬಾಳಿನಗುಟ್ಟು, ಆ ಗುಟ್ಟನ್ನು ಗಳಿಸುವದೆಂತು? ಇವೇ ಮುಂತಾದ ದೊಡ್ಡಮುಂಡಿಗೆಗಳನ್ನು ಕುಂತೀದೇವಿಯು ತನ್ನ ಮಕ್ಕಳನ್ನು ಮುಂದೆಮಾಡಿ ಆಗಿನ ಪೀಳಿಗೆಯ ರಾಜರ ಕಿವಿಗಳಲ್ಲಿ ಖಣಖಣಿಸುವಂತೆ ಘಂಟಾಘೋಷವಾಗಿಯೂ ನಿರ್ಣಾಯಕವಾಗಿಯೂ ಹೇಳಿರುವಳು. ಇಡೀ ಮಹಾಭಾರತದಲ್ಲಿ ಕುಂತೀದೇವಿಯು ತನ್ನ ಮಕ್ಕಳಿಗೆ ಉಸುರಿದ ಬೋಧಸಾರವೆಂದರೆ, ಕ್ಷತ್ರಿಯನ ಬಾಳಿಕೆಯ ಬೆಲೆಯನ್ನು ಬರಿಯ ವಯಸ್ಸಿನಿಂದ ಎಣಿಸುವದಲ್ಲ; ಆದರೆ ಆದರ ಜೀವಂತಿಕೆಯಿಂದ. ಹದ್ದುಗಳು ಕೂಡ ನೂರಾರು ವರ್ಷ ಬಾಳುವವು.

ಹಾಗೆ ಬಾಳಿ ಪ್ರಯೋಜನವೇನು? ಜೀವನದೊಳಗೆ ಚಾರಿತ್ರ್ಯದ, ಕರ್ತವ್ಯ ಜಾಗೃತಿಯ ಕಲ್ಪನೆ, ಅದರಂತೆ ಕಾರ್ಯ ಇಲ್ಲದಿದ್ದರೆ, ಅಂಥ, ಮಾನಗೇಡಿ ಜೀವನದಿಂದೇನು? ಅಂಥ ಜೀವನವು ತನ್ನ ವೈರಿಗಳಿಗೂ ಬೇಡವೆಂದು ಕುಂತೀದೇವಿಯು ವೀರವಿದುಲೆಯ ಸಿಡಿನುಡಿಗಳಿಂದ ತನ್ನ ಮಕ್ಕಳಿಗೆ ಸಾರಿ ಹೇಳಿರುವಳು

ಪುರಾಣಗಳಲ್ಲಿ ಹುಡುಕಿದರೆ, ನಮಗೆ ಕುಂತೀದೇವಿಯ ಚರಿತ್ರಕ್ಕೆ ಸರಿಗಟ್ಟುವ ಇನ್ನೊಂದು ಉದಾತ್ತ ವೀರಚರಿತವು ದೊರೆಯದು. ಮಹಾ ಭಾರತವೆಂಬ ಬೆಟ್ಟದಂಥ ಗ್ರಂಥದೊಳಗೆ ಅಡಗಿರುವ ಇಂಥ ದಿವ್ಯ ಚರಿತ್ರ ವನ್ನು ಲೇಖಕರು ದೀರ್ಘಪರಿಶ್ರಮದಿಂದ ಕನ್ನಡಿಗರ ಮುಂದಿಟ್ಟದ್ದಕ್ಕಾಗಿ ಇಡೀ ಕನ್ನಡ ಜನಾಂಗವೇ ಅವರಿಗೆ ಋಣಿಯಾಗಿರಬೇಕಾಗಿದೆ.

ಈ ಗ್ರಂಥದಲ್ಲಿ ಲೇಖಕರು ತಮ್ಮ ಕಲ್ಪನೆಯ ಚಾತುರ್ಯ, ಭಾವನೆಯ ಹಾರಿಕೆ, ಬಣ್ಣನೆಯ ಕೌಶಲ್ಯ, ವೀರ್ಯದ ಗಾಂಭೀರ್ಯ; ಇವೇ ಮುಂತಾದ ರಸಗಳನ್ನು ಬಹು ಸರಸವಾಗಿ ಸಾಧಿಸಿದ್ದು ಅಲ್ಲಿಂದಿ ಲ್ಲಿಯವರೆಗೆ ಇಡೀ ಗ್ರಂಥದಲ್ಲಿ ವೀರರಸವು ಉಕ್ಕುತ್ತಿದೆ. ಲೇಖಕರು ಬರೆದಿಟ್ಟ ಈ ಗ್ರಂಥವನ್ನು ಧಾರವಾಡದ ಕರ್ನಾಟಕ ಶಿಕ್ಷಣ ಸಮಿತಿ ಯವರು ತಮ್ಮ ವಶಕ್ಕೆ ತೆಗೆದುಕೊಂಡು ಕಳೆದ ೭-೮ ವರ್ಷಗಳಿಂದಲೂ ಬೆಳಕುಗಾಣದೆ ಹುಳತಿನ್ನುತ್ತಾ ಬಿದ್ದ ಅಪ್ರತಿಮ ಗ್ರಂಥವನ್ನು ಮುದ್ರಿಸಿ ಪ್ರಸಿದ್ಧಪಡಿಸಿದ್ದಕ್ಕಾಗಿ ವಾಙ್ಮಯ ಪ್ರೇಮಿಗಳಾದ ಕನ್ನಡಿಗರು ಅವರಿಗೂ ಋಣಿಯಾಗಿರುವದು ಸಾಜವೇ !

ನಾರಾಯಣ ಶರ್ಮಾ.

# ವಿಷಯಾನುಕ್ರಮಣಿಕೆ.


(೧) **೧ನೆಯ ಪ್ರಕರಣ- ಪೂರ್ವವೃತ್ತ—** ಪುಟಗಳು ೧-೮
ಜನ್ಮ- ರೂಪಗುಣಶಿಕ್ಷಣ- ದುರ್ವಾಸರ ಆತಿಥ್ಯ- ಮಂತ್ರೋಪ ದೇಶ- ಕರ್ಣಜನ್ಮ.

(೨) **೨ನೆಯಪ್ರಕರಣ- ಪಾಂಡವರ ಜನ್ಮ—** ಪುಟಗಳು ೮-೩೮
ಸ್ವಯಂವರ ಸಮಾರಂಭ- ಮಾದ್ರಿಯು ಲಗ್ನ- ಪಾಂಡುರಾಜನ ದಿಗ್ವಿಜಯ- ವನವಿಹಾರ- ಶಾಪ-ತಪಶ್ಚರ್ಯ- ಋಷಿಗಳ ಆಶೀರ್ವಾದ-ಮಕ್ಕಳ ಹಳವಂಡ-ನಿಯೋಗದ ವಿಚಾರ- ಮಕ್ಕಳನ್ನು ಪಡೆಯಲು ಕುಂತಿಗೆ ಆಜ್ಞೆ- ಪಾಂಡವರ ಜನ್ಮ- ಮುಂಬರುವ ದುಃಖದ ಬೀಜ- ಪಾಂಡುರಾಜನ ಮರಣ- ಸತಿಹೋಗುವ ಪದ್ಧತಿ-ಮಾದ್ರಿಯು ಸಹಗಮನ- ಪಾಂಡವರ ಶಿಕ್ಷಣ- ಭೀಮನು ಕಾಣದಂತಾದದ್ದು- ಧನುರ್ವೇದ ಶಿಕ್ಷಣ.

(೩) **೩ನೆಯ ಪ್ರಕರಣ- ಮೊದಲನೇ ವನವಾಸ—** ೩೮-೭೧
ದ್ವೇಷಾಂಕುರ- ಪಾಂಡವರನ್ನು ವಾರಣಾವತಕ್ಕೆ ಕಳಿಸುವದು- ಅರಗಿನ ಮನೆಗೆ ಬೆಂಕಿಯಿಕ್ಕಿ ಪಾಂಡವರು ಪಾರಾದದ್ದು- ಶ್ರೀವೇದವ್ಯಾಸರ ದರ್ಶನ- ವೇಷಾಂತರ- ಏಕಚಕ್ರನಗರದಲ್ಲಿ ಪಾಂಡವರ ವಾಸ- ಭೀಮನಬಲದ ಬಗ್ಗೆ ಕುಂತಿಯ ಹೇಳಿಕೆ- ಪಾಂಡವರು ಸ್ವಯಂವರಕ್ಕೆ ಹೋದದು- ಸ್ವಯಂವರದ ವಿಷಯವು ಕುಂತಿಗೆ ಗೊತ್ತಿರಲಿಲ್ಲವೇ?- ಬಹುಪತಿವ್ರತವು ಶಾಸ್ತ್ರಸಮ್ಮತವೇ?- ಶ್ರೀಕೃಷ್ಣಪಾಂಡವರಭೆಟ್ಟಿ- ಕುಂತಿಯ ದಿನಚರ್ಯ- ಧರ್ಮರಾಜನ ರಾಜಸೂಯಯಾಗ.

(೪) **೪ನೆಯ ಪ್ರಕರಣ- ಎರಡನೇ ವನವಾಸ—** ೭೧-೮೪
ಶ್ರೀಸ್ಮರವೃತ್ತಿ- ಜೂಜಿನಲ್ಲಿ ಧರ್ಮರಾಯನ ಸೋಲು- ದ್ರೌಪದಿಯ ಗೋಳು-ಮತ್ತೆ ಜೂಜು ಮತ್ತೆ ಸೋಲು- ೧೨ ವರ್ಷದ ದೀರ್ಘವನವಾಸ-ಕುಂತಿಯ ಮೀರಿದ ಗೋಳು- ಧೃತರಾಷ್ಟ್ರ

ವಿದುರ ಸಂಭಾಷಣೆ- ಕಾಮ್ಯಕವನದಲ್ಲಿ ಪಾಂಡವರ ವಾಸ- ಶ್ರೀಕೃಷ್ಣನು ದ್ರೌಪದಿಯ ಮೊರೆ ಕೇಳಿದ್ದು- ಪಾಂಡವರು ಪುನಃ ಪ್ರಕಟರಾದದ್ದು- ಶ್ರೀಕೃಷ್ಣಶಿಷ್ಟಾಯಿ.

(೫) **೫ನೆಯ ಪ್ರಕರಣ- ಭಾರತೀಯ ಯುದ್ಧ**-- ೮೪-೧೧೧
ಹಸ್ತಿನಾವತಿಯಲ್ಲಿ ಶ್ರೀಕೃಷ್ಣನಿಗೆ ಮರ್ಯಾದೆ- ಕುರುಸಭೆಯಲ್ಲಿ ಶ್ರೀಕೃಷ್ಣನ ಕೊನೆಯ ಮಾತುಗಳು- ಧರ್ಮರಾಯನಿಗೆ ಕುಂತಿಯ ಸಂದೇಶ- ವಿದುಲಾದೇವಿಯ ಕಥೆ- ವಿದುಲೆಯ ಭಾಷಣ-ಕುಂತಿಯು ಕರ್ಣನ ಮನಒಲಿಸಲು ಯೋಚಿಸುವದು- ಭಾರತೀಯ ಯುದ್ಧಪದ್ಧತಿ.

(೬) **೬ನೆಯ ಪ್ರಕರಣ- ಮಹಾಯುದ್ಧದ ನಂತರ**-೧೧೨-೧೨೨
ಶೋಕಸಾಗರ- ಉತ್ತರಕ್ರಿಯೆಗಳು- ಕುಂತಿಯು ವೈರಿಯ ಸೇವೆಮಾಡುವದು- ಇದು ಕೃತಕಪ್ರೇಮವೋ ಡಂಭಾಚಾರವೋ?-ಧರ್ಮಯುದ್ಧಕ್ಕೂ ಪ್ರಾಯಶ್ಚಿತ್ತ-ಅಶ್ವಮೇಧ ಯಜ್ಞ. ಕುರುವಂಶಭೇದ- ಕುಂತಿಗೆ ಪರಮದುಃಖ- ಶ್ರೀಕೃಷ್ಣನ ಯೋಗಸಾಮರ್ಥ್ಯ- ಯಜ್ಞಕಾರ್ಯ- ಕುಂತಿಯ ವೈಭವದ ೧೫ ವರ್ಷ.

(೭) **೭ನೆಯ ಪ್ರಕರಣ- ಕುಂತಿಯ ವಾನಪ್ರಸ್ಥಾಶ್ರಮ**-೧೨೩-೧೪೦
ಧೃತರಾಷ್ಟ್ರನ ವೈರಾಗ್ಯ- ವನವಾಸಕ್ಕೆ ಹೊರಡೋಣ- ಕುಂತಿಯ ವಾನಪ್ರಸ್ಥಾಶ್ರಮ-ಧರ್ಮನ ದುಃಖ-ಭೀಮಧರ್ಮರ ಅಡ್ಡಿ-ಹೆಂಗಸರಿಗೂ ವಾನಪ್ರಸ್ಥಾಶ್ರಮವೇ?- ಮಾರ್ಗಕ್ರಮಣ.- ಆಶ್ರಮ ನಿಯಮ ಪರಿಪಾಲನೆ- ಕುಂತಿಯ ದರ್ಶನಾಪೇಕ್ಷೆ- ತಪಸ್ವಿನೀ ಕುಂತೀದೇವಿಯ ಸ್ವರೂಪ- ಗಂಗಾದ್ವಾರದಲ್ಲಿ ಧೃತರಾಷ್ಟ್ರನ ಆಶ್ರಮ- ನಿರ್ಯಾಣಕಾಲ- ಮಹಾಗ್ನಿಸಂಸ್ಕಾರ- ಉಪಸಂಹಾರ.

ವೀರಮಾತೆ

# ಕುಂತೀದೇವಿ

# ತಿದ್ದುಪಡಿ.

| ಪುಟ | ಸಾಲು | ತಪ್ಪು | ಒಪ್ಪು. |
|---|---|---|---|
| ೩೦ | ೧೨ | ಭೀಷ್ಮನು | ಭೀಮನು |
| ೮೮-೧೧೧ವರೆಗಿನ ಪುಟದ ಮೇಲ್ಬರಹ | | ಎರಡನೇ ವನವಾಸ | ಭಾರತೀಯ ಯುದ್ಧ. |

೧೧೨ ಪುಟದಿಂದ ಮುಂದೆ ೧೪೧ ರಿಂದ ೧೫೨ ರ ವರೆಗೆ ತಪ್ಪು ಪುಟ ಸಂಖ್ಯೆಬಿದ್ದದ್ದು ೧೧೩ ರಿಂದ ೧೨೪ ಎಂದು ತಿದ್ದಿಕೊಳ್ಳಬೇಕು.

(ತಿದ್ದಿದ) ೧೨೩ನೇ ಪುಟದಲ್ಲಿ ೧೦ನೇ ಪ್ರಕರಣ ಎಂದು ಇದ್ದದ್ದು ೩ನೇ ಪ್ರಕರಣ ಎಂದು ಓದಬೇಕು.

# ವೀರಮಾತೆ ಕುಂತೀದೇವಿಯ ಚರಿತ್ರೆ

## ೧ನೆಯ ಪ್ರಕರಣ

## ಪೂರ್ವವೃತ್ತ

ಜನ್ಮ:- ಸುಮಾರು ೫೦೦೦ ವರುಷಗಳಾಚೆಯ ಸಂಗತಿಯು. ಸದ್ಯಕ್ಕೆ ಸಂಯುಕ್ತ ಪ್ರಾಂತವೆಂದು ಪ್ರಸಿದ್ಧವಿರುವ ಹಿಂದುಸ್ಥಾನದ ಭಾಗದಲ್ಲಿ ಮತ್ತು ಆದರ ಸುತ್ತುಮುತ್ತಲು ಆಗ ಕುರು, ಪಾಂಚಾಲ, ಯಾದವ, ಭೋಜ, ಅಂಧಕ ಮುಂತಾದ ಜನಾಂಗಗಳೂ ಮಗಧ, ಮತ್ಸ್ಯ ಮುಂತಾದ ರಾಜ್ಯಗಳೂ ವಿರಾಜಿಸುತ್ತಿದ್ದವು. ಸಾಧಾರಣವಾಗಿ, ಗಂಗಾ ಯಮುನಾ ಇವೆರಡೂ ಪವಿತ್ರ ನದಿಗಳ ದಂಡೆಗುಂಟ ಆ ಕಾಲಕ್ಕೆ ಮೇಲ್ಕಾಣಿಸಿದ ಕುಲಗಳ (Tribes) ರಾಜ್ಯಗಳು ಮೆರೆಯುತ್ತಿದ್ದವು. ಭೋಜರಾಜ್ಯಕ್ಕೊಳಗಾದ ಯಮುನಾ ತಟಾಕದಲ್ಲಿರುವ ಒಂದು ಚಿಕ್ಕ ಸಂಸ್ಥಾನಕ್ಕೆ ಜಹಾಗಿರದಾರನಾದ ವೃಷ್ಣಿ ಕುಲತಿಲಕನಾದ ಶೂರನೆಂಬ ಯಾದವ ಸರದಾರನಿದ್ದನು. ಈ "ಶೂರನ" ಮಗನೇ ವಸುದೇವನು. ಶೂರನಿಗೆ ಪೃಥಾ ಎಂಬ ಒಬ್ಬ ಚೊಚ್ಚಿಲು ಮಗಳಿದ್ದಳು. ತನ್ನ ಪರಮ ಮಿತ್ರನೂ, ಸೋದರತ್ತೆಯ ಮಗನೂ ಆದ ಕುಂತಿಭೋಜನಿಗೆ ಮಕ್ಕಳಿಲ್ಲದ ಮೂಲಕ ಶೂರನು ತನ್ನ ಚೊಚ್ಚಿಲು ಮಗಳನ್ನು ಮೊದಲೇ ವಚನ ಕೊಟ್ಟಂತೆ, ಸಾಕಕೊಟ್ಟನು. ಈ ಪ್ರಕಾರ ನಮ್ಮ ಚರಿತ್ರನಾಯಿಕೆಯಾದ ಪೃಥಾದೇವಿಯು ಶೂರನ ಮಗಳು, ವಸುದೇವನ ಅಕ್ಕ, ಶ್ರೀಕೃಷ್ಣನ ಸೋದರತ್ತೆ, ಕುಂತೀಭೋಜನ ಸಾಕಮಗಳು. ಈ ಕುಂತಿಭೋಜ ಮನೆತನದಿಂದಲೇ ಮುಂದೆ ಇವಳಿಗೆ ಕುಂತೀ ಎಂಬ ಉಪನಾ

ಮವು ಪ್ರಾಪ್ತವಾಯಿತು. ಆ ಮೇಲೆ ಅದೇ ಹೆಸರಿನಿಂದ ಈ ಪರಮ ಸಾಧ್ವಿಯು ಹೆಸರುವಾಸಿಯಾದಳು.

**ರೂಪ- ಗುಣ- ಶಿಕ್ಷಣ:**- ಕುಂತಿಯು ರೂಪದಲ್ಲಿ ಅನುಪಮ ಸುಂದರಿಯು; ಬುದ್ಧಿಯಲ್ಲಿ ಅತಿ ಚುರುಕು; ಸ್ವಭಾವದಿಂದ ಎಲ್ಲರ ಪ್ರೀತಿ ಪಾತ್ರಳು. ಒಟ್ಟಿಗೆ ಅವಳು ಎಲ್ಲ ಸುಗುಣಗಳ ತವರುಮನೆಯೇ ಎಂದು ಹೇಳಬಹುದು. ತನ್ನ ಮಗಳ ಕಾರ್ಯದಕ್ಷತೆಯನ್ನೂ, ಚುರುಕುತನವನ್ನೂ, ಚಾಣಾಕ್ಷತೆಯನ್ನೂ ನೋಡಿ, ಕುಂತಿಭೋಜನು ಅವಳಿಗೆ ಅನುರೂಪವಾದ ಶಿಕ್ಷಣವನ್ನು ಕೊಟ್ಟು ಮೊದಲೇ ಥಳಥಳಿಸುವ ವಜ್ರಕ್ಕೆ ಶಿಕ್ಷಣದ ಕುಂದಣವಿಟ್ಟನು. ಅಂದ ಮೇಲೆ ಕೇಳುವದೇನು? ಈ ಪ್ರಕಾರ ಆಚಾರ ವಿಚಾರ ಮತ್ತು ಶಿಕ್ಷಣದಿಂದ ಪೃಥಾದೇವಿಯು ಬೇಕಾದ ಭಾರವನ್ನು ನಿರ್ವಹಿಸಲು ಯೋಗ್ಯಳಾದಳು. ಕೂಡಲೇ ಕುಂತಿಭೋಜನು ಅವಳ ಮೇಲೆ ಹೆಚ್ಚಿನ ಹೊಣೆಯ (Responsible) ಕೆಲಸಗಳನ್ನು ಅಂದರೆ ಅರಮನೆಯ ಆಯ-ವ್ಯಯ ವ್ಯವಸ್ಥೆ, ಬಂದ ಅತಿಥಿ-ಅಭ್ಯಾಗತರ ಆತಿಥ್ಯ, ಮುಂತಾದವುಗಳನ್ನು ಕುಂತೀದೇವಿಗೊಪ್ಪಿಸಿದನು. ಸಾರಾಂಶ, ಕುಂತೀದೇವಿಯು ಅರಮನೆಯ ಮಂತ್ರಿಯಾದಳು. ಈ ಸಮಯಕ್ಕೆ ಕುಂತೀದೇವಿಯ ವಯಸ್ಸು ೧೬-೧೭ ವರ್ಷ ಇರಬಹುದು. ಮೈಮೇಲೆ ಬಿದ್ದ ಕರ್ತವ್ಯಭಾರವೇನೋ ದೊಡ್ಡದು. ಅತಿಥಿಗಳಲ್ಲಿಯೂ ಎಷ್ಟೋ ಜನರು ವಿಕ್ಷಿಪ್ತರೂ, ಶೀಘ್ರಕೋಪಿಗಳೂ, ತಮ್ಮ ಸೇವೆಯಲ್ಲಿ ಸ್ವಲ್ಪ ವ್ಯತ್ಯಾಸವಾದಲ್ಲಿ ಶಾಪ ಕೊಡಲು ಸಿದ್ಧರಾದವರು; ಅಂದ ಮೇಲೆ ಇಂಥವರನ್ನು ಸೇವಿಸುವದು ಆ ಕಾಲಕ್ಕೆ ಎಷ್ಟು ಕಷ್ಟದ ಕೆಲಸ? ಮೇಲಾಗಿ, ಆ ಕಾಲಕ್ಕೆ ಶಾಪವು ಕೂಡಲೇ ಫಲಿಸುವದೆಂದು ಜನರ ತಿಳುವಳಿಕೆ ಇದ್ದುದರಿಂದ ಆತಿಥ್ಯ ಕೆಲಸದಲ್ಲಿ ಎಷ್ಟು ಜಾಗರುಕವಾಗಿರಬೇಕಾಗಿತ್ತೆಂಬುದನ್ನು ಹೇಳಲಿಕ್ಕೆ ಬೇಡ. ಅತಿಥಿಯು ಪ್ರೀತನಾದರೆ ಒಳಿತು; ಇಲ್ಲವಾದರೆ ಶಾಪದಿಂದ ಸರ್ವಸ್ವನಾಶವು ಕಟ್ಟಿಟ್ಟದ್ದೇ! ಇಂಥ ಬಿಕ್ಕಟ್ಟಿನ ಕೆಲಸವನ್ನು ಕುಂತಿಭೋಜನು ಪೃಥಾದೇವಿಯ ತಲೆಯ ಮೇಲೆ ಹೊರಿಸಿದ್ದು ಕುಂತೀದೇವಿಯ ದೊಡ್ಡ ಯೋಗ್ಯತೆಯನ್ನೇ ತೋರಿಸುವದಿಲ್ಲವೇ?

ಒಂದು ದಿನ ಕುಂತಿಭೋಜನ ಮನೆಗೆ ದುರ್ವಾಸ ಮಹಾಮುನಿಗಳು ಬಂದರು. ದುರ್ವಾಸರು ಮಹಾತಪಸ್ವಿಗಳು; ಅತಿ ಶೀಘ್ರ ಕೋಪಿಗಳು. ಅವರ ಶಾಪವು ಎಂದೂ ಸುಳ್ಳಾಗಲರಿಯದು. ಅದರಂತೆ ಅವರ ವರವೂ ಕೂಡಲೇ ಫಲಿಸತಕ್ಕಂಥದು. ಅವರು ಸಾಕ್ಷಾತ್ ಶಂಭುವಿನ ಅಂಶಸಂಭೂತರೆಂದು ಪ್ರಸಿದ್ಧಿಯಿತ್ತು. ಇಂಥವರ ಸೇವೆಯೆಂಬುದೇ ಬಹುಕಠಿಣ; ಅದರಲ್ಲಿ ಅವರನ್ನು ತೃಪ್ತಿಪಡಿಸುವದಂತೂ ತೀರ ಅಸಾಧ್ಯವೇ ಸರಿ. ಇಂಥವರು ಕುಂತಿಭೋಜನ ಮನೆಯಲ್ಲಿ ಬಂದು ಅಲ್ಲಿಯೇ ಕೆಲವು ಕಾಲ ವಾಸವಾಗಿರುವ ತಮ್ಮ ಅಪೇಕ್ಷೆಯನ್ನು ಕುಂತಿಭೋಜನಿಗೆ ತಿಳಿಸಿದರು. ದುರ್ವಾಸರಂಥ ಮಹಾತಪಸ್ವಿಗಳು ತಾವಾಗಿ ತನ್ನ ಮನೆಗೆ ಬಂದುದನ್ನು ಕಂಡು ಕುಂತಿಭೋಜನಿಗೆ ಆನಂದವೇನೋ ಆಯಿತು; ಆದರೆ ಅವರ ಆತಿಥ್ಯದ ಭಾರವು ಅತಿಕಠಿಣವಾದದ್ದು. ಅವರು ತುಷ್ಟರಾದರೆ ಎಲ್ಲವೂ ವಿಹಿತವೇ; ಇಲ್ಲವಾದರೆ ಪ್ರಾಣಸಂಕಟ. ಕುಂತಿಭೋಜನು ತನ್ನ ಮಗಳನ್ನು ಕರೆದು—"ತಂಗೀ ನಮ್ಮ ಭಾಗ್ಯವಶಾತ್ ಇಂದು ದುರ್ವಾಸರು ನಮ್ಮ ಮನೆಗೆ ಬರಮಾಡಿದ್ದಾರೆ. ಇವರು ಮಹಾತಪಸ್ವಿಗಳು. ಶಾಪಾನುಗ್ರಹಶಕ್ತಿಯುಳ್ಳವರು. ಅವರ ಸೇವೆಯಲ್ಲಿ ಯಾವ ತೆರದಿಂದಲೂ ಹೆಚ್ಚುಕಡಿಮೆಯಾಗಕೂಡದು. ಅವರ ಸಿಟ್ಟು ನಮ್ಮನ್ನು ಸುಟ್ಟೇಬಿಟ್ಟೀತು. ಬಹಳ ಹೇಳುವದೇನು ? ನೀನು ತಿಳಿದವಳೇ ಇರುವಿ. ಅವರನ್ನು ಸಂತೋಷಪಡಿಸುವದು ನಿನ್ನನ್ನೇ ಕೂಡಿದೆ" ಎಂದು ಹೇಳಿದನು. ಪೃಥಾದೇವಿಯು ಆಗಬಹುದೆಂದು ತಂದೆಗೆ ನಮಸ್ಕರಿಸಿ ಮುಂದಿನ ಕಾರ್ಯಕ್ಕೆ ತೊಡಗಿದಳು.

**ದುರ್ವಾಸರ ಆತಿಥ್ಯ– ಮಂತ್ರೋಪದೇಶ:–** ದುರ್ವಾಸರ ಆತಿಥ್ಯಕ್ಕಾಗಿ ಒಂದು ಬೇರೆ ಅತಿಥಿಶಾಲೆಯನ್ನೇ ಏರ್ಪಡಿಸಿ, ಆ ಮಹಾತ್ಮರ ಸೇವೆಗಾಗಿ ಅಲ್ಲಿ ಎಲ್ಲ ಬಗೆಯ ವ್ಯವಸ್ಥೆಯನ್ನೂ ಮಾಡಲಾಯಿತು. ದುರ್ವಾಸರು ಹೇಳಿ ಕೇಳಿ ವಿಕ್ಷಿಪ್ತರು. ಯಾವ ಕಾಲಕ್ಕೆ ಬಂದಾರು, ಏನು ಬೇಡಿಯಾರು, ಎಂಬುದು ಗೊತ್ತಿರಲಿಲ್ಲ. ಅಥವಾ ಅವರು ಹೇಳಿದ ಮಾತನ್ನು ಕೂಡಲೇ ನೆರವೇರಿಸದಿದ್ದರೆ ಶಾಪ ಕೊಡಲು

ಸಿದ್ಧರು. ಇಂಥವರು ಕೂಡ ಪೃಥಾದೇವಿಯ ವ್ಯವಸ್ಥೆಯನ್ನು ನೋಡಿ ಆನಂದಭರಿತರಾದರು. ಒಂದು ದಿನ ಅವರು ಪೃಥೆಯನ್ನು ಕರೆದು ಅಂದದ್ದು:- "ಅಮ್ಮಾ! ನಿಮ್ಮ ಅರಮನೆಯಲ್ಲಿ ಒಂದು ವರುಷ ಕಾಲ ನಿನ್ನ ಸೇವೆಯನ್ನು ಕೊಂಡು ಪ್ರೀತರಾದೆವು. ಕುಳಿತಲ್ಲಿ ಮಣೆ, ನಿಂತಲ್ಲಿ ನೀರು ಮಾಡಿ ನಮ್ಮನ್ನು ತೃಪ್ತಿಗೊಳಿಸಿದಿ. ನಮ್ಮ ಬಾಯಿಂದ ಬಂದ ಮಾತನ್ನು ತಡವಿಲ್ಲದೆ ನೆರವೇರಿಸಿದಿ. ಅತಿಥಿ ಸೇವೆಯಲ್ಲಿರುವ ನಿನ್ನ ದಕ್ಷತೆಯನ್ನು ನೋಡಿ ತುಂಬಾ ಆನಂದಿತರಾಗಿರುವೆವು. ಅದರಿಂದ ತಂಗೀ! ಹೋಗುವ ಕಾಲಕ್ಕೆ ನಿನಗೆ ಏನಾದರೂ ವರದಾನಮಾಡ ಬೇಕೆಂಬ ಇಚ್ಛೆಯಾಗಿದೆ. ನಿನ್ನ ಇಷ್ಟವನ್ನು ಬೇಡು." ಅವರ ನುಡಿ ಕೇಳಿ ಕುಂತೀದೇವಿಯು ಕೃತಾರ್ಥಳಾದಳು. ದುರ್ವಾಸರ ಸನ್ನಿಧಿ ಯಲ್ಲಿ ಕುಂತೀದೇವಿಯು ಬಿನ್ನವಿಸಿಕೊಂಡದ್ದು:- "ಸ್ವಾಮೀ ಏನು ಬೇಡುವದಿದೆ? ತಮ್ಮಂಥ ಅತಿಥಿಗಳು ಸಂತುಷ್ಟರಾದದ್ದು ನೋಡಿ ಧನ್ಯಳಾದೆ. ಇದೀಗ ನನಗೆ ಹೆಚ್ಚಿನ ವರಲಾಭವು. ತಮ್ಮಂಥವರ ಸೇವೆಯೇ ದುರ್ಲಭ. ಅದರ ಲಾಭವೇ ವರಪ್ರದಾನವು. ತಮ್ಮ ಆಶೀರ್ವಾದದಿಂದ ಎಲ್ಲವೂ ಇದೆ. ಬೇಡುವದೇನು? ಪರಮಾತ್ಮನಲ್ಲಿ ಭಕ್ತಿ, ಸಾಧುಸಂತರ ಸೇವೆ." ಕುಂತೀದೇವಿಯ ವಿನಯಪೂರ್ವಕ ವಾದ ಮಾತು ಕೇಳಿ ದುರ್ವಾಸರು ಅಂದದ್ದು:— ಅಮ್ಮಾ! ನೀನು ನಿಜವಾಗಿಯೂ ಧನ್ಯಳು. ನಿನ್ನ ತಂದೆಯಾದ ಕುಂತಿಭೋಜನೂ ಧನ್ಯನು. ನಮ್ಮ ಜ್ಞಾನದೃಷ್ಟಿಯಿಂದ ಮುಂದಿನ ಸಂಗತಿಯನ್ನು ತಿಳಿದು ನಿನಗೆ ಐದು ಮಂತ್ರಗಳನ್ನು ಉಪದೇಶಿಸುವೆವು. ಆ ಮಂತ್ರ ಗಳನ್ನು ಜಪಿಸಿದ ಕ್ಷಣಕ್ಕೆ ಆಯಾ ಮಂತ್ರಾಭಿಮಾನಿ ದೇವತೆಗಳ ಯೋಗಮಾಯಾಬಲದಿಂದ ನಿನ್ನಲ್ಲಿ ಗರ್ಭೋತ್ಪತ್ತಿಯಾಗುವದು. ಈ ಮಂತ್ರಗಳನ್ನು ಸ್ವೀಕರಿಸು" ಎಂದು ಹೇಳಿ ದುರ್ವಾಸಮುನಿಗಳು ಕುಂತೀದೇವಿಗೆ ಐದು ಮಹಾ ಮಂತ್ರಗಳನ್ನು ಬೋಧಿಸಿ ಹೊರಟು ಹೋದರು. ದುರ್ವಾಸರು ತುಷ್ಟರಾದುದನ್ನು ಕಂಡು ಕುಂತಿಭೋಜ ನಿಗೂ ಬಹು ಆನಂದವಾಯಿತು.

**ಕರ್ಣಜನ್ಮ:** - ಪೃಥಾದೇವಿಯು ಇನ್ನೂ ಚಿಕ್ಕವಳು. ಅವಳ ಹುಡುಗಾಟಿಕೆ ಇನ್ನೂ ಅಡಗಿರಲಿಲ್ಲ. ಹುಡುಗೆತನಕ್ಕೆ ಸಹಜವಾದ ಕುತೂಹಲ ಗುಣವೂ ಅವಳಲ್ಲಿ ಸಂಪೂರ್ಣವಾಗಿತ್ತು. ಒಂದು ದಿವಸ ನಸುಕಿನಲ್ಲಿ ಎದ್ದು, ತನ್ನ ಕೋಣೆಯ ಕಿಟಕಿಯಿಂದ ಹೊರಗೆ ನೋಡುತ್ತಿದ್ದಳು. ಜಗವೆಲ್ಲ ಶಾಂತಿಸುಖದಲ್ಲಿ ಮುಳುಗಿತ್ತು. ಅರಮನೆಯ ಉಪ್ಪರಿಗೆಯ ಮೇಲಿಂದ ಕಾಣುವ ಆ ರಮಣೀಯ ನೋಟವು ಬಹು ಆಲ್ಹಾದದಾಯಕವಾಗಿತ್ತು. ಕುಂತಿಯು ನಿಂತಿರುವ ಕೋಣೆಯಾದರೂ ಮೇಲುಪ್ಪರಿಗೆಯ ಮೇಲಿದ್ದು ಅವಳು ಹೊರನೋಡುತ್ತಿರುವ ಕಿಟಕಿಯು ಪೂರ್ವಾಭಿಮುಖವಾಗಿತ್ತು. ಅದೇ ನೋಟದ ಭಾಗದಲ್ಲಿ ಅಶ್ವಾನದಿಯು ಅಶ್ವಮಂತ್ರವನ್ನು ಪಠಿಸುತ್ತ ಹರಿಯುತ್ತಿತ್ತು. ಅರುಣೋದಯದ ಕಾಲವು ಮೀರಿ ಸೂರ್ಯೋದಯವಾಗಿತ್ತು. ಬಾಲಸೂರ್ಯನ ಆರಕ್ತಮೂರ್ತಿಯನ್ನು ನೋಡಿ ಆ ಸುತ್ತುಮುತ್ತಲಿನ ಕತ್ತಲೆಯ ಪಿಡುಗು ಹೋಯಿತು. ತನ್ನ ಪ್ರಿಯತಮನಾದ ಭಗವಾನ್ ಆದಿತ್ಯನು ಬಂದನು; ಇನ್ನೇತರ ಚಿಂತೆ? ಎಂಬಂತೆ ಲಜ್ಜಾಯುಕ್ತವಾದ ಸೃಷ್ಟಿಯು ಮುಗುಳುನಗೆಯನ್ನು ಧರಿಸಿದ್ದರಿಂದ ಮುಖಕಮಲದ ಮೇಲೆಲ್ಲ ಗುಲಾಬಿಯ ಬಣ್ಣವು ಅಡರಿದಂತೆ ತೋರುತ್ತಿತ್ತು. ಆ ಬಾಲರವಿಯ ದಿವ್ಯದರ್ಶನದಿಂದ ಕುಂತಿಯ ಮನವೂ ಆನಂದದಿಂದ ತುಳುಕಿತು. ದುರ್ವಾಸರು ಕೊಟ್ಟ ಮಂತ್ರದಲ್ಲಿ ಸೂರ್ಯಮಂತ್ರವೂ ಒಂದಾಗಿತ್ತು. ಕುಂತಿಯ ಕೌತೂಹಲವು ಹೆಚ್ಚಿತು. ದುರ್ವಾಸರ ಮಂತ್ರದಿಂದ ಭಗವಾನ್ ಸೂರ್ಯನು ಪ್ರತ್ಯಕ್ಷನಾಗುವನೇ? ಆ ಅರುಣಮೂರ್ತಿಯಾದರೂ ಎಂತಹದಿರಬಹುದು! ಜಪಿಸಿ ನೋಡಲ್ಯಾ? ನೋಡಿದರೆ ಏನು ತಪ್ಪು? ಹೀಗೆಂದುಕೊಂಡು ದುರ್ವಾಸಮುನಿಯ ಮಂತ್ರದ ಪ್ರಭಾವವಾದರೂ ಹೇಗಿದೆ ಎಂಬುದನ್ನು ಪರೀಕ್ಷಿಸುವ ಇಚ್ಛೆಯಿಂದಲೂ ದುರ್ವಾಸರು ಕೊಟ್ಟ ಸೂರ್ಯಮಂತ್ರವನ್ನು ಜಪಿಸಬೇಕೆಂದು ನಿರ್ಧರಿಸಿ ಹಾಗೇ ತನ್ನ ವಿಶ್ರಾಂತಿಯ ಕೋಣೆಯಲ್ಲಿ ಹೋಗಿ ಒಬ್ಬಳೇ ಕುಳಿತು ಸೂರ್ಯಮಂತ್ರವನ್ನು ಪಠಿಸಲು ಪ್ರಾರಂಭಮಾಡಿದಳು. ಕೂಡಲೆ ಮಂತ್ರಪ್ರಭಾವವು

ಕಂಡುಬರಹತ್ತಿತು. ಭಗವಾನ್ ಆದಿತ್ಯನು ತನ್ನ ಯೋಗಮಾಯಾ ರೂಪದಿಂದ ಬಂದು ಪೃಥಾದೇವಿಗೆ ದರ್ಶನಕೊಟ್ಟನು. ಕುಂತಿಯು ಬೆಚ್ಚಿ ಬೆರಗಾಗಿ ಆದಿತ್ಯನ ಸ್ತೋತ್ರಮಾಡಿ ಅಂದದ್ದು:- "ಹೇ ಭಗವನ್, ಕೇವಲ ಹುಡುಗೆತನದ ಜಿಜ್ಞಾಸೆಯಿಂದ ಮಂತ್ರದ ಪ್ರಭಾವವಾದರೂ ಹೇಗಿದೆ ಎಂಬುದನ್ನು ನೋಡಲು ಆ ಬ್ರಾಹ್ಮಣನು ಉಪದೇಶಿಸಿದ ಮಹಾಮಂತ್ರವನ್ನು ನಾನು ಜಪಿಸಿದ್ದಕ್ಕೆ ಕ್ಷಮೆಯಿರಲಿ." ಭಗವಾನ್ ಸೂರ್ಯ:— "ಹೇ ಶುಭವತಿ, ದುರ್ವಾಸ ಮುನಿಯ ಮಂತ್ರವೇ ನನ್ನನ್ನು ಇಲ್ಲಿ ಬರಮಾಡಿದೆ. ಅದರಂತೆ ನಿನಗೆ ನನ್ನ ಯೋಗಮಾಯಾರೂಪದಿಂದ ಪುತ್ರೋತ್ಸವವಾಗುವದು." ಈ ಮಾತನ್ನು ಕೇಳಿದ ಕೂಡಲೆ ಕುಂತಿಯ ಎದೆ ಝಲ್ಲೆಂದಿತು. ಗಾಬರಿಯಾಗಿ ಕುಂತೀದೇವಿಯು ಅಂದದ್ದು "ಹೇ ಭಗವನ್, ಅಬಲೆಯ ತಪ್ಪನ್ನು ಕ್ಷಮಿಸಬೇಕು. ನಾನು ಇನ್ನೂ ತಂದೆಯ ಮನೆಯಲ್ಲಿದ್ದ ಕುಮಾರಿಯು. ಇಂಥ ಅವಸ್ಥೆಯಲ್ಲಿ ಪುತ್ರೋತ್ಸವವೇ? ಕ್ಷಮಿಸಿರಿ. ಬಾಲ್ಯಾವಸ್ಥೆಗೆ ಸಹಜವಾದ ಕುತೂಹಲದ ಪ್ರಮಾದವನ್ನೂ ಅತಿ ಜಿಜ್ಞಾಸೆಯನ್ನೂ ಕ್ಷಮಿಸಿರಿ" ಎಂದು ಮೇಲಿಂದ ಮೇಲೆ ಬೇಡಿಕೊಳ್ಳಹತ್ತಿದಳು. ಬಾಲೆಯ ದೈನ್ಯಾವಸ್ಥೆಯನ್ನು ನೋಡಿ ಭಗವಾನ್ ಸೂರ್ಯನು ಅಂದದ್ದು "ಹೆ ಭೀರು, ಬೆದರಬೇಡ. ದುರ್ವಾಸರ ಮಂತ್ರವು ಸುಳ್ಳಾಗಲರಿಯದು. ನನ್ನನ್ನು ಅನಾದರಿಸಿ ಹಿಂದಟ್ಟಿದರೆ ಮಂತ್ರಫಲವನ್ನು ವ್ಯರ್ಥಗೊಳಿಸಿದ ನಿನ್ನ ಪಾಪವು ದುರ್ವಾಸರ ತಲೆ ತಿನ್ನುವದು. ನಿನ್ನ ಕೌಮಾರಾವಸ್ಥೆಯು ನಷ್ಟವಾಗುವದೆಂದು ಅಂಜಬೇಡ. ನನ್ನ ಪ್ರಭಾವದಿಂದ ಕೌಮಾರಾವಸ್ಥೆಯು ನಿನಗೆ ಇದ್ದಕಿದ್ದಂತೆ ಮತ್ತೆ ಲಭಿಸುವದು. ಇದರಿಂದ ಯಾವ ಪಾಪವೂ ನಿನಗೆ ತಟ್ಟದು. ಚಿಂತೆ ಬಿಡು. ಮಂತ್ರದ ಫಲವನ್ನು ತೆಗೆದುಕೋ. ಅನಾದರದ ಪಾಪವು ದುರ್ವಾಸರಿಗೆ ತಟ್ಟುವದು. ಪಾಪದ ಲೇಶವೂ ನಿನಗೆ ಸೋಂಕದು." ಇವೇ ಮುಂತಾದ ಆದಿತ್ಯನ ಮಾತುಗಳನ್ನು ಕೇಳಿ ಕುಂತೀದೇವಿಯು ಕಡೆಗೆ ಮಂತ್ರಫಲವನ್ನು ಸ್ವೀಕರಿಸಿದಳು. ದೇವಗರ್ಭವು ಕೂಡಲೇ ಫಲಿಸುವದಂತೆ? ಅದರಂತೆ ಕುಂತೀದೇವಿಗಾದರೂ ಕೂಡಲೇ ಪುತ್ರೋ

ತ್ಪತ್ತಿಯಾಯಿತು, ಮತ್ತು ಭಗವಾನ್ ಆದಿತ್ಯನ ವರಬಲದಿಂದ ಪುನಃ ಕೌಮಾರಾವಸ್ಥೆಯು ಪ್ರಾಪ್ತವಾಯಿತು. ಕುಂತೀದೇವಿಯ ಈ ಚೊಚ್ಚಲ ಮಗನೇ ಮುಂದೆ ಕರ್ಣನೆಂಬ ಹೆಸರಿನಿಂದ "ಕಡುಗಲಿಯೂ, ದಾನಶೂರನೂ'' ಎಂದು ಹೆಸರುವಾಸಿಯಾದನು.

ದುರ್ಯೋಧನನ ಪರಮಮಿತ್ರನೂ ಅರ್ಜುನನ ಕಡು ವೈರಿಯೂ ಆದ ಕರ್ಣನು ಇವನೇ. ಕರ್ಣನು ಕವಚ ಕುಂಡಲ ಸಹಿತವಾಗಿಯೇ ಹುಟ್ಟಿದನು. ಈ ಮಗುವಿನ ಸುಂದರ ರೂಪ, ದಿವ್ಯತೇಜಸ್ಸು, ಕೋಮಲಾವಯುವ ಮುಂತಾದ್ದನ್ನು ನೋಡಿ ಕುಂತೀದೇವಿಗೆ ಪುತ್ರವ್ಯಾಮೋಹವು ಉಂಟಾಯಿತು; ಆದರೆ ಮಾಡುವದೇನು ? ಜನನಿಂದೆಯ ಭೀತಿ ! ಆಪ್ತೇಷ್ಟರೂ ಬಂಧು ಬಳಗದವರೂ ಏನೆಂಬುವರೆಂಬ ನಾಚಿಕೆ ! ಇವೆರಡರಿಂದ ಹುಟ್ಟಿದ ಮಾನಹಾನಿಯ ಅಂಜಿಕೆಯು ಮಗುವಿನ ಮಮತೆಯನ್ನು ಮೂಲಿಗೊತ್ತಿತು. ಏಕಾಂತದಲ್ಲಿ ಕುಳಿತು ಹೀಗೆ ನಿರ್ಧರಿಸಿದಳು. "ಮಗುವನ್ನು ಮರೆಮಾಡಬೇಕು. ಮಾನವನ್ನು ಕಾಯ್ದುಕೊಳ್ಳಬೇಕು; ಇಲ್ಲವಾದರೆ ನನ್ನ ಕೀರ್ತಿಯ ಕಲಂಕವು ನನ್ನನ್ನು ನುಂಗುವದು; ಇಷ್ಟೇ ಅಲ್ಲ ನನ್ನ ಕುಲ, ಜಾತಿ, ಮನೆತನಕ್ಕೂ ಮಸಿ ಹಚ್ಚುವದು. ಸರಿ! ಗೊತ್ತಾಯಿತು.'' ಕೂಡಲೇ ಒಂದು ದೊಡ್ಡ ಬುಟ್ಟಿಯನ್ನು ತೆಗೆದುಕೊಂಡು ತನ್ನ ಕೋಮಲ ಮಗುವನ್ನು ಅದರಲ್ಲಿರಿಸಿ, ಅದನ್ನು ತನ್ನ ಕಡಿಕಣ್ಣೀರಿಂದ ಹರಸಿದಳು; ಮುಂದೆ ಆ ಮಗುವು ಮಂದಿಯ ಕೈಗೆ ಸೇರಿದರೆ ಅದರ ಜೋಪಾನಕ್ಕೆಂದು ಮುತ್ತು ಮಾಣಿಕ ಮುಂತಾದ ಬೆಲೆಯುಳ್ಳ ಪದಾರ್ಥಗಳನ್ನು ಅದರಲ್ಲಿ ಶೇಖರಿಸಿದಳು. ಸದ್ದಿಲ್ಲದೆ ಬುಟ್ಟಿಯನ್ನು ಅಶ್ವಾದಂಡೆಗುಂಟ ಮೆಲ್ಲಗೆ ಬಿಟ್ಟಳು ಯಾವಾತನ ವರಪ್ರಸಾದದಿಂದ ಆ ಮಗುವಿನ ಉತ್ಪತ್ತಿಯಾಗಿತ್ತೋ ಆ ಭಗವಾನ್ ಸೂರ್ಯನಾರಾಯಣನ ಕೃಪೆಯ ದೃಷ್ಟಿಯು ಮೇಲೆ; ಕೆಳಗೆ ಅನಂತ ಜಲರಾಶಿ ! ಈ ಮೇರೆಗೆ ಸೂರ್ಯ ಹಾಗೂ ವರುಣ ದೇವತೆಗಳ ಕಣ್ಣರಿಕೆಯಲ್ಲಿ ಮಗುವಿದ್ದ ಆ ಬುಟ್ಟಿಯು ತೇಲುತ್ತ ನಡೆಯಿತು. ಕುಂತೀದೇವಿಯು ಮರೆಯಾಗಿ ನಿಂತು ಜಡಹೃದಯದಿಂದ ಆ ಬುಟ್ಟಿಯನ್ನು ಆರ್ತದೃಷ್ಟಿ

ಯಿಂದ ನೋಡುತ್ತಿರಬಹುದು. ಬುಟ್ಟಿಯು ಕಣ್ಣುಮರೆಯಾದ ಕೂಡಲೇ ಕುಂತೀದೇವಿಯು ತನ್ನ ಪರಮ ವಿಶ್ವಾಸದ ಸಖಿಯೊಡನೆ ಮನೆಯ ದಾರಿ ಹಿಡಿದಳು. ಮಾನ, ಜನಲಜ್ಜೆಯ ಭೀತಿ, ಇವೆರಡೂ ಮಾತೆಯ ಪುತ್ರಮಾಯೆಯನ್ನು ಮಣ್ಣುಪಾಲು ಮಾಡಿದವು. ಭಗವಾನ್ ಆದಿತ್ಯನ ವರಪುತ್ರನು; ವೃಷ್ಣಿಕುಲ ಸಾಧ್ವಿಯ ಗರ್ಭದಲ್ಲಿ ಜನ್ಮ; ಹುಟ್ಟಿದ್ದು ಅರಮನೆ; ಈಗ ಲೋಲಾಡುವದು ಅನಂತ ಜಲರಾಶಿಯಲ್ಲಿ. ದೇವರ ಮಹಿಮೆಯೇ ಅಗಾಧವಾದುದು ! ಮುಂದೆ ಆ ಮಗುವು ಧೃತರಾಷ್ಟ್ರನ ಸಾರಥಿಯಾದ ಅಧಿರಥನ ಕೈಸೇರಿತು. ಅಧಿರಥನಿಗೂ ಅವನ ಮಡದಿಯಾದ ರಾಧಾದೇವಿಗೂ ಮಕ್ಕಳಿರಲಿಲ್ಲ. ಅವರು ಆ ಮಗುವನ್ನು ಅಕ್ಕರತೆಯಿಂದ ಜೋಪಾನ ಮಾಡಿದರು. ಅದಕ್ಕೆ ವಸುಸೇನನೆಂದು ಹೆಸರಿಟ್ಟರು; ಮುಂದೆ ಕರ್ಣ, ರಾಧೇಯ, ಸೂತಪುತ್ರ ಮುಂತಾದ ಹೆಸರುಗಳಿಂದ ಪ್ರಸಿದ್ಧಿಗೆ ಬಂದ ವಸುಸೇನನು ಇವನೇ.

---

## ೨ನೆಯ ಪ್ರಕರಣ

# ಪಾಂಡವರ ಜನ್ಮ

**ಸ್ವಯಂವರ ಸಮಾರಂಭ:–** ಕುಂತೀದೇವಿಯು ಪೂರ್ಣ ಹರೆಯಕ್ಕೆ ಬಂದಳು. ಆಗ ಆಕೆಗೆ ಸುಮಾರು ೧೮-೧೯ ವರುಷ ! ಆದಾಗ್ಯೂ ಇನ್ನೂ ಕುಮಾರಿಯೇ ! ಆ ಕಾಲಕ್ಕೆ ಈಗಿನ ಹಾಗೆ ಬಾಲವಿವಾಹವು ನಡೆಯುತ್ತಿರಲಿಲ್ಲ. ಹೆಣ್ಣುಮಕ್ಕಳು ತುಂಬ ವಯಸ್ಸಿಗೆ ಬಂದ ನಂತರವೇ ಅವರ ವಿವಾಹವು ಸ್ವಯಂವರದಿಂದಾಗಲೀ ತಂದೆ ತಾಯಿಗಳಿಂದಾಗಲೀ ಪರಸ್ಪರ ಪ್ರೀತಿಯಿಂದಾಗಲೀ ಆಗುತ್ತಿತ್ತು. ಸಮಾಜದ ಮುಖ್ಯ ಅವ

ಯುವಗಳೆಂದೆನಿಸುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಗಗಳಲ್ಲಿಯೂ ಪ್ರೌಢವಿವಾಹವೇ ಪ್ರಚಲಿತವಿತ್ತೆಂಬುದು ಆಯಾಕಾಲದ ಐತಿಹಾಸಿಕ, ಪೌರಾಣಿಕ ಸಂಗತಿಗಳ ಮೇಲಿಂದ ಅತಿ ನಿಚ್ಚಳವಾಗಿ ಕಾಣುತ್ತದೆ. ಶುಕ್ರಾಚಾರ್ಯರ ಮಗಳಾದ ದೇವಯಾನಿಯ ವಿವಾಹವಾದರೂ ಪ್ರೌಢಾವಸ್ಥೆಯಲ್ಲಿಯೇ ಆಯಿತು; ಕ್ಷತ್ರಿಯರ ಉದಾಹರಣೆಗಳಂತೂ ಬೇಕಾದಷ್ಟು ದೊರಕುವವು. ಇರಲಿ, ಶುಕ್ಲಪಕ್ಷದ ಚಂದ್ರನಂತೆ ದಿನ ದಿನಕ್ಕೂ ಸರ್ವಕಳೆಯಿಂದ ಬೆಳೆಯುತ್ತಿರುವ ತನ್ನ ಮುದ್ದು ಗೌರಿಗೆ ಯೋಗ್ಯವರನು ಹೇಗೆ ದೊರಕುವನೆಂದು ಕುಂತಿಭೋಜನಿಗೊಂದು ಚಿಂತೆ; ಕೊನೆಯಲ್ಲಿ ತನ್ನ ಮಗಳ ವಿವಾಹವನ್ನು ಸ್ವಯಂವರದಿಂದಲೇ ನಡಿಸಲು ನಿಶ್ಚಯಿಸಿ ಅದಕ್ಕಾಗಿ ಸಿದ್ಧತೆ ನಡಿಸಿದನು. ದೇಶದೇಶದ ರಾಜರುಗಳಿಗೆಲ್ಲ ಸ್ವಯಂವರದ ಆಮಂತ್ರಣ ಪತ್ರಿಕೆಗಳು ಕಳುಹಲ್ಪಟ್ಟವು. ಒಂದು ಭವ್ಯವಾದ ಸ್ವಯಂವರಮಂಟಪವೂ ಸಿದ್ಧವಾಯಿತು. ಸ್ವಯಂವರ ಮಂಟಪವು ಚಿತ್ರವಿಚಿತ್ರ, ಕಲಾಕೌಶಲ್ಯಯುಕ್ತವಾದ ಕುಸುರಿನ ಕೆಲಸದಿಂದ ಒಳ್ಳೇ ಮನೋಹರವಾಗಿ ಒಪ್ಪುತ್ತಿತ್ತು. ಗೊತ್ತುಪಡಿಸಿದ ದಿನ ದೇಶದೇಶದ ರಾಜರು ಸ್ವಯಂವರ ಮಂಟಪದಲ್ಲಿ ಬಂದು ತಮ್ಮ ತಮ್ಮ ಆಸನಗಳಲ್ಲಿ ಕುಳಿತರು. ಮಂಗಲಸ್ನಾನಾನಂತರ ಸರ್ವಗುಣ ಮಂಡಿತಳಾದ ಸಾಧ್ವಿ ಶಿರೋಮಣಿ ಕುಂತೀದೇವಿಯು ಸಭಾಮಂಟಪಕ್ಕೆ ಬಂದಳು. ಎರಳೆಗಣ್ಣಿನ ಆ ಬಾಲೆಯ ಮನೋಹರ ರೂಪವನ್ನು ನೋಡಿ ಎಲ್ಲರೂ ಮೋಹಿತರಾದರು. ಸ್ವಯಂವರಕ್ಕೆ ಬಂದ ರಾಜರಲ್ಲಿ ಭರತಕುಲೋತ್ಪನ್ನನಾದ ರಾಜ–ಶಾರ್ದೂಲ ಪಾಂಡುರಾಜನೊಬ್ಬನಾಗಿದ್ದನು. ಪಾಂಡುರಾಜನು ಹರವು ಎದೆಯುವನೂ, ಮಹಾ ಬಲವಂತನೂ, ವಿಶಾಲ ನೇತ್ರನೂ, ಸಿಂಹದಂತೆ ದರ್ಪವುಳ್ಳವನೂ ಆಗಿದ್ದನು. ತನ್ನ ಪ್ರಭಾವದಿಂದ ಆ ರಾಜಮಂಡಲದಲ್ಲಿ ಪ್ರತಿ ಸೂರ್ಯನಂತೆಯೂ, ದೇವಮಂಡಲದಲ್ಲಿ ದೇವೇಂದ್ರನಂತೆಯೂ ಶೋಭಿಸುತ್ತಿದ್ದನು. ಪಾಂಡುರಾಜನ ಮನೋಹರ ಮದನ ಮೂರ್ತಿಯನ್ನು ನೋಡಿ ಕುಂತೀದೇವಿಯು ಆತನ ಕೊರಳಲ್ಲಿಯೇ ಮಾಲೆ ಹಾಕಿದಳು. ಆನಂತರ ಕುಂತೀಭೋಜನು ವಿಧಿಪೂರ್ವಕವಾಗಿ ಅವರಿಬ್ಬರ ವಿವಾಹವನ್ನು ಒಳ್ಳೇ ಸಡಗರದಿಂದ ಮಾಡಿ ತನ್ನ ಯೋಗ್ಯತೆಯ ಮೇರೆಗೆ ಉಡುಗರೆ

ಉಪಚಾರವನ್ನು ಕೊಟ್ಟು ವಧು-ವರರನ್ನು ಹರಸಿ ಕಳುಹಿಸಿದನು; ಈ ಸುದ್ದಿಕೇಳಿ ಹಸ್ತಿನಾಪುರದಲ್ಲಿ ಆನಂದವೇ ಆನಂದ. ಎಲ್ಲಿನೋಡಿದರೂ ಕುಂತೀ-ಪಾಂಡುರಾಜರ ಸ್ವಾಗತದ ಸಿದ್ಧತೆಯು ಬಲವತ್ತರವಾಗಿ ನಡೆಯಿತು. ಎಲ್ಲರೂ ಉತ್ಸುಕತೆಯಿಂದ ನವ ವಧು-ವರರಿಗಾಗಿ ಕಾಯ್ದಿದ್ದರು. ಪಾಂಡುರಾಜನು ಕುಂತೀದೇವಿಯ ಸಮೇತನಾಗಿ ಪಟ್ಟಣದ ಅಗಸೆಯ ಬಾಗಿಲಕ್ಕೆ ಬಂದೊಡನೆ ಪೌರಜನರು ನಾನಾತರದ ಆನಂದವಾದ್ಯಗಳಿಂದಲೂ ಬ್ರಾಹ್ಮಣ-ಮಹರ್ಷಿಗಳು ವೇದೋಕ್ತ ಆಶೀರ್ವಾದದಿಂದಲೂ ಅವರನ್ನು ಒಳ್ಳೇ ವೈಭವದಿಂದ ಕರೆತಂದರು. ಪಾಂಡುರಾಜನು ತನ್ನ ಪ್ರಿಯ ಪತ್ನಿಯನ್ನೊಡಗೂಡಿ ರಾಜಮಂದಿರದಲ್ಲಿ ಸುಖದಿಂದ ಇರಹತ್ತಿದನು.

**ಮಾದ್ರಿಯ ಲಗ್ನ-ಪಾಂಡುರಾಜನ ದಿಗ್ವಿಜಯ:-** ಪ್ರಾಚೀನ ಕಾಲದಲ್ಲಿ ಹಿಂದೂಜನರು ಏಕಪತ್ನೀ ವ್ರತರಾಗಿರಲಿಲ್ಲ; ಅಲ್ಲದೆ ಒಬ್ಬರಿಗಿಂತ ಹೆಚ್ಚು ಹೆಂಡರಿರುವದು ಒಂದು ತರದ ಭೂಷಣವೇ ಎಂದು ಅವರು ತಿಳಿಯುತ್ತಿದ್ದರು. ಈ ಬಹು ಪತ್ನೀಕತ್ವವು ಒಂದಾನೊಂದು ಕಾಲಕ್ಕೆ ಅತಿ ಪ್ರಬಲವಾಗಿತ್ತು. ಪುಣ್ಯಪ್ರತಾಪಿಯಾದ ಭಗವಾನ್ ಶ್ರೀರಾಮಚಂದ್ರನೊಬ್ಬನೇ ಇದಕ್ಕೆ ಅಪವಾದವು. ರಾಮಚಂದ್ರನು ತನ್ನ ಏಕಪತ್ನೀವ್ರತವನ್ನು ಎಡೆಬಿಡದೆ ಕಡೆಯವರೆಗೂ ಪಾಲಿಸಿದನು; ರಾಜರ ಈ ಬಹು ಪತ್ನಿಕಾಚರಣೆಯ ಅನುಕರಣವೇ ಸಾಮಾನ್ಯ ಜನರಲ್ಲಿಯೂ ರೂಢವಾಯಿತು; ಮುಂದೆ ಬರುಬರುತ್ತ ಬಹುಪತ್ನೀವ್ರತವು ದೊಡ್ಡಸ್ತಿಕೆಯ ಒಂದು ಲಕ್ಷಣವೇ ಆಯಿತು. ಮುಸಲ್ಮಾನ ಬಾದಶಹರ ಜನಾನಖಾನೆಗಳಂತೂ ಪ್ರಸಿದ್ಧವೇ ಇರುವವು; ಪಾಶ್ಚಿಮಾತ್ಯ ದೇಶಗಳಲ್ಲಿಯೂ ಆಕಾಲಕ್ಕೆ ಇದೇ ವಾಡಿಕೆಯಾಗಿತ್ತು. ಮುಂದೆ ಕ್ರಿಸ್ತೀಧರ್ಮದ ಪ್ರಚಾರಣೆಯನಂತರ ಲಗ್ನದ ಹೆಂಡತಿಯು ಒಬ್ಬಳೇ ಎಂದು ನಿರ್ಬಂಧವಾದರೂ ಲಗ್ನವಾಗದ ಹೆಂಡಂದಿರು ಯುರೋಪಿಯ ದರ್ಬಾರದಲ್ಲಿ, ರಾಜಮಂದಿರದಲ್ಲಿ ಬಹು ಜನರಿರುತ್ತಿದ್ದರು. ಇದು ಬಹುಪತ್ನೀವ್ರತದ ರೀತಿಗಿಂತಲೂ ಶೋಚನೀಯವು. ಫ್ರಾನ್ಸದೇಶದ ೧೪ನೇ ಲುಯಿಯ ದರ್ಬಾರವಂತೂ ಈ ವಿಷಯದಲ್ಲಿ ಅತಿ ಪ್ರಸಿದ್ಧವಿದ್ದಿತು. ಇರಲಿ, ಹಿಂದಕ್ಕೆ ಬಹುಪತ್ನಿಕತ್ವವು ಈಗಿನಂತೆ ತಿರಸ್ಕರಣೀಯವಾಗಿರಲಿಲ್ಲವೆಂಬುದು ನಿಜ; ಮೇಲಿನ ಈ ಪುರಾಣ ಮತಕ್ಕನುಸರಿಸಿಯೇ ಭೀಷ್ಮನು

ಪಾಂಡುರಾಜನಿಗೆ ಮತ್ತೊಂದು ಲಗ್ನವನ್ನು ಮಾಡುವದಾಗಿ ನಿಶ್ಚಯಿಸಿದನು. ಆಪ್ರಕಾರ ಮದ್ರದೇಶದ ರಾಜನಾದ ಶಲ್ಯನ ರಾಜಸಭೆಗೆ ತಾನೇ ಸ್ವತಃ ತೆರಳಿದನು. ಮದ್ರರಾಜಶಲ್ಯನಿಗೆ ಮಾದ್ರಿ ಎಂಬ ತಂಗಿಯಿದ್ದಳು. ಭೀಷ್ಮನು ಶಲ್ಯನಲ್ಲಿ ಪಾಂಡುರಾಜನಿಗಾಗಿ ಮಾದ್ರಿಯನ್ನು ಕೇಳಿದನು. ಶುಲ್ಕವನ್ನು (ಕನ್ಯಾದಕ್ಷಿಣೆ) ಕೊಟ್ಟು ಮಾದ್ರಿಯನ್ನು ತಂದು ಪಾಂಡುರಾಜನಕೂಡ ಅವಳ ಲಗ್ನವನ್ನು ನೆರವೇರಿಸಿದನು. ಈ ಪ್ರಕಾರ ಕುಂತೀದೇವಿಗೆ ಪ್ರಾರಂಭಕ್ಕೇ ಒಳ್ಳೇರೂಪವತಿಯಾದ ಸವತಿಯು ಲಭಿಸಿದಳು. ಆದರೆ ಅದರಿಂದ ಪಾಂಡುರಾಜನಿಗೆ ಮಾತ್ರ ಈ ಕಾಲದಲ್ಲಿ ಇಬ್ಬರು ಹೆಂಡರಕಾಟದಲ್ಲಿ ತೊಳಲಾಡುವ ಗಂಡಂದಿರಿಗಾಗುವ ತಾಪವು ಎಳ್ಳಷ್ಟಾದರೂ ತಟ್ಟಲಿಲ್ಲ; ಇದಕ್ಕೆ ಕಾರಣವೆಂದರೆ ಕುಂತೀ ಮಾದ್ರಿಯರಲ್ಲಿ ಸವತಿಮತ್ಸರದ ಲವಲೇಶ ಮಾತ್ರವಾದರೂ ಇರಲಿಲ್ಲವೆಂಬುದೇ. ಅವರಿಬ್ಬರು ಒಡಹುಟ್ಟಿದ ಅಕ್ಕ ತಂಗಿಯರಿಗಿಂತಲೂ ಹೆಚ್ಚು ಪರಸ್ಪರರನ್ನು ಪ್ರೀತಿಸುತ್ತಿದ್ದರು. ಯಾವಾಗಲೂ ಪಾಂಡುರಾಜನ ಹಿತವೇ ಅವರ ಲಕ್ಷ್ಯವಾಗಿತ್ತು. ಪಾಂಡುರಾಜನು ಮಾದ್ರಿಯನ್ನು ಮದುವೆಯಾದನಂತರ ಕುಂತೀ-ಮಾದ್ರಿಯರಕೂಡ ಒಂದು ತಿಂಗಳತನಕ ಒಳ್ಳೇವಿಲಾಸದಲ್ಲಿ ಕಾಲ ಕಳೆದನು. ಅನಂತರ ಅದನ್ನೆಲ್ಲ ಬದಿಗಿರಿಸಿ ದಿಗ್ವಿಜಯಕ್ಕೆ ಹೊರಟನು. ಪಾಂಡುರಾಜನು ಮಹಾ ಪರಾಕ್ರಮಿಯು, ಧನುರ್ವಿದ್ಯೆಯಲ್ಲಿ ಅತಿ ವಿಶಾರದನು. ಭೀಷ್ಮಪಿತಾಮಹನ ಕೈಯಲ್ಲಿ ಕಲಿತವನು; ಅಂದಮೇಲೆ ಕೇಳುವದೇನು ? ಸ್ವಲ್ಪ ದಿವಸಗಳಲ್ಲಿಯೇ ದಿಗ್ವಿಜಯದಲ್ಲಿ ಎಲ್ಲ ರಾಜರನ್ನೂ ಗೆದ್ದು ವಿಜಯಶಾಲಿಯಾಗಿ ಮರಳಿ ಬಂದನು. ಗೆದ್ದುತಂದ ಅಗಣಿತ ಸಂಪತ್ತನ್ನು ಯೋಗ್ಯರೀತಿಯಿಂದ ಹಂಚಿಸಿ ರಾಜ್ಯಭಾರವನ್ನು ತನ್ನ ಹಿರಿಯ ಅಣ್ಣನಾದ ಕುರುಡ ಧೃತರಾಷ್ಟ್ರ, ಭೀಷ್ಮ, ವಿದುರ ಈ ಮೂವರ ಕೈಗೆ ಒಪ್ಪಿಸಿ ತಾನು ವಿಶ್ರಾಂತಿಗಾಗಿ ಕುಂತೀ ಮಾದ್ರಿಯರನ್ನೊಡಗೂಡಿ ವನಕ್ಕೆ ತೆರಳಿದನು.

**ಪಾಂಡುರಾಜನ** ವನವಿಹಾರ:— ಪಾಂಡುರಾಜನು ನಗರವಾಸದ ಸೌಖ್ಯವನ್ನು ತೊರೆದನು. ಆ ವಿಸ್ತಾರವಾದ ಮೇಲುಪ್ಪರಿಗೆಯ ಅರಮನೆ, ಹಂಸತೂಲತಲ್ಪ, ರಾಜವಿಲಾಸದ ತರತರದ ಉಪಕರಣ, ಇವೆಲ್ಲವೂ ಪಾಂಡುರಾಜನಿಗೆ ಬೇಡಾದವು. ಇವೆಲ್ಲವುಗಳಿಗಿಂತ ಹಿಮಾಚಲದ ದಕ್ಷಿಣ

ಭಾಗದಲ್ಲಿಯ ಅರಣ್ಯವು ಅವನಿಗೆ ಹೆಚ್ಚು ಪ್ರಿಯಕರವಾಯಿತು; ಗಗನ ಚುಂಬಿತ ವೃಕ್ಷಗಳೂ, ಬಗೆಬಗೆಯ ಪಕ್ಷಿಗಳ ಮಂಜುಳಸ್ವರವೂ, ಅಂದವಾದ ವಿವಿಧ ಸುವಾಸಿಕ ಪಕ್ಷಿಗಳೂ, ಮನಕ್ಕೆ ಆಲ್ಹಾದವನ್ನು ಕೊಡುವ ಮಂದ ಮಲಯ ಮಾರುತನೂ ಬಣ್ಣಬಣ್ಣದ ನಾನಾತರದ ಪಶುಪಕ್ಷಿಗಳೂ ಪಾಂಡು ರಾಜನ ಉಪಭೋಗದ ಹೊಸ ಉಪಕರಣಗಳಾದವು; ಮೇಲಾಗಿ ರೂಪದಲ್ಲಿ ರತಿಯನ್ನುಕೂಡ ಧಿಕ್ಕರಿಸುವಂಥ ಸುಶಿಕ್ಷಿತ ಸಾಧ್ವಿಯರಾದ ಕುಂತೀ ಮಾದ್ರಿಯರ ಸಹವಾಸವು; ಅಂದಮೇಲೆ ಯಾತಕ್ಕೇನು ಕೊರತೆ? ಗಜರಾಜನು ಗಜಯುವತಿಯರನ್ನು ಕೂಡಿ ವನದಲ್ಲಿ ವಿಹರಿಸುವಂತೆ ಪಾಂಡುರಾಜನು ಮಾದ್ರೀ ಕುಂತಿಯ ಜೊತೆಯಲ್ಲಿ ಶೋಭಿಸುತ್ತಿದ್ದನು. ಈ ಕ್ಷಣಕ್ಕೆ ಪರ್ವತದ ಆ ಉಚ್ಚ ಶಿಖರದ ಮೇಲೆ, ಮತ್ತೊಂದು ಕ್ಷಣಕ್ಕೆ ಈ ನಿಬಿಡಾರಣ್ಯದಲ್ಲಿ, ಒಂದು ಕ್ಷಣ ನೈಸರ್ಗಿಕ ಲತಾಮಂಟಪದಲ್ಲಿ ಮತ್ತೊಂದು ಕ್ಷಣಕ್ಕೆ ಹಸರು ಮೇಲ್ಹಾಸಿನಂತೆ ಶೋಭಿಸುತ್ತಿರುವ ಬೈಲು ಸಮಪ್ರದೇಶದಲ್ಲಿ, ಈ ಮೇರೆಗೆ ಮನಬಂದಂತೆ ಆರಾಮೋದ್ಯಾನಗಳಲ್ಲಿ ಸೃಷ್ಟಿಸೌಂದರ್ಯದ ಪರಮಾನಂದ ವನ್ನು ಉಪಭೋಗಿಸುತ್ತ ಕಾಲ ಕಳೆಯಹತ್ತಿದನು. ಕುಂತೀದೇವಿಯ ಆಯುಷ್ಯದಲ್ಲಿ ಈ ಸಮಯವು ಅತ್ಯಂತ ಊರ್ಜಿತ ಭಾಗವೆಂದು ಹೇಳ ಬಹುದು. ತನ್ನ ಒಡಹುಟ್ಟಿದ ಅಕ್ಕತಂಗಿಯರಿಗೆ ಮಿಕ್ಕಿ ಪ್ರೀತಿಮಾಡುವ ಮಾದ್ರಿಯ ಸಹವಾಸ; ನಾಲದ್ದಕ್ಕೆ ಇಬ್ಬರಿಗೂ ಪರಮಪ್ರಿಯನಾದ ಪರಮ ಪೂಜ್ಯ ಪತಿಯ ಸಹವಾಸವು; ಸುತ್ತುಮುತ್ತಲೂ ಆನಂದಾತಿಶಯದ ಅಟ್ಟ ಹಾಸದಿಂದ ಕಿಲಿಕಿಲಿ ನಗುವ ಸೃಷ್ಟಿದೇವಿಯ ನೈಸರ್ಗಿಕ ಸೌಂದರ್ಯವು. ಇಂಥಲ್ಲಿ ದುಃಖದ ಲವಲೇಶವಾದರೂ ಮನಸ್ಸಿಗೆ ತಟ್ಟುವದೇ? ಇಲ್ಲ. ಆ ಆನಂದಮಯ ಸೃಷ್ಟಿಸೌಂದರ್ಯವು ಪರಮ ದುಃಖವನ್ನು ಕೂಡ ಕೇವಲ ತನ್ನ ಸ್ಪರ್ಶಮಾತ್ರದಿಂದ ಪ್ರತಿ ಆನಂದರೂಪವನ್ನಾಗಿ ಮಾಡಲು ನಿಜವಾಗಿಯೂ ಶಕ್ತವಾಗಿದ್ದಿತು. ಇದರೊಳಗೆ ಮಾದ್ರೀ-ಪಾಂಡುರಾಜರ ಅತಿ ಸುಖಕರವಾದ ಸಹವಾಸದ ಸೊಬಗು!

**ಪಾಂಡುರಾಜನಿಗೆ ಶಾಪ:—** ಈ ಆನಂದಾತಿರೇಕವು ಮುಂದೆ ಬರುವ ದುಃಖದ ಮುಂಗುರುತು ಆಗಿದ್ದಿತೋ ಏನೋ! ಪಾಂಡು-ಮಾದ್ರಿ-ಕುಂತಿಯರ ಈ ಆನಂದವು ಬಹು ದಿನ ಸಾಗಲಿಲ್ಲ. ಪಾಂಡುರಾಜನಲ್ಲಿ

ಬೇಟೆಯ ಚಟವು ಮಿತಿ ಮೀರಿತ್ತು. ದಿನಾಲು ಬಿಲ್ಲು ಬಾಣ ಖಡ್ಗಗಳನ್ನು ಧರಿಸಿ ತನ್ನ ಇಬ್ಬರೂ ಮಡದಿಯರನ್ನು ಕೂಡಿಕೊಂಡು ಬೇಟೆಗೆ ತೆರಳುತ್ತಿದ್ದನು. ಇದೊಂದೇ ಆ ಕಿರಾತರಾಜನ ನಿತ್ಯಕ್ರಮವಾಗಿದ್ದಿತು. ಒಂದು ದಿವಸ ಪಾಂಡುರಾಜನು ಇದೇ ಪ್ರಕಾರ ಬೇಟೆಗಾಗಿ ಹೊರಟಾಗ ದೂರದಲ್ಲಿ ಒಂದು ಚಿಗರೆಯ ಜೊತೆಯನ್ನು ನೋಡಿದನು. ಕಾಮೋದ್ರೇಕದಿಂದ ಅವು ಪರಸ್ಪರ ಭೋಗದಲ್ಲಿ ಕೂಡಿದ್ದವು. ಇಂತಹ ಸಮಯದಲ್ಲಿ ಪಾಂಡುರಾಜನು ತನ್ನ ಬಿಲ್ಲಿಗೆ ಹೆದೆ ಏರಿಸಿ ಬಾಣವನ್ನೆಸೆದನು. ಕೂಡಲೇ ಪಾಂಡುವಿನ ತೀಕ್ಷ್ಣಬಾಣಗಳಿಂದ ಆ ಚಿಗರೆಯ ದಂಪತಿಗಳು ಗತಪ್ರಾಣವಾಗಿ ನೆಲಕ್ಕುರುಳಿದವು. ಅವರು ಮೃಗರೂಪಧಾರಿಗಳಾದ ಋಷಿಗಳಾಗಿದ್ದರಿಂದ ಅವರಲ್ಲಿ ಗಂಡುಚಿಗರಿಯು ಪಾಂಡುರಾಜನನ್ನು ಕುರಿತು ಧಿಕ್ಕರಿಸಿ ನುಡಿದದ್ದು— " ಹೇ ಪಾಂಡು, ಸಂತಾನಾರ್ಥವಾಗಿ ನಾವು ರತಿಸುಖದಲ್ಲಿ ಕೂಡಿದಾಗ ಬೇಟೆಯ ನಿಯಮವನ್ನು ಮೀರಿ ನೀನು ನಮ್ಮನ್ನುದುಳಿಸಿರುವಿ; ಇದರಂತೆಯೇ ನೀನಾದರೂ ರತಿಸುಖಕ್ಕಾಗಿ ನಿನ್ನ ಮಡದಿಯರನ್ನು ಕೂಡಿದಾಗ ಮೃತನಾಗುವಿ. " ಈ ಪ್ರಕಾರ ಶಾಪವನ್ನು ಹೊಂದಿ ಖಿನ್ನಮನಸ್ಕನಾಗಿ ಪಾಂಡುರಾಜನು ತನ್ನ ವಾಸಸ್ಥಳಕ್ಕೆ ಬಂದನು. ತನ್ನಿಂದ ಒದಗಿದ ಅಪಕೃತ್ಯಕ್ಕಾಗಿ ಮನದಲ್ಲಿಯೇ ಪಾಂಡುರಾಜನು ಕುದಿಯಹತ್ತಿದನು. ಕುಂತೀ ಮಾದ್ರಿಯರು ಪರಿಪರಿಯಿಂದ ಸಮಾಧಾನ ಮಾಡಲು ಪ್ರಯತ್ನಮಾಡಿದರೂ ಪಾಂಡುರಾಜನ ಉದ್ವಿಗ್ನತೆಯು ಕಡಿಮೆಯಾಗಲಿಲ್ಲ. ದಿನದಿನಕ್ಕೂ ಹೆಚ್ಚಹತ್ತಿತು. ಕಡೆಯಲ್ಲಿ ಪಾಂಡುರಾಜನು ಎಲ್ಲ ತರದ ಆನಂದೋಪಭೋಗಗಳನ್ನು ಬಿಟ್ಟು ತನ್ನ ಇಬ್ಬರೂ ಮಡದಿಯರನ್ನು ಕುರಿತು ಅಂದದ್ದು— " ಇಂದಿನವರೆಗೆ ನಿಮ್ಮೊಡನೆ ನಾನು ಪರಿಪರಿಯ ವಿಲಾಸದಲ್ಲಿ ಹೆಚ್ಚಿನಾನಂದದಿಂದ ಕಾಲ ಕಳೆದೆ. ಇನ್ನು ಮುಂದೆ ಎಲ್ಲ ವಿಲಾಸವನ್ನು ಬಿಟ್ಟು ಉಳಿದ ಆಯುಷ್ಯವನ್ನು ತಪಶ್ಚರ್ಯದಲ್ಲಿ ವೆಚ್ಚಮಾಡುವದಾಗಿ ನಿಶ್ಚಯಿಸಿರುವೆನು; ಆದುದರಿಂದ ನೀವು ಮರಳಿ ಹಸ್ತಿನಾವತಿಗೆ ಹೋಗಿರಿ. ನಾನೊಬ್ಬನೇ ಇಲ್ಲಿಂದ ನಿಬಿಡವಾದ ಅರಣ್ಯದಲ್ಲಿ ಸಾಗಿ ಏಕಾಂತದಲ್ಲಿ ಕಾಲಕಳೆಯುವೆನು." ಪಾಂಡುರಾಜನ ಈ ಮಾತು ಕೇಳಿ ಕುಂತೀ ಮಾದ್ರಿಯರಿಗೆ ಸಿಡಿಲು ಬಡಿದಂತಾಯಿತು. ಮೊದಲು ಅವರ

ಬಾಯಿಂದ ಮಾತೇ ಹೊರಡಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಕುಂತೀದೇವಿಯು ತುಸು ಸಮಾಧಾನ ಮಾಡಿಕೊಂಡು ಗದ್ಗದಿತ ಸ್ವರದಿಂದ ಅಂದದ್ದು "ಮಹಾ ಪ್ರಭೋ! ಇಂತಹ ಬಿರುಸು ಮಾತುಗಳಿಂದ ಗಾಯದ ಮೇಲೆ ಬರೆಹಾಕಿದಂತೆ ವ್ಯಥೆಯಾಗುತ್ತದೆ. ದಯವಿಟ್ಟು ಇಂತಹ ಮಾತುಗಳನ್ನಾಡಬಾರದು. ನಿಮ್ಮ ಸುಖವೇ ನಮ್ಮ ಸುಖವು; ನಿಮ್ಮ ದುಃಖವೇ ನಮ್ಮ ದುಃಖವು; ನಿಮ್ಮ ಸಹವಾಸಕ್ಕಾಗಿ ಸ್ವರ್ಗವನ್ನು ಕೂಡ ಧಿಕ್ಕರಿಸುವೆವು. ನಿಮ್ಮ ಸಮಾಗಮವೇ ನಮಗೆ ಪರಮಾನಂದವು. ನಮ್ಮನ್ನು ಹಿಂದಕ್ಕಟ್ಟಬೇಡಿರಿ! ನಿಮ್ಮ ವಿರಹವು ನಮ್ಮನ್ನು ಕಾಳ್ಗಿಚ್ಚಿನಂತೆ ಸುಡದಿರಲಾರದು. ಸ್ವಾಮೀ, ಇಷ್ಟುದಿನ ನಿಮ್ಮ ಸಹವಾಸದಲ್ಲಿ ಕಾಲಕಳೆದು ಈಗ ನಮಗೆ ನಿಮ್ಮನ್ನು ಬಿಟ್ಟು ನಗರದ ಸುಖವಿಲಾಸದ ಹಾದಿಯನ್ನು ತೋರುವದುಚಿತವೇ? "ನಾತಿ ಚರಾಮಿ, ನಾತಿ ಚರಾಮಿ" ಎಂದು ಅಗ್ನಿಯ ಸಮಕ್ಷಮವಾಗಿ ವಚನ ಕೊಟ್ಟು ನಮ್ಮನ್ನು ನೀವು ಅಗಲಲಿಕ್ಕಾಗದು. ಜೀವವಿರುವತನಕ ಹರಿಹರಬ್ರಹ್ಮರೂ ನಮ್ಮನ್ನು ಅಗಲಿಸಲಾರರು." ಮಾದ್ರಿಯ ಹಟವಾದರೂ ಕುಂತೀದೇವಿಯಂತೆಯೇ! ಆದ್ದರಿಂದ ಪಾಂಡುರಾಜನು ಕುಂತೀ ಮಾದ್ರಿಯರನ್ನು ಕೂಡಿಯೇ ತಪಶ್ಚರ್ಯಕ್ಕಾಗಿ ತೆರಳುವದೆಂದು ನಿಶ್ಚಯಿಸಿ, ಎಲ್ಲ ಸಂಗತಿಯನ್ನು ತನ್ನ ಕಕ್ಕನಾದ ಭೀಷ್ಮ ಅಣ್ಣನಾದ ಧೃತರಾಷ್ಟ್ರರಿಗೆ ನಿವೇದಿಸಿ ಅವರಿಗೆ ಸಮಾಧಾನ ಹೇಳಲು ದೂತರನ್ನು ಕಳಿಸಿದನು. ತನ್ನ ಕಿರೀಟ ಕುಂಡಲ ಮುಂತಾದ ಬೆಲೆಯುಳ್ಳ ರಾಜಭೂಷಣಗಳನ್ನೂ ಹೆಂಡಂದಿರ ಆಭರಣಗಳನ್ನೂ ದಾನಮಾಡಿ ಹಿಮಾಲಯದ ನಿಬಿಡಾರಣ್ಯದಲ್ಲಿ ಶತಶೃಂಗ ಮಾರ್ಗವಾಗಿ ನಡೆದನು.

**ಪಾಂಡುರಾಜನ ತಪಶ್ಚರ್ಯ — ಋಷಿಗಳ ಆಶೀರ್ವಾದ:—** ದೂತರು ಬಂದು ಧೃತರಾಷ್ಟ್ರ ಮುಂತಾದವರಿಗೆ ನಡೆದ ಸಂಗತಿಯನ್ನೆಲ್ಲ ನಿವೇದಿಸಿದರು. ಈ ಸುದ್ದಿಯನ್ನು ಕೇಳಿ ಅರಮನೆಯೆಲ್ಲವೂ ಗೋಳಿಟ್ಟಿತು. ಪುರಜನರೆಲ್ಲರು ಪರಮ ದುಃಖಿತರಾದರು; ಆದರೆ ಮಾಡುವದೇನು? ಪಾಂಡುರಾಜನ ನಿಶ್ಚಯವು ಮೇರುವಿನಂತೆ ಅಚಲವಾದುದು. ಇತ್ತ ಪಾಂಡುರಾಜನು ತನ್ನ ಇಬ್ಬರೂ ಹೆಂಡಂದಿರ ಸಹಿತವಾಗಿ ಚಿತ್ರರಥ, ಕಾಲಕೂಟ ಮುಂತಾದ ಹಿಮಾಲಯದ ಭಾಗಗಳನ್ನು ದಾಟಿ ಇಂದ್ರ

ದ್ಯುಮ್ನ-ಸರೋವರಕ್ಕೆ ಬಂದನು. ಅಲ್ಲಿಂದ ಮುಂದೆ ಮಹಾಭೂತ, ಸಿದ್ಧರಿಂದ ರಕ್ಷಿತವೂ ಪರಮಋಷಿಗಳ ವಾಸಸ್ಥಾನವೂ ಆದ ಗಂಧಮಾದನ ಮುಂತಾದ ಪ್ರದೇಶಗಳ ಮಾರ್ಗವಾಗಿ ಹಂಸಕೂಟವನ್ನು ದಾಟಿ, ಶತಶೃಂಗ ಶಿಖರಕ್ಕೆ ತಲ್ಪಿ, ಅಲ್ಲಿ ತನ್ನ ಸಾಧ್ವಿಯರನ್ನೊಡಗೂಡಿ ಉಗ್ರ ತಪಸ್ಸನ್ನು ಆರಂಭಿಸಿದನು. ದಿನಾಲು ದೊರೆಯುವ ಕಂದಮೂಲ, ಹಣ್ಣು ಹಂಪಲಗಳಿಂದ ಹಸಿವೆ ಹಿಂಗಿಸಿಕೊಂಡು ಅಖಂಡವಾಗಿ ದೇವರ ಧ್ಯಾನದಲ್ಲಿಯೇ ನಿರತನಾಗಿದ್ದನು. ಕುಂತೀ ಮಾದ್ರಿಯರು ತಮ್ಮ ಪತಿಯ ತಪಸ್ಸಿಗೆ ಬೇಕಾದ ಸಾಧನೆಗಳನ್ನು ಒದಗಿಸಿಕೊಡುವರು, ಪೂಜಾಪದಾರ್ಥಗಳ ಸಿದ್ಧತೆ ಮಾಡುವರು, ಮತ್ತು ಉಳಿದ ವೇಳೆಯನ್ನು ದೇವರ ಧ್ಯಾನದಲ್ಲಿ ಕಳೆಯುವರು; ಒಂದುದಿನ ಪಾಂಡುರಾಜನ ಆಶ್ರಮದೆಡೆಗೆ ಮಹಾ ತಪಸ್ವಿಗಳಾದ ಅರಣ್ಯನಿವಾಸಿಗಳ ಸಂಘವು (ಗುಂಪು) ಬಂದಿತು. ಅವರು ಹಾದಿಯಲ್ಲಿ ಪಾಂಡುರಾಜನ ಆದರಾತಿಥ್ಯವನ್ನು ಸ್ವೀಕರಿಸಿ ಆತನಿಗೆ ಸಂತಾನವಾಗಲೆಂದು ಹರಸಿ ತಪಃಸಾಧನೆಗಾಗಿ ಮುಂದೆ ನಡೆದರು. ದುಃಖದಲ್ಲಿ ಇದೊಂದು ಆನಂದ.

**ಪಾಂಡುರಾಜನಿಗೆ ಮಕ್ಕಳ ಹಳವಂಡ — ನಿಯೋಗದ ವಿಚಾರ**— ಪಾಂಡುರಾಜನು ಋಷಿಗಳ ಮಾತಿನ ಬಗ್ಗೆ ವಿಚಾರಿಸಹತ್ತಿದೊಡನೆ, ಹುಲ್ಲೆಯ ರೂಪದಿಂದ ವನದಲ್ಲಿ ಸಂಚರಿಸುವ ಋಷಿಯ ಶಾಪವು ಅವನ ಜ್ಞಾಪಕಕ್ಕೆ ಬಂದು "ಸಂಭೋಗವೇ ಅಸಂಭವವು; ಅಂದಮೇಲೆ ಮಕ್ಕಳಾಗುವ ಬಗೆ ಹೇಗೆ?" ಎಂದುಕೊಂಡು ಸುಮ್ಮನಿದ್ದನು. ಒಂದು ದಿವಸ ಪಾಂಡುರಾಜನು ತನ್ನ ಧರ್ಮಪತ್ನಿಯಾದ ಕುಂತೀದೇವಿಯನ್ನು ಕುರಿತು ಏಕಾಂತದಲ್ಲಿ "ಹೇ ಭಾಮಿನಿ, ಮನುಷ್ಯಮಾತ್ರರಿಗೆ ನಾಲ್ಕು ತರದ ಋಣಗಳುಂಟು. ದೇವಋಣ, ಋಷಿಋಣ, ಮನುಷ್ಯಋಣ, ಪಿತೃಋಣ, ಎಂಬವು. ಪ್ರತಿಯೊಬ್ಬನು ಈ ಋಣಗಳಿಂದ ಮುಕ್ತನಾಗಲೇ ಬೇಕು. ಯಜ್ಞಯಾಗಾದಿಗಳನ್ನಾಚರಿಸಿ ದೇವ ಋಣದಿಂದಲೂ, ಅಧ್ಯಯನ, ಅಧ್ಯಾಪನ, ತಪಶ್ಚರ್ಯ ಮುಂತಾದ್ದನ್ನಾಚರಿಸಿ ಋಷಿ ಋಣದಿಂದಲೂ, ಸತ್ಪಾತ್ರದಲ್ಲಿ ದಾನ, ಧರ್ಮ ಪರೋಪಕಾರಗಳನ್ನು ಮಾಡಿ ಮನುಷ್ಯ ಋಣದಿಂದಲೂ, ಯೋಗ್ಯಕಾಲಕ್ಕೆ ಶ್ರಾದ್ಧಾದಿಕರ್ಮಗಳನ್ನು ನೆರವೇರಿಸಿ ಪಿತೃಋಣದಿಂದಲೂ ಮುಕ್ತನಾಗತಕ್ಕದ್ದು. ನಾನು ಮೊದಲಿನ ಮೂರು ಋಣ

ಗಳಿಂದ ಮುಕ್ತನಾಗಿರುವೆ; ಆದರೆ ನನ್ನ ಮರಣದ ಮೂಲಕ ಪಿತೃಗಳ ಶ್ರಾದ್ಧ ಕರ್ಮವು ನಿಂತುಹೋಗುವದು. ಪಿತೃಋಣದಿಂದ ಮುಕ್ತನಾಗಲು ಸಂತತಿಯು ಅವಶ್ಯವಾದುದರಿಂದ, ಯಶಸ್ವಿನಿ? ಶಾಸ್ತ್ರ ಸಮ್ಮತವಾದ ನಿಯೋಗಮಾರ್ಗದಿಂದ ನನ್ನ ಅಪ್ಪಣೆಯ ಮೇರೆಗೆ ಮಕ್ಕಳನ್ನು ಪಡೆ." ಎಂದು ಹೇಳಿದನು. ತಮಗೆ ಮಕ್ಕಳಾಗದಿದ್ದರೆ ದತ್ತಕರೂಪದಿಂದ ಮಕ್ಕಳನ್ನು ಪಡೆಯುವದು ಅಥವಾ ಮಕ್ಕಳಾಗಬಹುದೆಂಬ ಆಶೆಯಿಂದ ಪುರುಷರು ಎರಡನೇ ಲಗ್ನವಾಗುವದು, ಇಲ್ಲವೆ ತನ್ನ ಹೆಂಡತಿಗೆ ಎರಡನೇಯುವರ ಸಹವಾಸದಿಂದ ಮಕ್ಕಳನ್ನು ಪಡೆಯಲು ಅಪ್ಪಣೆಕೊಡುವದು ಇವೇ ಮುಂತಾದ ನಾನಾಮಾರ್ಗಗಳನ್ನು ಮೊದಲು ಉಪಯೋಗಿಸುತ್ತಿದ್ದರು. ಇದರಲ್ಲಿ ಕಡೆಯಮಾರ್ಗವೇ ನಿಯೋಗವೆಂದು ಪ್ರಸಿದ್ಧವಿದೆ. ಮಕ್ಕಳಿಲ್ಲದೆ ಮೃತನಾದವನ ಹೆಂಡತಿಯು ತನ್ನ ಮೃತಗಂಡನ ಸೋದರನಿಂದ ಮಕ್ಕಳನ್ನು ಪಡೆಯುವದು ಒಂದಾನೊಂದು ಕಾಲಕ್ಕೆ ಶಾಸ್ತ್ರಸಮ್ಮತವಾಗಿತ್ತು. ಗಂಡನು ಜೀವಂತನಾಗಿರುವಾಗಲೇ ಗಂಡನ ಅಪ್ಪಣೆಯ ಮೇರೆಗೆ ಪರರಿಂದ ಮಕ್ಕಳನ್ನು ಪಡೆಯುವದೂ ಶಾಸ್ತ್ರಸಮ್ಮತವಾಗಿತ್ತು. ಈ ತರದ ಪದ್ಧತಿಯು ಹಿಂದುಸ್ಥಾನದಲ್ಲಲ್ಲದೆ, ಅನ್ಯತ್ರವೂ ಕಂಡುಬರುವದು. ಹಿಬ್ರ್ಯು ಜನಾಂಗದಲ್ಲಿ ಈ ನಿಯೋಗಮಾರ್ಗವು ಪ್ರಚಲಿತವಿತ್ತು. ಪೂರ್ವಕಾಲದಲ್ಲಿ ಎಷ್ಟೋ ಜನಾಂಗದವರು ಈ ಮಾರ್ಗವನ್ನು ಅನುಸರಿಸುತ್ತಿದ್ದರು. ಜನಾಂಗವು ಬೆಳೆಯಲು ಪ್ರತಿಯೊಬ್ಬ ಮನುಷ್ಯನು ತನ್ನ ಹಿಂದೆ ಒಬ್ಬ ಮಗನನ್ನಾದರೂ ಇಡಬೇಕೆಂಬ ವಿಚಾರಕ್ಕೆ ಆಯಾ ಜನಾಂಗದ ಮನುಷ್ಯಬಲದ ಸಂರಕ್ಷಣೆ ಹಾಗೂ ಬೆಳೆಯುವಿಕೆಯ ಚಿಂತೆಯೇ ಮೂಲ ಕಾರಣವೆಂದು ತೋರುತ್ತದೆ. ಮುಂದೆ ಇದಕ್ಕೆ ಧರ್ಮಸ್ವರೂಪವು ಪ್ರಾಪ್ತವಾಯಿತು. ಕಲಿಯುಗದೊಳಗೆ ಈ ನಿಯೋಗಮಾರ್ಗವು ನಿಷಿದ್ಧವೆಂದು ಹಿಂದೂಜನರ ಶಾಸ್ತ್ರನಿರ್ಣಯವುಂಟು; ಆದರೆ ಇತ್ತಿಚಿಗೆ ಸ್ವಾಮೀ ದಯಾನಂದ-ಸರಸ್ವತಿಯುವರು ಸ್ಥಾಪಿಸಿದ ಆರ್ಯಸಮಾಜ ಪಂಥದವರು ನಿಯೋಗಮಾರ್ಗದಿಂದ ಪುತ್ರನನ್ನು ಪಡೆಯುವದು ಶಾಸ್ತ್ರಸಮ್ಮತವೆಂದು ಈಗಲೂ ಭಾವಿಸುವರು. ಇರಲಿ.

**ಮಕ್ಕಳನ್ನು ಪಡೆಯಲು ಕುಂತಿಗೆ ಆಜ್ಞೆ:—** ಪಾಂಡು

ರಾಜನು ಕುಂತೀದೇವಿಗೆ ಯೋಗ್ಯಪುರುಷನಿಂದ ಮಕ್ಕಳನ್ನು ಪಡೆಯಲು ಉಪದೇಶಿಸಲು ಕುಂತೀದೇವಿಯು ಸಮ್ಮತಿಸಲಿಲ್ಲ; ಆದುದರಿಂದ ಪಾಂಡು ರಾಯನು ನಿಯೋಗಮಾರ್ಗವು ಶಾಸ್ತ್ರಸಮ್ಮತವೆಂದು ಸಿದ್ಧಮಾಡಲು ಐತಿಹಾಸಿಕ ಉದಾಹರಣೆಗಳನ್ನು ಕುಂತೀದೇವಿಯ ಮುಂದೆ ಒಂದೊಂದಾಗಿ ಹೇಳತೊಡಗಿದನು. ಮೊದಲು ತನ್ನ ತಂದೆಯಾದ ವಿಚಿತ್ರವೀರ್ಯನ ಮರಣದನಂತರ ತನ್ನ ತಾಯಿ, ಮಲತಾಯಿಯರಾದ ಅಂಬಿಕಾ, ಅಂಬಾ ಲಿಕೆಯರು ವ್ಯಾಸಮುನಿಗಳೊಡನೆ ನಿಯೋಗದಿಂದ ತಮ್ಮನ್ನು ಅಂದರೆ ಧೃತರಾಷ್ಟ್ರ, ಪಾಂಡುರಾಯನನ್ನು ಪಡೆದ ಸಂಗತಿಯನ್ನು ಹೇಳಿ ಕಡೆಗೆ ಶರದಂಡಾಯನನ ಪುತ್ರಿಯು ತನ್ನ ಪತಿಯ ಅಪ್ಪಣೆಯ ಮೇರೆಗೆ ದುರ್ಜಯ ಮೊದಲಾದ ಮೂರು ಮಕ್ಕಳನ್ನು ಪಡೆದ ಐತಿಹಾಸಿಕ ಕಥೆಯನ್ನೂ ಹೇಳಿ ದನು. ಆದಾಗ್ಯೂ, ಕುಂತೀದೇವಿಯು ಒಪ್ಪಲಿಲ್ಲ. ಪ್ರತ್ಯುತ್ತರವಾಗಿ ಕುಂತೀದೇವಿಯು ಅಂದದ್ದು— “ಮಹಾಪ್ರಭೋ, ಈ ತೆರನಾಗಿ ಮಾತ್ರ ತಾವು ಮಾತನಾಡಕೂಡದು. ಅದು ನನ್ನಿಂದಾಗದ ಮಾತು. ನಿಮ್ಮನ್ನು ಬಿಟ್ಟು ಎರಡನೆಯ ಪುರುಷನನ್ನು ಕೂಡಲಾರೆ. ನೀವು ಧರ್ಮಪತಿಗಳು. ನಿಮ್ಮಿಂದಲೇ ಪುತ್ರೋತ್ಪತ್ತಿಯಾದರಾಗಬೇಕು. ಹಿಂದಕ್ಕೆ ಯುಷಿತಾಶ್ವ ನೆಂಬ ಒಬ್ಬ ಬಲಾಢ್ಯ ರಾಜನಿದ್ದನು. ಆತನು ಮಕ್ಕಳಿಲ್ಲದೆ ಕ್ಷಯರೋಗ ದಿಂದ ಸಾಯಲು ಅವನ ಹೆಂಡತಿಯಾದ ಭದ್ರಾವತಿಯು ನಿಯೋಗದಿಂದ ಮಕ್ಕಳನ್ನು ಪಡೆಯುವಲೇ ಮೃತಪತಿಯ ಶವದಲ್ಲಿ ತನ್ನ ಪುಣ್ಯಪ್ರಭಾವದಿಂದ ಜೀವಕಳೆಯನ್ನು ತುಂಬಿ ಆ ಪತಿಯಿಂದಲೇ ಪುತ್ರರನ್ನು ಪಡೆದಳಂತೆ. ಕೇವಲ ಪುಣ್ಯದ ಬಲವೇ ಬಲವು. ಪ್ರೀತಿಯ ಶಕ್ತಿಯೇ ಶಕ್ತಿಯು. ಅದರ ಪ್ರಭಾವದಿಂದಲೇ ನೀವು ನಮ್ಮಲ್ಲಿ ಪುತ್ರ ಸಂತಾನವನ್ನು ಪಡೆಯಬಹುದು. “ನಿಯೋಗದ ಮಾತನ್ನೆತ್ತಲಾಗದು.” ತನ್ನ ಐತಿಹಾಸಿಕ ಕಥೆಗೆ ಪ್ರತ್ಯು ತ್ತರವಾಗಿ ಕುಂತೀದೇವಿಯು ಮತ್ತೊಂದು ಐತಿಹಾಸಿಕ ಸಂಗತಿಯನ್ನು ಹೇಳಿ ನಿಯೋಗಮಾರ್ಗವನ್ನು ಅಲ್ಲಗಳೆಯಲು, ಪಾಂಡುರಾಜನು ನಿಯೋ ಗವು ನಿಂದ್ಯಮಾರ್ಗವಲ್ಲೆಂದು ತೋರಿಸಲು ಯತ್ನಿಸಿದನು. “ಹೇ ಕುಂತೀ, ನೀನು ಹೇಳಿದ ಯುಷಿತಾಶ್ವನ ಕಥೆಯು ನಿಜವಾಗಿಯೂ ಐತಿಹಾಸಿಕವು; ಆದರೆ ಹೇ ಶುಭೆ, ನಾನು ನಿನ್ನ ದೆಶೆಯಿಂದ ಪೂರ್ವಋಷಿಸಮ್ಮತವಾದ

ಶಾಸ್ತ್ರಾಧಾರಗಳನ್ನೂ ಐತಿಹಾಸಿಕ ಸಂಗತಿಗಳನ್ನೂ ಹೇಳುತ್ತೇನೆ ಕೇಳು. ಮೊದಲು ಮದುವೆಯ ನಿರ್ಬಂಧವೇ ಇರಲಿಲ್ಲ. ಹೆಂಗಳೆಯರು ತಮ್ಮ ಮನಬಂದಂತೆ ಬೇಕಾದವರೊಡನೆ ವಿಹರಿಸುತ್ತಿದ್ದರು. ಆ ಕಾಲಕ್ಕೆ ಅದು ಪಾಪಕರ್ಮವೆನಿಸುತ್ತಿದ್ದಿಲ್ಲ. ಪೂರ್ವದಲ್ಲಿದ್ದ ಈ ನಡತೆಯೇ ಇನ್ನೂ ಪಶು ಪಕ್ಷಿಗಳಲ್ಲಿ ಹಾಗೆಯೇ ಉಳಿದುಕೊಂಡಿದೆ. ಇನ್ನೂ, ಉತ್ತರ ಕುರುಗಳಲ್ಲಿ ಇದೇ ವಾಡಿಕೆಯಲ್ಲಿದೆ. ಸದ್ಯದ ನಡೆವಳಿಯು ಇತ್ತಿತ್ತಲಾಗಿ ಬಂದಿದೆ. ಅದು ಹೇಗೆ ವಾಡಿಕೆಯಾಯಿತು; ಮತ್ತು ಮದುವೆಯ ಮೇರೆಯನ್ನು ಮೊದಲು ಕಟ್ಟಿದವರಾರೆಂಬುದನ್ನು ಹೇಳುತ್ತೇನೆ. ಪೂರ್ವಕಾಲದಲ್ಲಿ ಉದ್ದಾಲಕನೆಂಬ ಒಬ್ಬ ಋಷಿಯಿದ್ದನು. ಅವನಿಗೆ ಶ್ವೇತಕೇತುವೆಂಬ ಒಬ್ಬ ಮಗನಿದ್ದನು. ಅವನೂ ಮಹಾ ತಪಸ್ವಿಯು, ಒಂದು ದಿವಸ ಮತ್ತೊಬ್ಬ ಪುರುಷನು ಬಂದು ಶ್ವೇತಕೇತುವಿನ ತಾಯಿಯನ್ನು ಸಂಭೋಗಕ್ಕೆಂದು ಕ ದೊಯ್ದನು. ಇದು ಶ್ವೇತಕೇತುವಿಗೆ ಸರಿಬರಲಿಲ್ಲ. ಅಂದಿನಿಂದ ಆ ಮಹಾಮುನಿಯು ಕಟ್ಟು ಮಾಡಿದ್ದೇನೆಂದರೆ— ಇಂದಿನಿಂದ ತನ್ನ ವಿವಾಹಿತ ಪತಿಯನ್ನು ಬಿಟ್ಟು ಅನ್ಯರನ್ನು ಕೂಡಿದ ಸ್ತ್ರೀಯಳಿಗೆ ಭ್ರೂಣಹತ್ಯಾದೋಷವು ಬರಲಿ; ಅದರಂತೆ ಯಾವ ಮನುಷ್ಯನು ತನ್ನ ಪತಿವ್ರತೆಯಾದ ಸ್ತ್ರೀಯನ್ನು ಬಿಟ್ಟು ಪರಸ್ತ್ರೀಯನ್ನು ಕೂಡುವನೋ ಅವನಿಗೂ ಅದೇ ಪಾಪವು ತಟ್ಟಲಿ. ಯಾವ ಸ್ತ್ರೀಯು ತನ್ನ ಪತಿಯು ಅಪ್ಪಣೆ ಕೊಟ್ಟ ಮೇರೆಗೆ ನಿಯೋಗದಿಂದ ಮಕ್ಕಳನ್ನು ಪಡೆಯುವದಿಲ್ಲವೋ ಅವಳಿಗೂ ಅದೇ ಪಾಪವು ಸೋಂಕಲಿ.” ಈ ಪ್ರಕಾರವಾಗಿ ಶ್ವೇತಕೇತುವಿನಿಂದ ಮೊದಲು ಈ ಮದುವೆಯ ಮರ್ಯಾದೆಯು ಹಾಕಲ್ಪಟ್ಟಿತು. ಹಿಂದಕ್ಕೆ ಸೌದಸರಾಜನ ಧರ್ಮಪತ್ನಿಯಾದ ಮದಯಂತಿಯು ತನ್ನ ಪತಿಯ ಅಪ್ಪಣೆಯ ಮೇರೆಗೆ ಮಕ್ಕಳನ್ನು ಪಡೆದದ್ದು ನಿನಗೆ ಗೊತ್ತುಂಟಷ್ಟೇ! ನೀನು ಇತಿಹಾಸ ಮತ್ತು ಶಾಸ್ತ್ರ ಬಲ್ಲವಳು; ನನ್ನ ಮಾತು ನಡೆಯಿಸು. ನನಗಾಗಿ ಮಕ್ಕಳನ್ನು ಪಡೆ.” ಎಂದು ಪಾಂಡುರಾಜನು ಶಾಸ್ತ್ರಾಧಾರವನ್ನೂ ಅದಕ್ಕೆ ಬಲಿಕೊಡುವ ಐತಿಹಾಸಿಕ ಉದಾಹರಣೆಗಳನ್ನೂ ಒಂದರ ಮೇಲೊಂದು ಅವಳ ಮುಂದೊಡ್ಡಿ ಪಾಂಡುರಾಜನು ಹೇಳಿದ ಪೂರ್ವಸ್ಥಿತಿಯು ಆಶ್ಚರ್ಯಕಾರಕವಾದ ಸಂಗತಿಯಲ್ಲ. ಸಮಾಜದಲ್ಲಿ ಮದುವೆಯ ನಿರ್ಬಂಧವು ಹಿಂದಿ.

ನಿಂದ ಬಂದ ಸಂಗತಿಯು. ಈಗಲೂ ಕೂಡ ಕೆಳತರಗತಿಯ ಸಮಾಜದಲ್ಲಿ ಈ ತೆರವಾಗಿ ಮದುವೆಯ ಕಟ್ಟು ಇಲ್ಲ. ಎಷ್ಟೋ "ಕಾಡು" ಸಮಾಜಗಳಲ್ಲಿ ಮಗನು ತಾಯಿಯ ಕೂಡ, ಅಥವಾ ತಂದೆಯು ಮಗಳ ಕೂಡ ಅಣ್ಣನು ತಂಗಿಯ ಕೂಡ ಮುಂತಾಗಿ ನಮಗೆ ಅಸಂಬದ್ಧವಾಗಿ ಕಂಡು ಬರುವ ಎಷ್ಟೋ ಶರೀರ ಸಂಬಂಧಗಳು ಕಂಡು ಬರುತ್ತವೆ. ಕೆಲ ಕೆಲವು ಸಮಾಜದಲ್ಲಿ ಮನೆಗೆ ಬಂದ ಅತಿಥಿಗಳಿಗೆ ಉಳಿದ ಉಪಚಾರವನ್ನು ಮಾಡುವಂತೆ ಹೆಂಡರನ್ನೂ ಸಲ್ಲಿಸುವ ಉದಾಹರಣೆಗಳೂ ಉಂಟು. ಉದಾಹರಣೆಗಾಗಿ, ಮೇಲ್ಕಂಡ ಕೆಟ್ಟ (ನಮ್ಮ ದೃಷ್ಟಿಯಿಂದ) ನಡೆವಳಿಯು ಇಜಿಪ್ತದ ಟಾಲಮಿರಾಜವಂಶದಲ್ಲಿ, ಪೂರ್ವ ಕಾಲದ ಮೆಕ್ಸಿಕೋ ರಾಜವಂಶದಲ್ಲಿ, ಥಿಬೆಯಾ ನಡುಗಡ್ಡೆಯ ಜನರಲ್ಲಿ, ಅಂದಮಾನ, ಆಸ್ಟ್ರೇಲಿಯಾ ಹಾಗೂ ಆಫ್ರಿಕಾ ಖಂಡದ ಮೂಲ ನಿವಾಸಿಗಳಲ್ಲಿ, ಸ್ಪಷ್ಟವಾಗಿ ಕಂಡುಬರುವದು. ಸದ್ಯಕ್ಕೆ ಕಮ್ಯುನಿಸ್ಟ ಮುಂತಾದ ವಿಶಿಷ್ಟ ಸಮಾಜಸತ್ತಾವಾದಿಗಳೂ ಹೀಗೆ ಹೇಳುತ್ತಿದ್ದು, ಹಿಂದಕ್ಕೆ ಗ್ರೀಕ ತತ್ವಜ್ಞಾನಿಯಾದ ಪ್ಲೇಟೋನೂ ಸ್ವೇಚ್ಛಾಚಾರವೇ ಉತ್ತಮವೆಂದು ಪ್ರತಿಪಾದಿಸುತ್ತಿದ್ದನು. ಸಾರಾಂಶ, ಪಾಂಡುರಾಜನೂ, ಕುಂತೀದೇವಿಯೂ, ಇತಿಹಾಸ, ಸಮಾಜವ್ಯವಸ್ಥೆ, ಶಾಸ್ತ್ರ ಮತ್ತು ತರತರದ ನಡೆವಳಿಗಳನ್ನು ಬಲ್ಲವರಾಗಿದ್ದರೆಂದು ಅವರ ವಾದವಿವಾದಗಳಿಂದ ಚನ್ನಾಗಿ ತಿಳಿಯುತ್ತದೆ. ಇವರು ೫೦೦೦ ವರ್ಷದ ಕೆಳಗೆ ಆಗಿ ಹೋದವರೆಂಬುದನ್ನು ವಾಚಕರು ನೆನಪಿನಲ್ಲಿಡತಕ್ಕದ್ದು; ಅಂದರೆ ಅವರ ಆ ವಿಚಾರಗಳ ಮಹತ್ವವು ಕೂಡಲೇ ಒಡೆದು ಕಾಣುವದು.

**ಪಾಂಡವರ ಜನ್ಮ**:—ಕುಂತೀದೇವಿಯು ಪರಪುರುಷರಿಂದ ಮಕ್ಕಳನ್ನು ಪಡೆಯಲು ಒಪ್ಪಲಿಲ್ಲ; ಆದರೆ ದುರ್ವಾಸರಿಂದ ತಾನು ಹಿಂದೆ ಪಡೆದ ವರಗಳ ಸಂಗತಿಯನ್ನು ಪಾಂಡುರಾಜನಿಗೆ ತಿಳಿಸಿ "ಮಂತ್ರಬಲದಿಂದ ಮಕ್ಕಳನ್ನು ಪಡೆಯಬಹುದು." ಎಂದಳು. ಇದನ್ನು ಕೇಳಿ ಪಾಂಡುರಾಜನಿಗೆ ಹಿಡಿಸಲಾರದಷ್ಟು ಆನಂದವಾಗಿ, "ಇಂದಿನ ದಿನವೇ ವಿಧಿಪೂರ್ವಕವಾಗಿ ಯಮಧರ್ಮರಾಜನನ್ನು ಕುರಿತು ಮಂತ್ರವನ್ನು ಜಪಿಸು" ಎಂದು ಅತಿ ಔತ್ಸುಕ್ಯದಿಂದ ಹೇಳಿದನು. ಕುಂತೀದೇವಿಯು ಶುಚಿರ್ಭೂತಳಾಗಿ ಏಕೋಭಾವದಿಂದ ಮಂತ್ರಜಪಿಸಲು ಯಮಧರ್ಮನ ಯೋಗಮೂರ್ತಿಯು

ಪ್ರತ್ಯಕ್ಷವಾಯಿತು. ಆ ಯಮಧರ್ಮನ ಪ್ರಸಾದದಿಂದ · ಧರ್ಮವಂತರ ಶಿರೋಮಣಿಯೂ, ಸತ್ಯವಂತನೂ ಆದ ಧರ್ಮರಾಜ ಅಥವಾ ಮುಂದೆ ಯುಧಿಷ್ಠಿರನೆಂದು ಪ್ರಸಿದ್ಧನಾದ ಪುತ್ರನು ಹುಟ್ಟಿದನು. ಮತ್ತೆ ಕೆಲವು ದಿವಸಗಳನಂತರ ವಾಯುಮಂತ್ರದ ಬಲದಿಂದ ಪ್ರಚಂಡ ಪರಾಕ್ರಮಿಯೂ, ಭಯಂಕರ ಬಲಿಷ್ಠನೂ ಆದ ಭೀಮನನ್ನು ಪಡೆದಳು. ಒಂದಾನೊಂದು ದಿವಸ ಕುಂತೀದೇವಿಯು ಭೀಮನನ್ನು ತೊಡೆಯ ಮೇಲೆ ಮಲಗಿಸಿ ಕೊಂಡು ಕುಳಿತಿರುವಾಗ ಒಮ್ಮಿಂದೊಮ್ಮೆ ಒಂದು ಭಯಂಕರವಾದ ಹುಲಿಯು ಆರ್ಭಟಿಸಿ ಮೈಮೇಲೆ ಬರಲು, ಕುಂತೀದೇವಿಯು ಬೆದರಿದಳು; ಆಕಾಲಕ್ಕೆ ಮಗುವು ಕಲ್ಲಿನಮೇಲೆ ಬಿದ್ದಿತು; ಆದರೆ ಮಗುವಿಗೆ ಪೆಟ್ಟು ತಗ ಲದೆ ಆ ಕಲ್ಲೇ ಸೀಳಿತಂತೆ! ಇಂಥ ವಜ್ರದೇಹದ್ದು ಆ ಕೂಸು! ಭೀಮನು ಹುಟ್ಟಿದ ಮುನ್ನಾರಾತ್ರಿಯೇ ಗಾಂಧಾರಿಗೆ ದುರ್ಯೋಧನನೆಂಬ ಮಗನು ಹುಟ್ಟಿದನು; ಮುಂದೆ ಒಂದು ವರುಷದ ಮೇಲೆ ಕುಂತೀದೇವಿಗೆ ಇಂದ್ರ ಮಹಾಮಂತ್ರದಿಂದ, ಧನುರ್ಧರರಲ್ಲಿ ಶ್ರೇಷ್ಠನೂ, ಭಕ್ತಶಿರೋಮಣಿಯೂ, ಶ್ರೀಕೃಷ್ಣಸಖನೂ ಆದ ಅರ್ಜುನನು ಹುಟ್ಟಿದನು. ಮೂರು ಮಂದಿ ಮಕ್ಕ ಳಾದರೂ ಪಾಂಡುರಾಜನ ಮಕ್ಕಳಾಸೆಯು ತೃಪ್ತವಾಗಲಿಲ್ಲ. ಉಳಿದ ಮಂತ್ರಬಲದಿಂದ ಇನ್ನೂ ಮಕ್ಕಳನ್ನು ಪಡೆಯೆಂದು ಪಾಂಡುರಾಜನು ಹೇಳುವ ಸಮಯದಲ್ಲಿ ಕುಂತೀದೇವಿಯು ನಡುವೇ ಅಂದದ್ದು— "ಹೇ ಕುರುನಂದನ! ಮುತ್ತಿನಂಥ ಮೂರು ಮಕ್ಕಳು ನಾಲವೇ? ಮಂತ್ರಬಲ ದಿಂದ ಮಕ್ಕಳನ್ನು ಪಡೆಯುವದು ಕೂಡ ನಿಯೋಗದಿಂದಲೇ ಮಕ್ಕಳನ್ನು ಪಡೆದಂತೆ! ಯೋಗಮಾಯಾಮೂರ್ತಿಯ ಬಲದಿಂದ ಮಕ್ಕಳಾಗುವವು; ಅದು ಕಾರಣ ನಿಯೋಗದ ನಿಯಮವು ಇದಕ್ಕೂ ಅನ್ವಯಿಸುವದು. ನಿಯೋಗದಲ್ಲಿ ಮೂರುಸಾರೆ ಗರ್ಭ ತಾಳುವದು ಶಾಸ್ತ್ರ ಸಮ್ಮತವು. ನಾಲ್ಕನೇ ಸಂಬಂಧವೂ ಸ್ವಲ್ಪ ಹೀನವೇ. ಅಂತಹ ಸಂಬಂಧವನ್ನು ಮಾಡಿದವಳಿಗೆ ಸ್ವೈರಿಣಿ ಎಂಬ ಹೆಸರು. ೫ನೆಯ ಸಾರೆಯ ಸಂಬಂಧ ದಿಂದಂತೂ ಆ ಹೆಣ್ಣು 'ಬಸವಿಯೇ' ಎನಿಸುವಳು. ಇನ್ನು, ಆ ಮಾತನ್ನೇ ಎತ್ತಲಾಗದು." ಕುಂತಿಯ ಖಂಡುತುಂಡಾದ ಉತ್ತರ ಕೇಳಿ ಪಾಂಡು ರಾಜನು ಸುಮ್ಮನಾದನು. ಇತ್ತ ಗಾಂಧಾರಿಯ ಹೊಟ್ಟೆಯಿಂದ ನೂರು

ಮಂದಿ ಮಕ್ಕಳೂ, ಕುಂತೀದೇವಿಗೆ ಮೂರು ಮಂದಿ ಮಕ್ಕಳಾದರು. ಮಾದ್ರಿದೇವಿಯ ಹೊಟ್ಟೆಯಿಂದ ಮಾತ್ರ ಸಂತಾನವೇ ಇರಲಿಲ್ಲ. ಆಗ ಅವಳು ಏಕಾಂತದಲ್ಲಿ ಪಾಂಡುರಾಜನನ್ನು ಕುರಿತು "ನನ್ನ ಹೊಟ್ಟೆಯಿಂದ ಮಕ್ಕಳಿಲ್ಲ. ಸುಲಭವಾಗಿ ಆಗುವ ಬಗೆಯೂ ಇಲ್ಲ. ಕುಂತೀದೇವಿಯಲ್ಲಿ ಇನ್ನೂ ಒಂದು ಮಂತ್ರವು ಉಳಿದಿರುವದು. ದಯವಿಟ್ಟು ಕುಂತೀದೇವಿಯು ಆ ಮಂತ್ರದ ಫಲವನ್ನು ನನಗೆ ಕೊಟ್ಟರೆ, ನನಗೂ ಮಕ್ಕಳ-ಸುಖ ದೊರಕುವದು" ಅಂದಳು. ಮಾದ್ರಿಯ ಮಾತು ಕೇಳಿ ಪಾಂಡುರಾಜನು ಆಗಲಿ ಎಂದನು. ಅದರಂತೆ ಕುಂತಿಗೆ ತಿಳುಹಲು ಆಕೆ ಹರುಷದಿಂದ ಉಪದೇಶಿಸಿದ ಆ ಮಂತ್ರಬಲದಿಂದ ಮಾದ್ರಿಗೆ ನಕುಲ, ಸಹದೇವ, ಎಂಬ ಅವಳಿ-ಜವಳಿ ಮಕ್ಕಳಾದರು. ಮಾದ್ರಿಯೆಂದರೆ ಒಡಹುಟ್ಟಿದ ತಂಗಿ ಎಂತಲೇ ಕುಂತೀದೇವಿಯ ಭಾವನೆ. ಸವತಿಯರ ಮಕ್ಕಳ ನಾಶವು ಹೇಗಾದೀತೆಂಬ ಚಿಂತೆಯಲ್ಲಿರುವ ಹೆಣ್ಣುಮಕ್ಕಳೇ ಬಹಳ. ಸವತಿಯರಿಗೆ ಮಕ್ಕಳಾಗಲೆಂದು ಹಾರೈಸುವವರು ಔಷಧಕ್ಕಾದರೂ ಸಿಗುವರೋ ಇಲ್ಲವೋ ಸಂಶಯ. ಮಕ್ಕಳಾದಂದಿನಿಂದ ಪಾಂಡುರಾಜನ ಮನಸು ಮತ್ತೆ ಹುರಿಗೊಂಡಿತು. ಮತ್ತೆ ಬಿಲ್ಲು, ಬಾಣಗಳನ್ನು ಸಜ್ಜುಗೊಳಿಸಿದನು. ವನ್ಯ ಪಶು ಪಕ್ಷಿಗಳಿಂದ ತನ್ನ ಹೆಂಡರು ಮಕ್ಕಳನ್ನು ಜೋಪಾನ ಮಾಡುವದರಲ್ಲಿ ಪಾಂಡುರಾಜನು ಬಹು ಜಾಗರೂಕತೆ ವಹಿಸುತ್ತಿದ್ದನು. ಕುಂತೀ ಮಾದ್ರಿಯರಿಗೂ ಮತ್ತೆ ಆನಂದದ ದಿವಸಗಳು ಬಂದವು. ಮಕ್ಕಳ ಬಾಲಲೀಲೆಯನ್ನು ನೋಡಿ ಆನಂದ ಸಾಗರದಲ್ಲಿ ಓಲಾಡಹತ್ತಿದರು; ತೊದಲ್ನುಡಿಯನ್ನು ಕೇಳಿ ಹಿರಿಹಿರಿ ಹಿಗ್ಗುತ್ತಿದ್ದರು. ಐದು ಮಂದಿ ಮಕ್ಕಳ ಲೀಲೆ, ಆಟ, ನೋಟ, ಹಾಸ್ಯ ಮುಂತಾದವುಗಳಿಂದ ಪಾಂಡುರಾಜನ ಕುಟೀರವು ಆನಂದದಿಂದ ಗಹಗಹಿಸುತ್ತಿದ್ದಿತು. ಸೃಷ್ಟಿಸೌಂದರ್ಯ, ಕೌಟುಂಬಕ ಸೌಖ್ಯ, ಇವುಗಳ ಪ್ರಭಾವದ ಪರಿಣಾಮವು ಪಾಂಡುರಾಜನ ಮಕ್ಕಳ ಮೇಲೆ ಚನ್ನಾಗಿಯೇ ಆಯಿತು. ಅವರಲ್ಲಿ ಸಾತ್ವಿಕವೃತ್ತಿಯು ಹೆಚ್ಚಾಗಿ ಚಿಕ್ಕಂದಿನಲ್ಲಿಯೇ ಈಶಭಕ್ತಿಯ ಕಡೆಗೆ ಅವರ ಮನವು ಒಲಿಯಲಾರಂಭಿಸಿತು. ಯೋಗ್ಯ ಕಾಲದಲ್ಲಿ ಅವರ ಉಪನಯನ ಮುಂತಾದ ಸಂಸ್ಕಾರವಾಗಿ ಅಲ್ಲಿಯೇ ಋಷಿಗಳ ಆಶ್ರಮದಲ್ಲಿ ವೇದಾಧ್ಯಯನವು ಪ್ರಾರಂಭವಾಯಿತು. ಕುರುವಂಶದ ಬೀಜ

ಗಳಾದ ಪಾಂಡುಪುತ್ರರು ಶುಭಲಕ್ಷಣ ಸಂಪನ್ನರು, ಚಂದ್ರನಂತೆ ಮುಖವುಳ್ಳವರು; ಮೃಗೇಂದ್ರನಂತೆ ದರ್ಪವುಳ್ಳವರು. ಅರಣ್ಯದಲ್ಲಿ ಪ್ರತಿ ದೇವತೆಗಳಂತೆ ಅವರು ಶೋಭಿಸುತ್ತಿದ್ದರು.

**ಮುಂಬರುವ ದುಃಖದ ಬೀಜ:**—ಇತ್ತ ಹಸ್ತಿನಾಪುರದಲ್ಲಿ ಕುಂತೀದೇವಿಯ ಭಾವೀದುಃಖದ ಬೀಜವು ಬಿತ್ತಲ್ಪಟ್ಟಿತ್ತು. ಅದು ನಡುವೇ ಕಮರುವ ಆಸೆಯೂ ತಲೆಸು ತಲೆದೋರುತ್ತಿತ್ತು; ಆದರೆ ದೈವದ ಮುಂದೆ ಓಡುವರಾರು? ಆ ವಿಷದ ಅಂಕುರವು ಕಮರದೆ ಹಾಗೆಯೇ ಕಸುವಿನಿಂದ ಕಿತ್ತಿಕೊಂಡು ಮೇಲಕ್ಕೆದ್ದಿತು. ಕುಂತೀದೇವಿಗಿಂತ ಮೊದಲೇ ಒಂದು ವರುಷ ಗಾಂಧಾರಿಯು ಬಸಿರಿದ್ದಳು. ಇತ್ತ ಕುಂತೀದೇವಿಯ ಹೊಟ್ಟೆಯಲ್ಲಿ ಧರ್ಮರಾಜನು ಹುಟ್ಟಿದ್ದರಿಂದ ಕುಂತೀದೇವಿಗೆ ಆ ಅರಣ್ಯವೇ ಇಂದ್ರಭವನವಾಯಿತು. ಇತ್ತ ಗಾಂಧಾರಿಯ ಬಸಿರು ಬೆಳೆಯದೆ ಅಷ್ಟಕ್ಕೇ ನಿಂತುದರಿಂದ ಇಂದ್ರಭವನದಂತಿದ್ದ ಹಸ್ತಿನಾಪುರದ ಅರಮನೆಯೇ ಗಾಂಧಾರಿಗೆ ಅರಣ್ಯವಾಯಿತು. "ಕುಂತಿಗೆ ನನ್ನ ಮೊದಲು ಮಕ್ಕಳೇ? ನನ್ನೀ ಜನ್ಮವು ಸುಡಲಿ! ವ್ಯಾಸರು ನನ್ನ ಹೊಟ್ಟೆಯಲ್ಲಿ ೧೦೦ ಮಂದಿ ಮಕ್ಕಳಾಗುವರೆಂದು ಆಶೀರ್ವದಿಸಿದ್ದರು; ಆದರೆ ಎರಡು ವರುಷವಾದರೂ ಬಸಿರು ಬೆಳೆಯದಲ್ಲ" ಎಂದು ಗಾಂಧಾರಿಯು ಮತ್ಸರದಿಂದ ಒಳಗೇ ಕುದಿಯ ತೊಡಗಿದಳು; ಆ ಭರದಲ್ಲಿ ಅವಳು ತನ್ನ ಗರ್ಭವನ್ನು ಕೆಡಹಿಕೊಂಡಳು. ಅದರಿಂದಾದ ಫಲಪ್ರಾಪ್ತಿಯೆಂದರೆ, ಒಂದು ಮಾಂಸದ ಮುದ್ದೆಯು. ಕೂಡಲೇ ವ್ಯಾಸರನ್ನು ನೆನೆದಳು; ವ್ಯಾಸರು ಪ್ರತ್ಯಕ್ಷರಾದರು. ಗಾಂಧಾರಿಯು ಅವರಿಗೆ ನಮಸ್ಕರಿಸಿ ಅಂದದ್ದು—"ಸ್ವಾಮೀ, ತಾವು ನನ್ನ ಗರ್ಭದಲ್ಲಿ ನೂರುಜನ ಮಕ್ಕಳಾಗುವರೆಂದು ಹರಸಿದಿರಿ. ಇದೇನು ನೋಡಿ! ಮಾಂಸದ ಮುದ್ದೆ!" ವ್ಯಾಸರು ನಸುನಕ್ಕು "ಗಾಂಧಾರಿ? ಇದು ನಿನ್ನಲ್ಲಿಯ ಮತ್ಸರದ ಫಲವು! ಆದರೂ ಚಿಂತೆಯಿಲ್ಲ, ಮಾಂಸದ ಮುದ್ದೆಯನ್ನು ನೂರಾ–ಒಂದು ತುಂಡಾಗಿ ಮಾಡಿ ಬೇರೆ ಬೇರೆ ಕೊಡಗಳಲ್ಲಿರಿಸು. ಯೋಗ್ಯಕಾಲಕ್ಕೆ ಪ್ರತಿಯೊಂದು ಕೊಡದಲ್ಲಿ ಒಂದೊಂದರಂತೆ ನೂರುಮಕ್ಕಳು, ಕಡೆಯಕೊಡದಲ್ಲಿ ಒಬ್ಬ ಹೆಣ್ಣುಮಗಳು ಹುಟ್ಟುವರು" ಎಂದು ನುಡಿದರು. ಈ ಬಗೆಯಾಗಿ ಗಾಂಧಾರಿಯ ಹೊಟ್ಟೆ

ಯಿಂದ ನೂರೊಂದು ಮಕ್ಕಳಾದರು. ಅವರಲ್ಲಿ ಹಿರಿಯುವನೇ ದುರ್ಯೋಧನನು. ಧರ್ಮರಾಜನು ಹುಟ್ಟಿದಕೂಡಲೇ ಧೃತರಾಷ್ಟ್ರನಿಗೂ ತುಸು ಕೆಡಕೆನಿಸಿತ್ತು. ಕುರುಪಾಂಡವರಲ್ಲಿ ಧರ್ಮರಾಜನು ಎಲ್ಲಕ್ಕೂ ಹಿರಿಯುವನು. ಅವನೇ ಶಾಸ್ತ್ರದಿಂದ ಪಟ್ಟಕ್ಕೆ ಬಾಧ್ಯಸ್ಥನು. ದುರ್ಯೋಧನನು ಹುಟ್ಟಿದ ದಿವಸ ಧೃತರಾಷ್ಟ್ರನು, ಭೀಷ್ಮ, ವಿದುರ ಮುಂತಾದ ಸಾಮಂತ, ಮಂತ್ರಿಗಳ ಸಭೆಕೂಡಿಸಿ ರಾಜ್ಯಕ್ಕೆ ಯಾರು ಬಾಧ್ಯಸ್ಥರೆಂಬುವ ಮಾತನ್ನೆತ್ತಲು, ಎಲ್ಲರೂ ಧರ್ಮರಾಜನೇ ಎಂದು ಸ್ಪಷ್ಟವಾಗಿ ಹೇಳಿದರು. ಅಂದಮೇಲಂತೂ ಕೇಳುವದೇನು? ಮತ್ಸರಕ್ಕೆ ಮತ್ತಿಷ್ಟು ಪುಟವಿಟ್ಟಂತಾಯಿತು. ರಾಜ್ಯಾಧಿಕಾರವು ತಮ್ಮದಾಗಿದ್ದರೂ ಅರಣ್ಯದಲ್ಲಿ ಸಾತ್ವಿಕಾನಂದದಲ್ಲಿ ಭಗವಂತನ ಧ್ಯಾನ-ಚಿಂತೆಯಲ್ಲಿರುವ ಪಾಂಡು ಕುಂತಿಯರ ಚಿತ್ತವೆತ್ತ? ತನ್ನ ನೆಗೆಣ್ಣಿಗೆ ಮೊದಲು ಮಕ್ಕಳಾದರೆಂಬ ಮತ್ಸರ ರಭಸದಲ್ಲಿ ಗರ್ಭವನ್ನು ಕೆಡಹಿಕೊಂಡು, ಮಕ್ಕಳಾದಮೇಲೆ ತನ್ನವರಿಗೆ ರಾಜ್ಯಾಧಿಕಾರವಿಲ್ಲದ ರಾಜ್ಯವನ್ನು ನುಂಗುವ ದುರಾಶೆಯಿಂದ ಹಸ್ತಿನಾಪುರದಲ್ಲಿ ತಳಮಳಿಸುವ ಗಾಂಧಾರಿ ಧೃತರಾಷ್ಟ್ರರ ಚಿತ್ತವೆತ್ತ? ಸುಖ-ದುಃಖದ ಮೂಲ ಕಾರಣವು-ಮನವೇ ಸರಿ.

**ಪಾಂಡುರಾಜನ ಮರಣ:—** ಕುಂತೀದೇವಿಯು ಮನೆಯ ಕೆಲಸದಲ್ಲಿಯೂ ಮಕ್ಕಳ ಪೋಷಣೆಯಲ್ಲಿಯೂ ಒಳ್ಳೇ ಜಾಣೆ. ನಕುಲ ಸಹದೇವರು ಮಾದ್ರಿಯ ಮಕ್ಕಳಾದರೂ ಅವರಿಗೆ ಕುಂತಿಯ ಅಭ್ಯಾಸವೇ ಹೆಚ್ಚು. ಮಾದ್ರಿಯು ಹೆತ್ತವಳೆಂದು ತಾಯಿಯಷ್ಟೆ; ಕುಂತೀದೇವಿಯೇ ಅವರಿಗೆ ತಾಯಿಗಿಂತ ಮಿಗಿಲಾಗಿದ್ದಳು. ಅದರಲ್ಲಿ ಸಹದೇವನಂತೂ ಕುಂತಿಗಾಗಿ ಜೀವ ಕೊಡುತ್ತಿದ್ದನು. ಅವನೇ ಕುಂತಿಗೆ ಅತಿ ಪ್ರೀತಿಯ ಮಗನು. ಕುಂತೀದೇವಿಯು ಈ ಐದು ಮಕ್ಕಳನ್ನೊಡಗೂಡಿ ಆ ವನದಲ್ಲಿ ಅವರಿಗೆ ಪರ್ವತದ ರಮ್ಯತೆಯನ್ನು ತೋರಿಸುತ್ತಲೂ, ಮುಗಿಲು ಮುಟ್ಟುವ ಗಿಡಗಳ ಮನೋಹರ ಸೊಬಗನ್ನು ತೋರಿಸುತ್ತಲೂ, ನಾನಾತರದ ಆನಂದವನ್ನೀವ ಅನಂತ ವನ್ಯಪುಷ್ಪಗಳ ತರತರದ ಆಭರಣಗಳಿಂದ ಅವರನ್ನು ಶಿಂಗರಿಸುತ್ತಲೂ, ವಿವಿಧ ಹಿತೋಪದೇಶದ ಕಥೆಗಳನ್ನು ಹೇಳುತ್ತಲೂ, ನಿಸರ್ಗಾನಂದದಲ್ಲಿ ಕಾಲಹರಣ ಮಾಡುತ್ತಿದ್ದಳು. ಪಾಂಡುರಾಜನ ಕುಟೀರದಲ್ಲಿ

ಯಾವಾಗಲೂ ಮಕ್ಕಳ ಕುಲುಕುಲು ನಗೆ, ಭಗವಂತನ ನಾಮಸ್ಮರಣೆ, ಅತಿಥಿಅಭ್ಯಾಗತರ ಸೇವೆ, ಇವೇ ಕಂಡು ಬರುತ್ತಿದ್ದವು. ಆನಂದವೂ ದುಃಖವೂ ಯಾವಾಗಲೂ ಒಂದನ್ನೊಂದು ಬೆನ್ನಟ್ಟಿ ಬರುವವೆಂದೆನ್ನು ವದು ಸುಳ್ಳಲ್ಲ. ಈ ನಿಯಮದಂತೆ ಕುಂತಿಯ ಆನಂದದ ದಿವಸಗಳನ್ನು ನೋಡಿ ದೈವವೂ ಮತ್ಸರಗೊಂಡಿತು. ಒಂದು ದಿವಸ ಪಾಂಡುರಾಜನು ಮಾದ್ರಿಯನ್ನೊಡಗೊಂಡು ನಿಸರ್ಗ ಮನೋಹರವಾದ ಸೃಷ್ಟಿಯ ಸೊಬ ಗನ್ನು ನೋಡುತ್ತ, ಆನಂದದಿಂದ ಮಾದ್ರಿಯೊಡನೆ ಮಧುರ ಮಾತಾಡುತ್ತ ವನದಲ್ಲಿ ಅಲೆಯುತ್ತಿದ್ದನು. ಬಹಳದೂರದವರೆಗೆ ಹೋಗಿ, ವಿಶ್ರಾಂತಿ ಗಾಗಿ ಒಂದು ಮನೋಹರವಾದ ದಿಬ್ಬದಮೇಲೆ ಇಬ್ಬರೂ ಕುಳಿತರು. ಸುತ್ತಲೂ ಚಿತ್ತವನ್ನು ಕುಣಿಸುವನೋಟ; ವಸಂತನ ಚಲ್ಲಾಟ; ಮಲಯ ಮಾರುತನ ತಂಪಾದ ಸುಳಿದಾಟ; ಇದಕ್ಕೆ ಪುಟಕೊಡಲೋ ಏನೋ ಎಂಬುವಂತೆ, ರತಿಯನ್ನು ಕೂಡ ಧಿಕ್ಕರಿಸುವ ಮಾದ್ರಿಯ ಸುಂದರ ಪ್ರತಿ ಮೆಯು ಶುಭ್ರವಸ್ತ್ರವನ್ನುಟ್ಟು ಸರಸಸಲ್ಲಾಪದೊಡನೆ ಪಾಂಡುರಾಜನ ಹತ್ತರವೇ ಬೆಳಗುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಪಾಂಡುರಾಜನಲ್ಲಿ ಅಡಗಿದ್ದ ಕಾಮವೆಂಬ ಉರಿಗೆ ಪುಟಕೊಟ್ಟಂತಾಗಿ ಅದು ಭಗ್ ಎಂದಿತು. ಈ ಕಾಲಕ್ಕೆ ಅವನು ಶಾಪವನ್ನು ಮರೆತನು. ಮಾದ್ರಿಯು ಎಷ್ಟು ಬಿನ್ನವಿ ಸಿದರೂ ಕೇಳಲಿಲ್ಲ. ಕಾಮಾವೇಶದಲ್ಲಿ ಪಾಂಡುರಾಜನು ಮಾದ್ರಿದೇವಿ ಯನ್ನು ಬಲಾತ್ಕಾರದಿಂದ ಹಿಡಿದೆಳೆದು ರಭಸದಿಂದ ಬಿಗಿದಪ್ಪಿಕೊಳ್ಳಲು ತತ್‌ಕ್ಷಣವೇ ಜೀವ ಕಡೆಗಾಗಿ ನೆಲಕ್ಕುರುಳಿದನು. ಮಾದ್ರಿದೇವಿಯು ಗೋಳಿಟ್ಟು ಅಳಹತ್ತಿದಳು. ಹಿಂದಿನಿಂದ ಮಕ್ಕಳೊಡನೆ ಚಲ್ಲಾಟವಾಡುತ್ತ ಬರುತಿರುವ ಕುಂತೀದೇವಿಯು ಲಗುಬಗೆಯಿಂದ ಬರುವದರೊಳಗಾಗಿ ಪಾಂಡುರಾಜನು ಮೃತನಾಗಿ ಬಿದ್ದಿದ್ದನು; ಮಾದ್ರಿದೇವಿಯು ಪರಿಪರಿ ಯಿಂದ ಶೋಕಮಾಡುತ್ತಿದ್ದಳು. ಇದನ್ನು ನೋಡಿ ಕುಂತೀದೇವಿಗೂ ದುಃಖವು ಉಕ್ಕಿ ಬಿರುಗಾಳಿಯ ಹೊಡತಕ್ಕೆ ಹಳೇಮರವು ಬುಡಮೇಲಾಗು ವಂತೆ ನೆಲಕ್ಕೊರಗಿದಳು; ತುಸು ಹೊತ್ತಿನಮೇಲೆ ಚೇತರಿಸಿಕೊಂಡೆದ್ದ ನಂತರ ಮಾದ್ರಿಯೂ ಕುಂತೀದೇವಿಯೂ ಪರಸ್ಪರ ತಬ್ಬಿಕೊಂಡು ಪತಿಯ ಗುಣಗಳನ್ನು ನೆನೆನೆನೆದು ಬಿಕ್ಕಿಬಿಕ್ಕಿ ಅಳಹತ್ತಿದರು. "ಋಷಿಯ ಶಾಪವು

ಕೊನೆಗೆ ನಿಜವಾಯಿತೇ ? ಇಂದಿನವರೆಗೆ ರಾಜನಿಗೆ ಕಾಮಬಾಧೆ ತಗಲ ಬಾರದಂತೆ ರಕ್ಷಿಸಿದೆವು; ಕೊನೆಗೆ ಆಗುವದು ಆಗಿಯೇ ಹೋಯಿತಲ್ಲ ! ಏನಿದು ದುರದೃಷ್ಟ ? ನಿನಗೆ ದಯಾ–ಮಾಯೆಯು ಇಲ್ಲವೇ ?" ಎಂದು ಮೈಮರೆತು ದುಃಖಿಸುತ್ತಿರಲು ಅವರ ಅಳುವ ಧ್ವನಿಯನ್ನು ಕೇಳಿ ಆ ವನ ದಲ್ಲಿಯ ಋಷಿಗಳೂ ಅಲ್ಲಿಗೆ ಧಾವಿಸಿ ಬಂದರು. ಪಾಂಡುರಾಜನ ಮೃತ ಶರೀರವನ್ನು ನೋಡಿ ಅವರಿಗೂ ಪರಮದುಃಖವಾಯಿತು; ಆದರೂ ಅವರು ಕುಂತೀ ಮಾದ್ರಿಯರಿಗೆ ಸಮಾಧಾನ ಹೇಳಿ— "ಅಮ್ಮಾ, ನೀವಿಬ್ಬರೂ ತಿಳಿದವರು, ಸುಸಂಸ್ಕೃತರು. ಹೀಗೆ ಧೈರ್ಯಗೆಟ್ಟರೆ ಹೇಗೆ ? ಸಣ್ಣ ಮಕ್ಕಳೂ ಹಂಬಲಿಸುತ್ತಿರುವವು. ಹುಟ್ಟಿದವರಿಗೆ ಮರಣವು ಕಟ್ಟಿಟ್ಟದ್ದೇ. ನಿಮ್ಮ ಸಹಾಯಕ್ಕೆ ನಾವು ಸಿದ್ಧರಿರುವೆವು" ಎಂದು ಸಂತೈಸಿದರು. ಅವರ ಸಂತವಣೆಯಿಂದ ಅವರು ಮುಂದಿನ ವಿಚಾರ ನಡಿಸಿದರು.

**ಸತಿಹೋಗುವ ಪದ್ಧತಿ**— ಪ್ರಾಚೀನಕಾಲಕ್ಕೆ ಗಂಡನು ಮೃತ ನಾದರೆ ಹೆಂಡತಿಯು ಅವನೊಡನೆ ಚಿತೆಯಲ್ಲಿ ಸುಟ್ಟುಕೊಂಡು ಸಾಯುವ ನಡೆವಳಿಯು ಇತ್ತಷ್ಟೇ ! ಇದಕ್ಕೆ 'ಸಹಗಮನ' ಎಂದು ಹೆಸರು. ಇಂತಹ ಸಾಧ್ವಿಗೆ "ಸತಿ" ಎಂದೆನ್ನುತ್ತಿದ್ದರು. ಮಹಾಭಾರತ ಕಾಲಕೆ ಸತಿಯು ಸಹಗಮನ ಪದ್ಧತಿಯು ವಿರಲವಾಗಿತ್ತೆಂದು ತೋರುತ್ತದೆ. ಯಾಕೆಂದರೆ ಶಂತನುರಾಜನು ಮರಣಹೊಂದಿದ ಮೇಲೆ ಸತ್ಯವತಿಯು ಸಹಗಮನ ಮಾಡದೇ ಜೀವದಿಂದಿದ್ದು, ರಾಜ್ಯಭಾರದಲ್ಲಿ ಯೋಗ್ಯವಾದ ಸಲಹೆ ಕೊಡುತ್ತಿದ್ದಳು. ವಿಚಿತ್ರವೀರ್ಯನು ಮೃತನಾದ ಮೇಲೆ ಅವನ ಹೆಂಡಂದಿರಾದ ಅಂಬಿಕಾ ಅಂಬಾಲಿಕಾ ಇವರಿಬ್ಬರೂ ಸಹಗಮನ ಮಾಡಲಿಲ್ಲ. ಕುರುಕ್ಷೇತ್ರದ ಯುದ್ಧದನಂತರ ಕೌರವರ ಹೆಂಡಂದಿರು ಸತಿಹೋದ ಬಗ್ಗೆಯೂ ಮಹಾಭಾರತದಲ್ಲಿ ಉಲ್ಲೇಖವಿಲ್ಲ. ಯಾದವರ ನಾಶವಾದ ಮೇಲೆ ಕೃಷ್ಣನ ಹೆಂಡಂದಿರಲ್ಲಾರೂ ಸತಿಹೋಗಲಿಲ್ಲ; ಆದರೆ, ಸತ್ಯವತೀ, ಅಂಬಾಲಿಕಾ, ಕುಂತೀ, ಹಾಗೂ ಕೃಷ್ಣನ ಕೆಲವು ಜನ ಮಡದಿಯರು ವಾನಪ್ರಸ್ಥ ಆಶ್ರಮವನ್ನು ಕೈಕೊಂಡು ವನದಲ್ಲಿ ಭಗವದಾರಾಧನೆಯಿಂದ ಕಾಲ ಕಳೆದು ತಮ್ಮ ದೇಹವಿಟ್ಟಂತೆ ಮಹಾಭಾರತದಲ್ಲಿ ಬರೆವಣಿಗೆಯುಂಟು. ಬೌದ್ಧಕಾಲದಲ್ಲಿ ಇಂಥ ಉದಾಹರಣೆಗಳೂ ಸಿಗುವದು ತುಸು ದುರ್ಲಭವೇ

ಸರಿ. ಮುಸಲ್ಮಾನರ ಆಳಿಕೆಯಲ್ಲಿ ಮಾತ್ರ ಸಹಗಮನದ ಉದಾಹರಣೆಗಳು ಕ್ರಮೇಣ ಹೆಚ್ಚಾಗಿ ಕಾಣುವಂತಿವೆ. ಇದಕ್ಕೆ ಕಾರಣಗಳು ಸ್ಪಷ್ಟವಾಗಿವೆ. ರಾಜರು ಮೃತರಾದ ಮೇಲೆ ಅವರ ಹಿಂದೆ ತಮ್ಮ ರಾಜಪುತ್ರರು ಚಿಕ್ಕವರಿರುವಾಗ ಚನ್ನಾಗಿ ರಾಜಕಾರ್ಯವನ್ನು ನಡಿಸಿದ ಹಿಂದೂ ಮಹಾರಾಣಿಯರ ಚರಿತ್ರಗಳನ್ನೋದಿದರೆ, ಮುಸಲ್ಮಾನರಾಳಿಕೆಯ ಮೊದಲು ಹಿಂದಸ್ಥಾನದಲ್ಲಿ ಸಹಗಮನವು ಅಷ್ಟೊಂದು ಪ್ರಚಾರದಲ್ಲಿದ್ದಿಲ್ಲವೆಂದೇ ತೋರುವದು. ಮುಸಲ್ಮಾನರು ಹಿಂದೂ ಹೆಂಗಳೆಯರನ್ನು ಗುಲಾಮರನ್ನಾಗಿ ಮಾಡಿ ಅರಬಸ್ಥಾನ ಮುಂತಾದ ದೇಶಗಳಿಗೆ ಕಳುಹುತ್ತಿದ್ದರು; ಇಲ್ಲವೆ ಹಿಂದುಸ್ಥಾನದಲ್ಲಿಯೇ ಮುಸಲ್ಮಾನ ಸರದಾರ ಸಾಮಂತ ಅಥವಾ ಬಾದಶಹರ ಝನಾನಖಾನೆಗಳಿಗೆ ಎಳೆದೊಯ್ಯುತ್ತಿದ್ದರು. ಸಿಂಧಪ್ರಾಂತವನ್ನು ಗೆದ್ದಮೇಲೆ ಆ ಸಣ್ಣಪ್ರಾಂತದಲ್ಲಿಯ ೬೦೦೦ ಅಬಲೆಯರನ್ನು ಮೀರಕಾಶೀಮನು ಬಸಿವೆಯರನ್ನಾಗಿ ಮಾಡಿ, ಮುಸಲ್ಮಾನರ ಕಾಮಸಂತರ್ಪಣೆಗೋಸ್ಕರ ಅರಬಸ್ಥಾನಕ್ಕೆ ಅಟ್ಟಿದನು. ಯುದ್ಧದಲ್ಲಿ ತಮಗೆ ಅಪಜಯವಾದರೆ ತಮ್ಮ ಹೆಂಡರು ಮಕ್ಕಳನ್ನು ಇಂತಹ ಅಸಮಾನದಿಂದ ಉಳುಹಲು ಹೆಣ್ಣುಮಕ್ಕಳು ಅಗ್ನಿಪ್ರವೇಶದಿಂದಾಗಲಿ ಅನ್ಯರೀತಿಯಿಂದಾಗಲೀ ಪ್ರಾಣತ್ಯಾಗಮಾಡುವ ನಿಯಮವನ್ನು ಹಿಂದುಗಳು ಮುಂಚಿತವಾಗಿಯೇ ಮಾಡಿಡಬೇಕಾಗಿತ್ತು. ಸಿಂಧದ ದಾಹರರಾಯನು ಯುದ್ಧಕ್ಕೆ ಹೊರಡುವಾಗ ತಾನು ಮೃತನಾದರೆ ಅಥವಾ ಯುದ್ಧದಲ್ಲಿ ಪರಾಜಯವನ್ನು ಹೊಂದಿದರೆ ತನ್ನ ಹೆಂಡಂದಿರನ್ನು ಕೂಡಲೇ ತಲೆಹೊಡೆಯಬೇಕೆಂದು ಮುಂಚಿತವಾಗಿಯೇ ಏರ್ಪಾಡು ಮಾಡಿದ್ದನಂತೆ! ಈ ಪ್ರಕಾರ ಸರದಾರರೂ ರಾಜರೂ, ತಮ್ಮ ಯುದ್ಧದಲ್ಲಿಯ ಮರಣದ ಪೂರ್ವ ಸಿದ್ಧತೆಯನ್ನು ಮಾಡಹತ್ತಿದ್ದರಿಂದ ಮೊದಲೇ ಅಷ್ಟಿಷ್ಟು ಧರ್ಮದಲ್ಲಿ ಆಧಾರವಿದ್ದ ಸತಿಯ ಸಹಗಮನದ ನಡೆವಳಿಗೆ ಮತ್ತಿಷ್ಟು ಕಳೆಯೇರಿತು. ಮಹಾಭಾರತ ಕಾಲಕ್ಕೆ ಸತಿ ಹೋಗಲೇಬೇಕೆಂದು ನಿರ್ಬಂಧವಿರಲಿಲ್ಲ. ಹೋದವಳು ಎಷ್ಟು ಪುಣ್ಯವಂತೆಯೋ ಅಷ್ಟೇ ಹೋಗದಿದ್ದ ಸಾಧ್ವಿಯೂ ಸರಿ! ಇಡೀ ಮಹಾಭಾರತದಲ್ಲಿ ನಮಗಂತೂ ಮಾದ್ರಿ, ಹಾಗೂ ಕೃಷ್ಣನ ಹೆಂಡಂದಿರಾದ ರುಕ್ಮಿಣಿ, ಶೈಬ್ಯಾ, ಹಾಗೂ ಜಾಂಬವತೀ ಈ ನಾಲ್ಕೇ ಸತಿಹೋದ ಉದಾಹರಣೆಗಳು

ಕಂಡುಬರುತ್ತವೆ.

**ಮಾದ್ರಿಯ ಸಹಗಮನ:**— ಕುಂತೀದೇವಿಯು ಮಾದ್ರಿಯನ್ನು ಕುರಿತು ಅಂದದ್ದು—"ತಂಗೀ, ನಾನು ಹಿರಿಯ ಹೆಂಡತಿ, ಪಟ್ಟದರಸಿ; ಆದಕಾರಣ ಪಾಂಡುರಾಜನೊಡನೆ ಸಹಗಮನ ಮಾಡುವ ಅಧಿಕಾರವು ನನ್ನದು. ಇದೋ ಈ ಐದು ಮಕ್ಕಳು ನಿನ್ನವು. ಅವರನ್ನು ಪೋಷಿಸುವ ಭಾರವು ನಿನ್ನದು. ನನಗೆ ಸಹಗಮನಕ್ಕೆ ಅಪ್ಪಣೆಕೊಡು." ಮಾದ್ರಿಯು ಈ ಮಾತನ್ನು ಕೇಳಿ ಅಂದದ್ದು—"ಅಕ್ಕಾ! ಹಾಗಾಗದು. ಪಾಂಡುರಾಜರು ನನ್ನ ಸಂಗದಲ್ಲಿಯೇ ಪ್ರಾಣಬಿಟ್ಟಿರುವರು. ಸ್ವರ್ಗದಲ್ಲಿ ನನ್ನ ಮಾರ್ಗವನ್ನೇ ನೋಡುತ್ತಿರಬಹುದು; ಆದುದರಿಂದ ನಾನೇ ಸತಿ ಹೋಗುವದುಚಿತವು. ನೀನು ಈ ಮಕ್ಕಳನ್ನು ಸಮತೆಯಿಂದಲೂ, ಮಮತೆಯಿಂದಲೂ ಜೋಪಾಸಮಾಡಲು ಶಕ್ತಳಾದಂತೆ ನಾನು ಆಗಲಾರೆನು. ಮೇಲಾಗಿ ಇನ್ನುಮುಂದೆ ಆ ಲೋಭಿಯಾದ ಧೃತರಾಷ್ಟ್ರನ ಮನೆಯಲ್ಲಿದ್ದುಕೊಂಡು ಈ ಚಿಕ್ಕಮಕ್ಕಳನ್ನು ಪೋಷಿಸುವ ಪ್ರಸಂಗವಿದೆ. ಆದಕ್ಕೆ ಬೇಕಾದ ಜಾಣ್ಮೆ, ಧೂರ್ತತನ, ಮುಂತಾದ ಅಮೂಲ್ಯ ಸದ್ಗುಣಗಳು ನಿನ್ನಲ್ಲಿದ್ದಂತೆ ನನ್ನಲ್ಲಿಲ್ಲ. ಅದು ಕಾರಣ, ನೀನೇ ಹಿಂದುಳಿಯುವದು ಉಚಿತ." ಆಗ ಕೂಡಿದ ಋಷಿಗಳು "ಕುಂತೀ ಮಾದ್ರಿಗಳಿರಾ—ಮಕ್ಕಳು ಚಿಕ್ಕವರು, ಧೃತರಾಷ್ಟ್ರನು ಲೋಭಿಯು; ಕುಂತಿಭೋಜನು ಕುಂತಿಯ ಸಾಕ ತಂದೆ; ಆದರಂತೆ ಮದ್ರಾಧೀಶನಾದ ಶಲ್ಯನು ಮಾದ್ರಿಯ ಅಣ್ಣನು. ನಿಮ್ಮಿಬ್ಬರ ಕಡೆಗೆ ದೃಷ್ಟಿಯಿಟ್ಟು ವೃಷ್ಣೀಜನರು, ಮದ್ರರು ಹಾಗೂ ಕುಂತಿಭೋಜರು ನಿಮಗೆ ಹಾಗೂ ನಿಮ್ಮ ಮಕ್ಕಳಿಗೆ ಬೆಂಬಲವಾಗಿ ನಿಲ್ಲಬಹುದು. ಸತಿ ಹೋಗುವದರಿಂದ ಪುಣ್ಯಬರುವದೆಂಬುವದೇನೋ ನಿಜ; ಆದರೆ ಗಂಡನು ಮೃತನಾದಮೇಲೆ ಹೆಂಡತಿಯು ಬ್ರಹ್ಮಚರ್ಯದಿಂದಿದ್ದು, ಮನೋವಾಕ್ಕಾಯದಿಂದ ಸದಾ ತನ್ನ ಮೃತಪತಿಯ ಚಿಂತನೆಯಲ್ಲಿ ಕಾಲ ಕಳೆಯಲು ಆ ಮಹಾಸತಿಯ ಪುಣ್ಯಪ್ರಭಾವದಿಂದ ಮೃತಪತಿಯ ಉದ್ಧಾರವಾಗುವದು. ಮಕ್ಕಳೆಂದರೆ ಕೇವಲ ಪತಿರೂಪರೇ ಸರಿ. ಅಂತಹ ಮಕ್ಕಳ ಉದ್ಧಾರವೂ ಆಗುವದು; ಆದಕಾರಣ ನೀವಿಬ್ಬರೂ ಜೀವದಿಂದಿರುವದೇ ಪ್ರಶಸ್ತವಾದ ಮಾರ್ಗವೆಂದು ಶಾಸ್ತ್ರವು ಹೇಳುತ್ತದೆ."

ಎಂದು ಹೇಳಿದರು. ಆದರೆ ಮಾದ್ರಿಯು ಸಹಗಮನ ಹೋಗುವದಾಗಿ ನಿರ್ಧರಿಸಿ ಚಿತಾಪ್ರವೇಶ ಮಾಡಿದಳು. ಈ ಪ್ರಕಾರ ಪಾಂಡು ಮಾದ್ರಿಯರ ದಹನವಿಧಿಯು ಮುಗಿದಕೂಡಲೇ ಆ ಋಷಿಗಳು 'ಪಾಂಡುರಾಜನ ಅನಾಥ ಹೆಂಡರು ಮಕ್ಕಳ ಹಿತಚಿಂತನೆಯ ಭಾರವು ನಮ್ಮದಾಗಿದೆ. ಆ ಹೊಣೆಯನ್ನು ಪೂರೈಸಬೇಕಾದರೆ ಕುಂತೀದೇವಿಯನ್ನೂ ಈ ಚಿಕ್ಕ ಮಕ್ಕಳನ್ನೂ ಸುರಕ್ಷಿತವಾಗಿ ಹಸ್ತಿನಾಪುರಕ್ಕೆ ಒಯ್ದು ಭೀಷ್ಮ ಧೃತರಾಷ್ಟ್ರರಿಗೊಪ್ಪಿಸಬೇಕು.' ಎಂದು ವಿಚಾರಮಾಡಿ ಕುಂತೀದೇವಿಯನ್ನೂ ಆ ಮಕ್ಕಳನ್ನೂ ಸಂಗಡ ಕರಕೊಂಡು ಹಸ್ತಿನಾಪುರಕ್ಕೆ ಕೂಡಲೇ ಹೊರಟರು.

**ಋಷಿಗಳೊಡನೆ ಪಾಂಡವರ ಹಸ್ತಿನಾಪುರ ಪ್ರವೇಶ:—** ಅವರು ಹಸ್ತಿನಾಪುರಕ್ಕೆ ಹೋಗಿ ತಲ್ಪಿದ ಸಮಯಕ್ಕೆ ಅಗಸೆಯ ಬಾಗಿಲು ಮುಚ್ಚಿತ್ತು; ಆ ಋಷಿಗಳು ಅಗಸೇ ಕಾಯುವವನಿಗೆ ತಾವು ಬಂದ ಸುದ್ದಿಯನ್ನು ರಾಜಸಭೆಗೆ ತಿಳುಹಲು ಹೇಳಿದರು. ಆದರಂತೆ ಅತಿ ನಸುಕಿನಲ್ಲಿಯೇ ಧೃತರಾಷ್ಟ್ರನೂ, ಭೀಷ್ಮ, ವಿದುರ, ಕೃಪ ಮುಂತಾದವರೂ ಪಟ್ಟಣಿಗರೂ ಮಹಾತಪಸ್ವಿಗಳ ದರ್ಶನಕ್ಕಾಗಿ ಅಗಸೆಯನ್ನು ದಾಟಿ ಬಂದರು. ಆ ತಪಸ್ವಿಗಳಿಗೆ ಯೋಗ್ಯ ಆದರಾತಿಥ್ಯವನ್ನು ಮಾಡಿ. ಬಂದ ಉದ್ದೇಶವನ್ನು ಕೇಳಲು ಆ ಮಹಾತ್ಮರು ಪಾಂಡುರಾಜನ ಕಥೆಯನ್ನು ಹೇಳಿ ಕುಂತೀ ಹಾಗೂ ಅವಳ ಮಕ್ಕಳನ್ನು ಭೀಷ್ಮಧೃತರಾಷ್ಟ್ರರಿಗೆ ಒಪ್ಪಿಸಿ ಅವರನ್ನು ಚನ್ನಾಗಿ ಕಾಪಾಡಲು ಉಪದೇಶಮಾಡಿ, ಹೋದರು. ಪಾಂಡುರಾಜನ ಮರಣದ ಸುದ್ದಿಯನ್ನು ಕೇಳಿ ಇಡೀ ಪಟ್ಟಣವೇ ಗೋಳಿಟ್ಟಿತು. ತಾಯಿ ಅಂಬಾಲಿಕೆ, ಅಜ್ಜಿ ಸತ್ಯವತಿಯವರು ಬಲು ಹಲುಬಿದರು. ಆಪ್ತೇಷ್ಟರನ್ನು ನೋಡಿದಕೂಡಲೇ ಹತ್ತಿಕ್ಕಿದ್ದ ಕುಂತಿಯ ದುಃಖವು ಉಕ್ಕೇರಿತು. ಪಟ್ಟಣದ ಪರಿವಾರದ ಸಂಗಡ ದುರ್ಯೋಧನ ಮುಂತಾದ ಧೃತರಾಷ್ಟ್ರನ ನೂರುಮಂದಿ ಮಕ್ಕಳೂ ಬಂದಿದ್ದರು. ಬಂದ ಋಷಿಗಳು ಪಾಂಡುಕುಮಾರರನ್ನು ಧೃತರಾಷ್ಟ್ರ ಮುಂತಾದವರಿಗೆ ಗುರುತುಮಾಡಿಕೊಟ್ಟು, ಅವರ ಗುಣ, ಜಾಣತನ, ನೋಡಿದಮಾತ್ರಕ್ಕೆ ಯಾರಿಗಾದರೂ ಹಸಿವೆ ನೀರಡಿಗೆ ಹರಿಯುವಂತಿದೆ." ಎಂದು ಹೊಗಳಿದ್ದು ಕೇಳಿ ದುರ್ಯೋಧನನಿಗೆ ಏನೆನಿಸಿರಬಹುದೋ ಯಾರು ಬಲ್ಲರು? ಧೃತರಾಷ್ಟ್ರನು ಎಲ್ಲರನ್ನೂ

ಆದರದಿಂದ ಬರಮಾಡಿಕೊಂಡು, ಪಾಂಡುರಾಜನ ಅಂತ್ಯಕರ್ಮವನ್ನು ವಿದುರನಿಂದ ಯಥಾವಿಧಿ ನೆರವೇರಿಸಿದನು. ಒಂದು ದಿವಸ ವ್ಯಾಸರು ತಮ್ಮ ತಾಯಿ ಸತ್ಯವತಿಗೆ ಅಂದದ್ದು—"ಅಮ್ಮಾ-ಇನ್ನು ಆನಂದದ ದಿವಸಗಳು ಮುಗಿದವು. ಕುಲನಾಶವು ಸ್ವಲ್ಪ ದಿನಗಳಲ್ಲಿಯೇ ಆಗುವದಿದೆ. ಧೃತರಾಷ್ಟ್ರನ ದುಷ್ಟಮಕ್ಕಳೇ ಕೌರವಕುಲಕ್ಕೆ ಕೊಡಲೆಯಾಗುವರು. ಇನ್ನು ನೀನು ನಡೆ, ಅಂಬಾಲಿಕೆಯನ್ನು ಕೂಡಿಕೊಂಡು ವನಕ್ಕೆ. ಅಲ್ಲಿ ಭಗವಂತನ ಧ್ಯಾನದಲ್ಲಿ ಕಾಲಕಳೆದು ಈ ದೇಹವನ್ನು ಬಿಡು." ಆಗ ಸತ್ಯವತಿಯು ತನ್ನ ಸೊಸೆಯಾದ ಅಂಬಾಲಿಕೆಯನ್ನೊಡಗೂಡಿ ಧೃತರಾಷ್ಟ್ರನ ತಾಯಿ ಅಂಬಿಕಾದೇವಿಯನ್ನಿಟ್ಟು ಕುಂತೀ ಹಾಗೂ ಪಾಂಡುಪುತ್ರರನ್ನು ಹರಸಿ ವನಕ್ಕೆ ಹೊರಟು ಹೋಗಿ ಅಲ್ಲಿಯೇ ದೇಹವಿಟ್ಟಳು. ಕುಂತೀ ದೇವಿಯು ಯಾವ ಹಸ್ತಿನಾಪುರದಲ್ಲಿ ೨೦ ವರ್ಷಗಳಾಚೆ ಪಾಂಡುರಾಯನ ಪಟ್ಟದ ರಾಣಿಯೆಂದು ಕಾಲಿಟ್ಟಳೋ ಅದೇ ಹಸ್ತಿನಾಪುರದಲ್ಲಿ ಈಗ ವೈಧವ್ಯದಲ್ಲಿ ತನ್ನ ನೆರಳಿಗೆ ತಾನೇ ಬೆದರುತ್ತ ಹಂಗಿನವರ ಮನೆಯಲ್ಲಿ ಕಾಲಕಳೆಯಲು ಮತ್ತೆ ಮರಳಿದಳು. ಆಗಿನ-ಈಗಿನ, ಸುಖದಲ್ಲಿ ಎಷ್ಟೊಂದು ಅಭ್ಯಂತರ!

**ಹಸ್ತಿನಾವತಿಯಲ್ಲಿ ವಾಸ- ಪಾಂಡವರ ಶಿಕ್ಷಣ:—** ಕುಂತೀ ದೇವಿಯು ಹಸ್ತಿನಾವತಿಗೆ ಹೋದ ಸುದ್ದಿಯು ಯಾದವರಿಗೂ ತಿಳಿಯಿತು ಶ್ರೀಕೃಷ್ಣನು ತನ್ನ ಸೋದರತ್ತೆಗೆ ಸಮಾಧಾನವನ್ನು ಹೇಳಲಿಕ್ಕೂ, ಪಾಂಡವರನ್ನು ಕಾಣಲಿಕ್ಕೂ ಧೃತರಾಷ್ಟ್ರನಿಗೆ ಯಾದವರ ಪರವಾಗಿ ನಾಲ್ಕು ಬುದ್ಧಿಯಮಾತು ಹೇಳಲಿಕ್ಕೂ ಅಕ್ರೂರನನ್ನು ಕಳುಹಿದನು. ಅದರಂತೆ ಅಕ್ರೂರನು ಬಂದು ಕೌರವ ಮುಖಂಡರಿಗೆ ಸಂದೇಶವನ್ನು ತಿಳುಹಿದನು. ಪಾಂಡವರು ತಂದೆಯು ಮುಂಚಿನ ಅರಮನೆಯಲ್ಲಿಯೇ ವಾಸವಾಗಿದ್ದರು. ಅಲ್ಲಿ ಮೇಲ್ಮೇಲೆ ಕಾಣಿಸುವ ರಾಜವೈಭವದ ಆಡಂಭರ, ಥಳಕು ಎಲ್ಲವೂ ಇದ್ದಿತು. ಪಾಂಡುರಾಯನ ಮಕ್ಕಳಿಗೆ ತಕ್ಕಂತೆ ಉಡಿಗೆ ತೊಡಿಗೆ ಉಣ್ಣು-ತಿನ್ನುವ ಪದಾರ್ಥಗಳ ಅನುಕೂಲ್ಯವಿದ್ದಿತು. ಭೀಷ್ಮನು ಪದೆಪದೆ ಅವರ ಯೋಗಕ್ಷೇಮವನ್ನು ನೋಡುತ್ತಿದ್ದನು. ಭೀಷ್ಮನಿಗೆ ಅರ್ಜುನನು ಒಳ್ಳೇ ಪ್ರೀತಿಯ ಮೊಮ್ಮಗನು. ಧರ್ಮರಾಜನು ತನ್ನ ಸದ್ಗುಣದಿಂದ ಎಲ್ಲರಿಗೂ

ಬೇಕಾದವನು. ನಕುಲ-ಸಹದೇವರಂತೂ ಎಲ್ಲರಿಗೂ ಮುದ್ದು.-ಭೀಮನ. ಮಾತ್ರ ಬಹು ಉಲಕೋಚಿ. ಆತನ ಸ್ವಭಾವವೂ ಕೊಂಚ ನಿಷ್ಠುರವೇ. ವಿದುರನು ಕೇವಲ ಧರ್ಮಾತ್ಮನು. ಪಾಂಡವರ ಒಂದು ಪಕ್ಷ ಕಡಿವೆ ಯಾದ್ದರಿಂದ ಅವರ ನಾಶಕ್ಕಾಗಿ ಕೌರವರು ಯಾವಾಗಲೂ ಜಪ್ಪಿಸಿರುವದ ರಿಂದ ವಿದುರನು ಪಾಂಡವರ ವಿಷಯದಲ್ಲಿ ಅತಿ ಜಾಗರೂಕನಾಗಿದ್ದನು. ಕುಂತೀದೇವಿಗೆ ಯಾವಾಗಲೂ ಯೋಗ್ಯ ಸಲಹೆ ಕೊಡುವದು, ಮುಂಬ ರುವ ಸಂಕಟಗಳನ್ನು ಕುರಿತು ಅವಳನ್ನು ಎಚ್ಚರಿಸುವದು, ಮೇಲಿಂದ ಮೇಲೆ ಧೈರ್ಯಕೊಡುವದು, ಧರ್ಮಾತ್ಮರಾದ ಪಾಂಡವರಿಗೆ ಧರ್ಮತತ್ವ ವನ್ನು ಉಪದೇಶಿಸುವದು, ಹೀಗೆ ಕುಂತೀದೇವಿಯ ಸಹಾಯಕ್ಕಾಗಿ ವಿದುರನು ಸದಾ ಟೊಂಕ ಕಟ್ಟಿದ್ದನೆಂದರೂ ಸಲ್ಲುವದು. ವಿದುರ ನೆಂದರೆ ದೊಡ್ಡ ಆಧಾರ ಕುಂತೀದೇವಿಗೆ.

**ಭೀಮನು:**— ಪಾಂಡವರು ಕುಂತೀದೇವಿಯ ಕಣ್ಣಾರಿಕೆಯಲ್ಲಿ ಬೆಳೆಯತೊಡಗಿದರು. ಅವರ ವಿದ್ಯಾವ್ಯಾಸಂಗದ ಏರ್ಪಾಟು ಚನ್ನಾಗಿತ್ತು; ಮೇಲಾಗಿ ಮನೆಯಲ್ಲಿ ಕುಂತೀದೇವಿಯಂಥ ತಾಯಿಯ ಗೃಹಶಿಕ್ಷಣವು. ಅಂದಮೇಲೆ ಕೇಳುವದೇನು ? ಐದುಜನ ಪಾಂಡವರೂ ದುರ್ಯೋಧ ನಾದಿಗಳೂ ಹೀಗೆ ೧೦೫ ಜನ ರಾಜಕುಮಾರರ ವಿದ್ಯಾವ್ಯಾಸಂಗವೂ ಒಬ್ಬ ಗುರುಗಳ ಕೈಕೆಳಗೇ ನಡೆಯಿತು. ಒಮ್ಮೊಮ್ಮೆ ಭೀಮನ ಕಿಡಿಗೇಡಿ ತನವು ಮೀತಿಮೀರುತ್ತಿತ್ತು. ಈತನ ತ್ರಾಸವು ಹಿರಿದಾಗಿತ್ತು. ಎಲ್ಲ ಆಟ ಗಳಲ್ಲಿ ನೂರುಜನ ಕೌರವರನ್ನು ಒಬ್ಬನೇ ಬಡಿಯುತ್ತಿದ್ದ. ಕೌರವರು ಹಣ್ಣಿಗಾಗಿ ಗಿಡವೇರಿದರೆ ಈತ ಬೊಡ್ಡೆಯನ್ನೇ ಕಾಲಿನಿಂದೊದೆದು ಕೌರವರನ್ನು ನೆಲಕ್ಕುರುಳಿಸುವನು. ಈಸಲಿಕ್ಕೆ ಹೋದಾಗ ನೀರಲ್ಲಿ ಮುಳುಗಿಸಿ ವಿಲಿವಿಲಿ ಒದ್ದಾಡಿಸುವನು. ಇವೆಲ್ಲ ಹುಡುಗಾಟಕ್ಕಾಗಿಯೇ ಹೊರ್ತು ದ್ವೇಷದಿಂದಲ್ಲ.

**ಪಾಂಡವರ ಬಗ್ಗೆ ದುರ್ಯೋಧನನಲ್ಲಿ ವೈರಭಾವ:**-- ಭೀಮನ ಈ ತುಂಟತನವು ದುರ್ಯೋಧನ ಮುಂತಾದವರಿಗೆ ಉದ್ದಾಮತನವೆನಿ ಸಿತು. ಅವನಿಂದ ಕೌರವರಿಗೆ ಅವಮಾನ ತಪ್ಪುತ್ತಿರಲಿಲ್ಲ. ಆದುದರಿಂದ ಭೀಮನನ್ನು ಹೇಗಾದರೂ ಮಾಡಿ ನಾಶಗೊಳಿಸಿದರೆ ಅವರ ಪುಂಡಾಟ

ಕೆಯು ತಾನೇ ಅಡಗುವದು ಎಂದು ದುರ್ಯೋಧನನ ಹೊಂಚು! ಇದಕ್ಕೆ ಅವನ ಸೋದರಮಾವನಾದ ಶಕುನಿಯು ಪ್ರೋತ್ಸಾಹ! ಈಗಲೇ ಇಷ್ಟೊಂದು ಪ್ರಬಲವಾದ ಪಾಂಡವರನ್ನು, ಹಾಗೇ ಬಿಟ್ಟಲ್ಲಿ ಮುಂದೆ ತಲೆ ಭಾರವಾಗದಿರಲಾರದು; ಆದ್ದರಿಂದ ಅವರನ್ನು ಈಗಲೇ ಮುರಿಯ ಲಿಕ್ಕೆಬೇಕು. ಅಗಿಯು ಮರವಾದಮೇಲೆ ಬಗ್ಗದು; ಪಾಂಡವರ ಮೂಲಾಧಾರವು ಭೀಮನು. ಈಗಲೇ ಇಂತಹ ಪ್ರಚಂಡ ಶಕ್ತಿಯೆಂದ ಮೇಲೆ ಮುಂದೇನು? ಈ ವಿಚಾರಗಳಿಂದ ಶಕುನಿಯು ದುರ್ಯೋಧನ ನನ್ನು ಹುರಿದುಂಬಿಸಿದನು; ಒಂದುಸಲ ದುರ್ಯೋಧನನು ಭೀಮನಿಗೆ ವಿಷದ ಅನ್ನವನ್ನುಣಿಸಬೇಕೆಂದು ಪ್ರಯತ್ನಿಸಿದನು; ಆದರೆ ಸಾಧಿಸಲಿಲ್ಲ. ಮುಂದೆ ಅವನನ್ನು ಚನ್ನಾಗಿ ಬಿಗಿದು ಪ್ರಮಾಣಕೋಟಿಯ ಮಡುವಿ ನಲ್ಲಿ ಬೀಸಾಕಿ ಏನೂ ಅರಿಯದವನಂತೆ ಜಲಕ್ರೀಡೆಯಿಂದ ಮನೆಗೆ ಹೊರಡಲು ಎಲ್ಲ ತಮ್ಮಂದಿರನ್ನೂ ಪಾಂಡವರನ್ನೂ ಕರೆಯಹತ್ತಿದನು. 'ಭೀಮನು ಎಲ್ಲಿ'? ಎಂದು ಪ್ರಶ್ನೆ ಮಾಡಿದರೆ ಮೊದಲೇ ಮನೆಗೆ ಹೋಗಿರಬಹುದೆಂದು ಮೆಲ್ಲನೇ ಸೂಚಿಸಲು ಎಲ್ಲರೂ ಹಾಗೆಯೇ ಇರ ಬಹುದೆಂದು ಮನೆಯಕಡೆಗೆ ಹೊರಟರು.

**ಭೀಮನು ಕಾಣದಂತಾದದ್ದು**:— ಮನೆಗೆ ಬರುವವರೆಗೆ ಧರ್ಮ ರಾಯನಿಗೆ ಯಾವತರದ ಸಂಶಯವೂ ಬರಲಿಲ್ಲ. ತನ್ನಂತೇ ಎಲ್ಲರೂ ಧರ್ಮವಂತರೇ ಎಂದು ಆತನ ತಿಳಿವಳಿಕೆ. ಕುಂತೀದೇವಿಯನ್ನು ಕಂಡ ಕೂಡಲೇ "ಅವ್ವಾ, ಭೀಮನು ಮನೆಗೆ ಬಂದಿರುವನೇ? ನಾವೆಲ್ಲರೂ ಉಂಡು ಮಲಗಿದಾಗ ಅವನೊಬ್ಬನೇ ತೋಟದಿಂದ ಹೊರಟಂತೆ ಕಾಣು ತ್ತದೆ." ಎಂದನು. ಧರ್ಮನ ಈ ಮಾತುಕೇಳಿ ಕುಂತೀದೇವಿಯು ಉತ್ತರವಾಗಿ ಅಂದದ್ದು. "ಅಪ್ಪಾ, ಭೀಮನಂತೂ ಮನೆಗೆ ಬಂದಿಲ್ಲ. ನನಗೆ ಮೊದಲೇ ಕಳ್ಳರು ಬಡಿದ ಹಾದಿಯಂತೆ ಆಗಿದೆ. ಮನಸ್ಸು ಸಂಶಯ ಗೊಂಡಿದೆ. ದುಷ್ಟಕೌರವರು ಭೀಮನನ್ನು ಕಂಡರೆ ರಕ್ತವನ್ನು ಕಾರುವರು; ಭೀಮನಿಗೇನಾದರೂ ಅನಿಷ್ಟವು ಒದಗಿರಲಿಕ್ಕಿಲ್ಲವಷ್ಟೇ! ಧರ್ಮಾ ಏನೋ ಕೆಡಕಾದಂತೆ ನನಗೆ ತೋರುತ್ತದೆ. ತಮ್ಮಂದಿರನ್ನು ಕೂಡಿಕೊಂಡು ಭೀಮ ನನ್ನು ಚನ್ನಾಗಿ ಶೋಧಿಸು." ಕುಂತಿಯ ಮಾತನ್ನು ಕೇಳಿ ಧರ್ಮನಿಗೂ

ಸಂದೇಹ ಉಂಟಾಯಿತು. ಅಲ್ಲಲ್ಲಿ ಹುಡುಕಿದನು. ಎಲ್ಲಿಯೂ ಭೀಮನು ಕಾಣಲಿಲ್ಲ. ಇತ್ತ ಕುಂತಿಯು ವಿದುರನನ್ನು ಕರೆಕಳಿಸಿ, ಅವನೆದುರಿಗೆ ನಡೆದ ಸಂಗತಿಯನ್ನು ತಿಳಿಸಿ, ತನ್ನ ಮುದ್ದು ಭೀಮನನ್ನು ನೆನೆಸಿ ದುಃಖಿಸತೊಡಗಿದಳು. ವಿದುರನು — "ಅಕ್ಕಾ – ನೀನು ತಿಳಿದವಳು. ಹೀಗೆ ಮಾಡಿದರೇನು.? ಕೌರವರು ದುಷ್ಟರು; ಅಲ್ಲದೆ ಅವರಿಗೆ ಶಕುನಿಯ ಗುರುಪದೇಶ; ಅಂದಮೇಲೆ ಕೋತಿಯ ಕೈಯಲ್ಲಿ ಕೊಳ್ಳಿ ಇಟ್ಟಂತಾಯಿತು! ಕೌರವರೇ ಭೀಮನಿಗೆ ಏನಾದರೂ ಮಾಡಿಬಹುದು; ಆದರೂ ತುಟಿ ಎರಡು ಮಾಡಲಿಕ್ಕೆ ದಾರಿಯಿಲ್ಲದಾಗಿದೆ. ಭೀಮನು ಮರಳಿ ಬರುವದೇನೋ ನಿಜವೆಂದು ನನಗಂತೂ ನನ್ನ ಮನವು ಧೈರ್ಯ ಹೇಳುತ್ತದೆ. ಪಾಂಡವರನ್ನು ದುರ್ಯೋಧನನಿಂದ ಚನ್ನಾಗಿ ಜಪ್ಪಿಸು" ಎಂದು ಹೇಳಿ ತನ್ನ ಮನೆಗೆ ಹೋದನು. ಅಧಿಕಾರ ಬಲದ ಮುಂದೆ ಪಾಪ, ವಿದುರನ ಮಾತು ನಡೆಯುವಂತಿದ್ದಿಲ್ಲ. ಭೀಮನು ಸಿಕ್ಕಲಿಲ್ಲವೆಂದು ಧರ್ಮಮೊದಲಾದವರೂ ಮರಳಿ ಬಂದರು; ಕುಂತಿಗೂ ಪಾಂಡವರಿಗೂ ದುಃಖವು ಅಸಹ್ಯವಾಯಿತು; ಆದರೆ ಮಾಡುವದೇನು ? ದೈವವನ್ನು ಹಳಿಯುತ್ತ ಭೀಮನು ಇಂದು ಬಂದಾನು ನಾಳೆ ಬಂದಾನು ಎಂದು ಉಳಿದ ಮಕ್ಕಳ ಕಡೆಗೆ ಲಕ್ಷವಿಟ್ಟು ಆದ ದುಃಖವನ್ನು ಹತ್ತಿಕ್ಕಿ ಪಾಂಡವರ ಬಗ್ಗೆ ಕುಂತಿಯು ಮತ್ತಿಷ್ಟು ಜಾಗರೂಕಳಾಗಿರಹತ್ತಿದಳು; ಹೀಗೆ ಒಂದು ವಾರವು ಸಂದಿತು. ಒಂದು ದಿನ ಭೀಮನು ಒಮ್ಮಿಂದೊಮ್ಮೆ ಬಂದು ತಾಯಿಗೆ ನಮಸ್ಕರಿಸಲು ಕುಂತೀದೇವಿಯು ತನ್ನ ಮಗನನ್ನು ಬಿಗಿದಪ್ಪಿ— "ಅಪ್ಪಾ, ಬಂದೆಯಾ! ಬಾ. ಎಲ್ಲಿ ಹೋಗಿದ್ದಿ? ನಿನಗೆ ಯಾರು ಏನು ಮಾಡಿದ್ದರು. ನನ್ನ ದೈವವು ಇನ್ನೂ ಬಲವತ್ತರವಿದೆ ಎಂದು ತೋರುತ್ತದೆ. ಭಗವಂತಾ! ಜಗದೀಶಾ! ನನ್ನ ಮಕ್ಕಳು ಹೇಗೆ ಕ್ಷೇಮದಿಂದ ಪಾರಾದಾರು ? ಅಬಲೆಯ ಕಾವನು ನೀನೇ" ಎಂದು ಕಣ್ಣೀರು ಸುರಿಸಿದಳು. ಉಳಿದ ಪಾಂಡವರೂ ಭೀಮನನ್ನು ಆನಂದದಿಂದ ತಬ್ಬಿಕೊಂಡು ಕೇಳಲು ಭೀಮನು ಎಲ್ಲರಿಗೂ, ದುರ್ಯೋಧನನು ತನಗೆ ವಿಷವನ್ನುಣಿಸಿ ಮಡುವಿನಲ್ಲಿ ನೂಕಿದ್ದನ್ನೂ ಆ ಮೇಲೆ ಪಾತಾಳಲೋಕದಲ್ಲಿ ವಾಸುಕಿಯು ತನಗೆ ಅಮೃತವನ್ನುಣಿಸಿ ನೂರು ಆನೆಯ ಬಲವನ್ನು ಕೊಟ್ಟಿದ್ದನ್ನೂ ನಿವೇದಿ

ಸಿದನು. ದುರ್ಯೋಧನನು ಕೇಡು ಬಗೆದರೆ ಅದರ ಪರಿಣಾಮವು ತನಗೆ ಹಿತಕರವೇ ಆಯಿತೆಂದು ಭೀಮನು ಚಪ್ಪಾಳೆ ಹೊಡೆದು ನಗಹತ್ತಿದನು. ಇದನ್ನೆಲ್ಲ ಕೇಳಿ ಕುಂತೀದೇವಿಗೆ ಮುಂದಿನ ಪ್ರಸಂಗವು ಎಷ್ಟು ಘೋರ ವಿರಬಹುದೆಂಬುದರ ಚಿತ್ರವು ಕಣ್ಣಿಗೆ ಕಟ್ಟಿತು. ಭೀಮನಿಗೆ ದೊರೆತ ಪ್ರಚಂಡ ಶಕ್ತಿ ಹಾಗೂ ಬೇಕಾದಂತಹ ವಿಷವನ್ನು ಅರಗಿಸಿಕೊಳ್ಳುವ ಬಲ ಬಂದುದನ್ನು ಕೇಳಿ ಕುಂತೀದೇವಿಗೆ ಹಿಡಿಸಲಾರದಷ್ಟು ಸಂತೋಷ. ಆದರೂ ಕೌರವರು ಅನ್ಯಬಗೆಯಿಂದ ಕೇಡು ಬಗೆಯದೇ ಇರಲಾರರೆಂದು ಆ ಧೂರ್ತಳು ಕೂಡಲೇ ಕಂಡುಹಿಡಿದು ತನ್ನ ಮಕ್ಕಳಿಗೆ ಅಂದದ್ದು—

"ಮಕ್ಕಳಿರಾ, ಈ ದಿನ ವಿದುರನು ಇಲ್ಲಿಗೆ ಬಂದಿದ್ದನು. ವಿದುರನು ನಮ್ಮ ಪರಮ ಹಿತೈಷಿಯು. ಕೌರವರು ದುಷ್ಟರೆಂದು ಬಾಯಿಂದ ನುಡಿಯಲಾಗದು. ಏನೂ ಗೊತ್ತಿಲ್ಲದಂತೆ ಸುಮ್ಮನಿರಬೇಕು. ಇನ್ನು ಮುಂದೆ ನೀವು ಒಬ್ಬರನ್ನೊಬ್ಬರು ಬಿಟ್ಟು ಅಗಲದಿರಿ ! ಅವರನ್ನು ನಂಬಿದಂತೆ ನಟಿಸಬೇಕಲ್ಲದೆ ನಿಜವಾಗಿ ನಂಬಲಿಕ್ಕಾಗದು. ಆ ದುಷ್ಟರು ನಮ್ಮ ನಾಶಕ್ಕಾಗಿ ಹೊಂಚು ಹಾಕಿಕೊಂಡು ಕುಳಿತಿರುವರು. ಕೌರವರು ದಿನಾಲು ಒಂದಿಲ್ಲೊಂದು ಯುಕ್ತಿಯಿಂದ ಪಾಂಡವರನ್ನು ಮುರಿಯಬೇಕೆಂಬ ಹೊಂಚು ಹಾಕುತ್ತಿದ್ದರೂ. ಕುಂತೀ—ವಿದುರರ ದೂರಾಲೋಚನೆಯಿಂದಲೂ ಭೀಮನ ಶಕ್ತಿಯಿಂದಲೂ ಭಗವಂತನ ಕೃಪೆಯಿಂದಲೂ ಪಾರಾಗುತ್ತಲೇ ನಡೆದರು. ಮತ್ತೊಮ್ಮೆ ಭೀಮನ ಮೇಲೆ ವಿಷಪ್ರಯೋಗ ಮಾಡುವ ಒಳಸಂಚು ನಡೆದಾಗ ಯುಯುತ್ಸು ಎಂಬ ಧೃತರಾಷ್ಟ್ರನ ಎರಡನೇ ಹೆಂಡತಿಯ ಮಗನು ಪಾಂಡವರಿಗೆ ಆ ಸಂಗತಿಯನ್ನು ತಿಳುಹಿದನು. ಅವನೂ ಪಾಂಡವರ ಹಿತೈಷಿ. ಭೀಮನು ಆ ವಿಷವನ್ನುಣ್ಣಬಾರದೆಂದು ತಿಳಿಸಿದರೂ ಅವನು ಅದನ್ನು ತಿಂದು ದಕ್ಕಿಸಿಕೊಂಡ. ಭೀಮನ ಶಕ್ತಿಯನ್ನು ನೋಡಿ ಕೌರವರು ಬೆರಗಾದರು. ಈಗ ಅವರ ಮತ್ಸರವು ಮತ್ತಿಷ್ಟು ಬೆಳೆಯಿತು. ಸಂಚು, ಸಂಕಟಗಳು ದಿನದ ಕಾಯಕಗಳಾದವು. ಕುಂತಿಯಾದರೋ ಬಹು ಎದೆಗಾರ್ತಿಯು; ಅವರಿಗೆ ಒಳ್ಳೆ ಮಾರ್ಗವನ್ನು ತೋರಿಸಿ ಅದರಂತೆ ನಡೆಯಲು ಹುರಿದುಂಬಿಸುವದು, ಉಚ್ಚಧ್ಯೇಯ ಉದಾತ್ತವಿಚಾರಗಳನ್ನು ಅವರ ಕಣ್ಣ ಮುಂದಿರಿಸುವದು, ಇದೇ ಮುಂತಾದ ಮಾತೆಯ ಕರ್ತವ್ಯದಲ್ಲಿ ಕುಂತೀ

ದೇವಿಗೆ ಎಷ್ಟು ಎಡರುಗಳು ಎದುರಿಸಿದರೂ ಅವಳು ರವೆಯಷ್ಟಾದರೂ ತಪ್ಪಲಿಲ್ಲ. ನಕುಲ-ಸಹದೇವರು ಮಾದ್ರಿಯ ಮಕ್ಕಳು. ಮಾದ್ರಿಯು ಸರಿಯಾ ಸವತಿ; ಹೀಗಿದ್ದರೂ ಕುಂತೀದೇವಿಯು ನಕುಲ ಸಹದೇವ ರನ್ನು, ತನ್ನ ಹೊಟ್ಟೆಯ ಮಕ್ಕಳಿಗಿಂತ ಹೆಚ್ಚು ಮಮತೆಯಿಂದ ನೋಡಿ ಮಾದ್ರಿಯ ಆಸೆಯನ್ನು ಪೂರ್ತಿಗೊಳಿಸಿದಳು. ಕೌರವರು ಆಗಿಂದಾಗ್ಗೆ ರಚಿಸುವ ಕಪಟ ತಂತ್ರದಿಂದ ಪಾಂಡವರಿಗೆ ಯಾವ ಬಾಧೆಯೂ ಆಗದೆ, ಅವರಲ್ಲಿಯ ಬಂಧು ಪ್ರೇಮವು ಮಾತ್ರ ಹೆಚ್ಚು ಪ್ರಬಲ ಗೊಂಡಿತು. ತಮ್ಮ ಮಾತೆಯ ಸಲುವಾಗಿದ್ದ ಅವರ ಪೂಜ್ಯಭಾವವು ಇಮ್ಮಡಿಸಿತು.

**ಧನುರ್ವೇದ ಶಿಕ್ಷಣ:—** ತಮ್ಮ ಮೊಮ್ಮಕ್ಕಳು ದೊಡ್ಡವರಾದ ರೆಂದು ಬಗೆದು ಅವರಿಗೆ ಧನುರ್ವಿದ್ಯೆ ಶಸ್ತ್ರವಿದ್ಯೆಗಳ ಅಧ್ಯಯನಕ್ಕಾಗಿ ಭೀಷ್ಮಾಚಾರ್ಯರು ಕೌರವ ಪಾಂಡವರನ್ನು ದ್ರೋಣಾಚಾರ್ಯರಿಗೆ ಒಪ್ಪಿಸಿ ದರು. ದ್ರೋಣಾಚಾರ್ಯರು ಯುದ್ಧಶಾಸ್ತ್ರದಲ್ಲಿ ಅತಿ ನಿಪುಣರು. ಪರಶು ರಾಮನಿಂದ ಅವರು ಈ ವಿದ್ಯೆಯನ್ನು ಸಂಪಾದಿಸಿದ್ದರು. ಇಂತಹ ಗುರು ವಿನ ಕೈಯಲ್ಲಿ ಕುರುರಾಜ ಪುತ್ರರು ತೀವ್ರವೇ ನಿಪುಣರಾದರು. ಅದರಲ್ಲಿ ಅರ್ಜುನನು ಶಸ್ತ್ರಾಸ್ತ್ರವಿದ್ಯೆಯಲ್ಲಿ ಎಲ್ಲರಿಗೂ ಮಿಗಿಲು; ಭೀಮನು ಗದಾ ಯುದ್ಧದಲ್ಲಿ, ಸಹದೇವನು ಖಡ್ಗದ ಉಪಯೋಗದಲ್ಲಿ ಒಳ್ಳೇ ಜಾಣರಾದರು. ಕುಂತೀದೇವಿಗೆ ತನ್ನ ಮಕ್ಕಳ ಈ ಶಸ್ತ್ರಾಸ್ತ್ರವಿದ್ಯೆಯಲ್ಲಿಯ ಜಾಣ್ಮೆಯನ್ನು ಕೇಳಿ ಹಿಗ್ಗು ಹಿಡಿಸದಾಯಿತು. ದ್ರೋಣಾಚಾರ್ಯರು ಒಂದು ದಿವಸ ಧೃತ ರಾಷ್ಟ್ರನ ಸಭೆಯಲ್ಲಿ— "ಹೇ ರಾಜನ್, ಕುರು ಪಾಂಡವರು ಎಲ್ಲ ತರದ ಶಸ್ತ್ರಾಸ್ತ್ರವಿದ್ಯೆಯನ್ನು ಕಲಿತು ಪಾರಂಗತರಾಗಿರುವರು. ಒಂದು ದಿನ ಅವ ರಲ್ಲಿ ಮೇಲಾಟವನ್ನು ನಡಿಸಿ ನಿನಗೆ ಹಾಗೂ ನಿನ್ನ ಪ್ರಜೆಗಳಿಗೆ ತೋರಿಸಬೇ ಕೆಂದು ಅಭಿಲಾಷೆ. ಅಪ್ಪಣೆಯಾದಲ್ಲಿ ರಂಗಸ್ಥಳವನ್ನು ಸಿದ್ಧಪಡಿಸ ಬಹುದು." ಎಂದು ಹೇಳಲು ಧೃತರಾಷ್ಟ್ರನು ಕೂಡಲೇ ಒಡಂಬಟ್ಟು ಒಂದು ಭವ್ಯವಾದ ರಂಗಸ್ಥಳವನ್ನು ಸಿದ್ಧಪಡಿಸಿದನು. ಇದನ್ನು ನೋಡಲು ಪುರದ ಜನರೆಲ್ಲರೂ ಕುಂತೀ ಗಾಂಧಾರಿ ಮೊದಲಾದ ಅರಮನೆಯ ಹೆಣ್ಣು ಮಕ್ಕಳೂ ಉತ್ಸುಕರಾಗಿ ಬಂದಿದ್ದರು. ದುರ್ಯೋಧನ ಮುಂತಾದವರಿಗೆ

ಈ ಪ್ರದರ್ಶನವು ರುಚಿಸಲಿಲ್ಲ. ಭೀಮನು ಶಕ್ತಿಯಲ್ಲಿ ಎಲ್ಲರಿಗೂ ಮಿಗಿಲಾದಂತೆ, ಅರ್ಜುನನು ಬಾಣವನ್ನು ಹೂಡುವದರಲ್ಲಿ, ಬಿಡುವದರಲ್ಲಿ, ಗುರಿಹೊಡೆಯುವದರಲ್ಲಿ, ಎಲ್ಲರಿಗೂ ಮಿಗಿಲಾಗಿದ್ದನು. ಸದ್ಗುಣಿಗಳ ಗುಣಗಳೇ ದುಷ್ಟರ ಕಣ್ಣುಗಳಲ್ಲಿ ಒತ್ತುತ್ತವೆ. ಅದರಂತೆ ಪಾಂಡವರ ಸದ್ಗುಣಗಳೇ ಕೌರವರ ಮತ್ಸರಕ್ಕೆ ಕಾರಣವಾದವು. ಅರ್ಜುನನ ಚುರುಕತನ, ಚಟುವಟಿಕೆ, ಬಾಣಗಳನ್ನು ಈಡಾಡುವ ಚಮತ್ಕಾರ, ಗುರಿ ಹೊಡೆಯುವ ಜಾಣ್ಮೆ ಇವೆಲ್ಲವುಗಳನ್ನು ನೋಡಿ ನೆರೆದ ಜನರೆಲ್ಲರೂ 'ಭಾಪು, ಭಾಪು' ಎಂದು ಕೊಂಡಾಡಲು ಕೌರವರ ಹೊಟ್ಟೆಯುರಿಯಿತು. ಅಷ್ಟರಲ್ಲಿ ಕರ್ಣನು ಬಂದು ಅರ್ಜುನನು ತೋರಿಸಿದ ಎಲ್ಲ ಚಮತ್ಕಾರಗಳನ್ನು ತಾನೂ ಮಾಡಿ ತೋರಿಸಿದ್ದಲ್ಲದೆ "ಅರ್ಜುನಾ? ನಿನ್ನ ಸಮ ಬಿಲ್ಲಾಳುಗಳು ಇಲ್ಲೆಂದು ಉಬ್ಬದಿರು. ಇಗೋ ನೋಡು ? ಈ ಬಾಹುಗಳಲ್ಲಿ ಬಿಲ್ಲಾಳುತನದ ಜಾಣ್ಮೆಯು ತುಂಬಿದೆ. ನಿನ್ನ ಬಿಂಕವನ್ನು ಬಿಡು. ದ್ವಂದ್ವಯುದ್ಧಕ್ಕೆ ಇದಿರಾಗು. ಕೂಡಲೇ ನಿನ್ನ ದರ್ಪವನ್ನು ಮುರಿಯುವೆನು." ಹೀಗೆ ಬಹು ಅದಟುತನದಿಂದ ವೀರ ಅರ್ಜುನನನ್ನು ಕೆಣಕಿದನು. ಇದರಿಂದ ದುರ್ಯೋಧನ ಮುಂತಾದ ಧೃತರಾಷ್ಟ್ರನ ಮಕ್ಕಳಿಗೆ ಆನಂದವಾಯ್ತು. ಅವರೆಲ್ಲರೂ ಕರ್ಣನ ಬೆನ್ನುಗಟ್ಟಿ ಭಲೆ, ಭಲೆ, ಎಂದು ಕೋಲಾಹಲವನ್ನೆಬ್ಬಿಸಿದರು. ಇದನ್ನು ಕಣ್ಣಾರೆ ಕಂಡು ಭೀಷ್ಮ, ಕೃಪ, ದ್ರೋಣರು ಸಂತಪ್ತರಾದರು. ಕೌರವರೆಲ್ಲರೂ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ಕರ್ಣನಿಗೆ ಬೆಂಬಲಗೊಟ್ಟಿದ್ದನ್ನು ನೋಡಿ ಇನ್ನು ಯುದ್ಧಪ್ರಸಂಗ ಒದಗಬಹುದೆಂದು ತಿಳಿದು ಭೀಷ್ಮ, ದ್ರೋಣ, ಕೃಪರು ಪಾಂಡವರ ಕಡೆಗೆ ಬಂದು ನಿಂತರು. ದ್ರೋಣಾಚಾರ್ಯರ ಅಪ್ಪಣೆಯನ್ನು ಪಡೆದು ಅರ್ಜುನನು ದ್ವಂದ್ವಯುದ್ಧಕ್ಕೆ ಸಿದ್ಧನಾದನು. ಕೃಪಾಚಾರ್ಯರು ಮುಂದಾಗಿ ಕರ್ಣನನ್ನು ಕುರಿತು ಅಂದದ್ದು– "ಹೇ ವೀರಾ! ಇದು ನೋಡು ಕುಂತೀದೇವಿಯಲ್ಲಿ ಹುಟ್ಟಿದ ಈ ಪಾಂಡುಪುತ್ರ ಅರ್ಜುನನು ಸನ್ನದ್ಧನಿರುವನು. ನಿನ್ನ ಕುಲಗೋತ್ರವನ್ನು ಹೇಳು. ದ್ವಂದ್ವಯುದ್ಧವು ಸಮಾನರಲ್ಲಿ ಮಾತ್ರ ಪ್ರಶಸ್ತವು; ಅಭಿಜಾತ ರಾಜಪುತ್ರರೇ ಅಭಿಜಾತ ರಾಜಪುತ್ರರ ಕೂಡ ದ್ವಂದ್ವಯುದ್ಧವನ್ನು ಮಾಡತಕ್ಕದ್ದೆಂಬುದು ದ್ವಂದ್ವಯುದ್ಧದ ನಿಯಮವಾಗಿದೆ." ಕೃಪಾಚಾರ್ಯರ ಮಾತು ಕೇಳಿ. ದುರ್ಯೋಧನನು

ಮುಂಬಂದು "ಆಚಾರ್ಯರೇ? ಈ ವೀರ ಪುರುಷನು ಅಭಿಜಾತ ರಾಜಪುತ್ರ ನಲ್ಲೆಂಬ ನೆವದಿಂದ ಅರ್ಜುನನು ದ್ವಂದ್ವಯುದ್ಧವನ್ನು ಅಲ್ಲಗಳೆಯುತ್ತಿದ್ದರೆ ನೋಡಿರಿ! ನಾನು ಇದೇ ಕ್ಷಣಕ್ಕೆ ಅಂಗರಾಜ್ಯಪದದಲ್ಲಿ ಕರ್ಣನಿಗೆ ರಾಜ್ಯಾಭಿಷೇಕ ಮಾಡುವೆನು. ದ್ವಂದ್ವದ ಸಿದ್ಧತೆಯು ನಡೆಯಲಿ." ಎಂದು ದುರ್ಯೋಧನನು ಕೂಡಲೇ ಶಾಸ್ತ್ರೋಕ್ತವಾಗಿ ಅಲ್ಲಿಯೇ ಕರ್ಣನಿಗೆ ಮೂರ್ಧಾಭಿಷೇಕವನ್ನು ಮಾಡಿದನು. ಕರ್ಣನು ಅತಿ ಕೃತಜ್ಞತೆಯಿಂದ ದುರ್ಯೋಧನನ್ನು ಕುರಿತು ಈ ಉಪಕಾರದ ಭಾರವನ್ನು ಇಳಿಸುವ ಬಗೆ ಹೇಗೆಂದು ನುಡಿಯಲು ಕೌರವೇಶನು– "ಕರ್ಣಾ! ಇಂದಿನಿಂದ ನೀನು ನಮ್ಮೊಳಗಿನವನೊಬ್ಬನು. ನಿನ್ನ ಗೆಳೆತನವೇ ಈ ಉಪಕಾರಕ್ಕೆ ಪ್ರತ್ಯುಪಕಾರವು." ಎಂದನು. ದ್ವಂದ್ವಯುದ್ಧದ ಸಿದ್ಧತೆಯು ನಡೆಯಿತು. ಈ ಯುದ್ಧವನ್ನು ನೋಡಲು ಬಂದ ಕುಂತೀದೇವಿಯೂ ಒಮ್ಮಿಂದೊಮ್ಮೆ ಎಚ್ಚರದಪ್ಪಿ ಬಿದ್ದಳು. ಇದರ ಕಾರಣವು ಯಾರಿಗೂ ತಿಳಿಯಲಿಲ್ಲ. ಕರ್ಣನನ್ನು ಕಂಡು ಕುಂತಿಯು ಮಾತ್ರ ಈತನು ತನ್ನ ಮಗನೆಂದು ಕೂಡಲೇ ಗುರುತಿಸಿದಳು. ಇತ್ತ ಕರ್ಣನು ಸತ್ತರೆ ದುಃಖ ಅಥವಾ ಅರ್ಜುನನು ಸತ್ತರೆ ದುಃಖ. ಅತ್ತ ಇಬ್ಬರೂ ತನ್ನ ಮಕ್ಕಳೆಂದು ಹೇಳಿ ಕದನವನ್ನು ನಿಲ್ಲಿಸಬೇಕೆಂದರೆ ಜನಲಜ್ಜೆಯ ಭೀತಿ. ಬಹಳ ದಿನಕ್ಕೆ ತನ್ನ ಕಂದನನ್ನು ಕಂಡ ಆನಂದ. ಆ ಕಂದನೇ ಅಂಗದೇಶದ ಮೂರ್ಧಾಭಿಷಿಕ್ತ ರಾಜನಾದದ್ದನ್ನು ನೋಡಿ ಹರುಷವು ಹೆಕ್ಕಳಿಸಿತು. ಈ ಮೇರೆಗೆ ಪರಸ್ಪರ ವಿರುದ್ಧ ಭಾವನಾತಿರೇಕದಿಂದ ಕುಂತಿಯು ಮನದ ತೂಕ ತಪ್ಪಿ ಭಾವಪರವಶಳಾದಳು; ವಿದುರನು ಕೂಡಲೇ ಉಪಚಾರ ಮಾಡಿ ತುಸು ಪ್ರಜ್ಞೆಯು ಬರಹತ್ತಿದ ಕೂಡಲೇ ಕುಂತಿಯನ್ನು ಮನೆಗೆ ಕರಕೊಂಡು ಹೋದನು. ಇಷ್ಟರಲ್ಲಿ ಕರ್ಣನ ಸಾಕ ತಂದೆಯಾದ ಅಧಿರಥನು ಆ ರಂಗದಲ್ಲಿ ಬರಲು ತನ್ನ ಮೂರ್ಧಾಭಿಷಿಕ್ತ ಸಿರವನ್ನು ನಮಿಸಿ ಅಧಿರಥನಿಗೆ ಕರ್ಣನು ನೆಲಮುಟ್ಟಿ ನಮಸ್ಕರಿಸಲು ಭೀಮನು– "ಸಾರಥಿಯ ಮಗನು. ಅರ್ಜುನನ ಕೂಡ ದ್ವಂದ್ವಕ್ಕೆ ಯೋಗ್ಯನಲ್ಲ." ಎಂದು ತಿರಸ್ಕರಿಸಿ ನುಡಿದನು. ಕರ್ಣನು ಆಕಾಶದಲ್ಲಿಯ ಸೂರ್ಯನ ಕಡೆಗೆ ಮೋರೆ ಮಾಡಿ ತುಸು ಹೊತ್ತು ಆದಿತ್ಯನನ್ನು ನೋಡಿ ಮತ್ತೆ ಅಂದದ್ದು– "ನಾನು ಯಾರೇ ಇರಲ್ಲೊಲೆನೇಕೆ!

ಬಾಹು ಬಲವುಳ್ಳವನೇ ನಿಜವಾಗಿ ಕ್ಷತ್ರಿಯನು. ಬಿಲ್ಲಾಳುತನವನ್ನು ನೋಡಿ ನಾನ್ಯಾರೆಂಬುದನ್ನು ಊಹಿಸಬೇಕು. ದೈವಾನುಸಾರ ಮನುಷ್ಯನು ಬೇಕಾದ ಕುಲದಲ್ಲಿ ಹುಟ್ಟಬಹುದು. ಕುಲ ಹಾಗೂ ಜನ್ಮವು ದೈವಾಧೀನವು. ಪೌರಷವು ಸ್ವಾಧೀನವು. ಧೈರ್ಯವಿದ್ದರೆ ದ್ವಂದ್ವಕ್ಕೆ ಸಿದ್ಧನಾಗು." ಕೌರವೇಶ್ವರನೂ ಕರ್ಣನನ್ನು ಏರಗಟ್ಟಿ ಶೂರರ, ಮೂಲ ಋಷಿಗಳ, ಮೂಲವು ಹೇಗಿದ್ದರೇನು ? ಅದನ್ನು ನೋಡಬಾರದು. ನರಿಯ ಹೊಟ್ಟೆಯಲ್ಲಿ ಸಿಂಹವು ಹುಟ್ಟ ಬಹುದೇ ? ಶೂರರಿಂದಲೇ ಶೂರರು ಹುಟ್ಟುವರು. ಅರ್ಥಾತ್ ಕರ್ಣನ ಪೌರಷವೇ ಕರ್ಣನು ಅಭಿಜಾತ ಕ್ಷತ್ರಿಯನೆಂದು ತೋರಿಸುತ್ತದೆ. ಎಂದು ನುಡಿದನು. ಹೀಗೆ ವಾದ ವಿವಾದವಾಗಿ ದ್ವಂದ್ವದ ಸಿದ್ಧತೆಯು ನಡೆಯುವಷ್ಟರಲ್ಲಿಯೇ ಸೂರ್ಯಾಸ್ತವಾಯಿತು. ಕರ್ಣನನ್ನು ಮೆರೆಯಿಸುತ್ತ ಕೌರವರು ತಮ್ಮಲ್ಲಿಗೆ ಕರೆದೊಯ್ದರು. ಭೀಷ್ಮಾದಿಗಳು ಪಾಂಡವರೊಂದಿಗೆ ತಮ್ಮ ತಮ್ಮ ಮನೆಯ ಮಾರ್ಗವನ್ನು ಹಿಡಿದರು; ಇತ್ತ ಕುಂತಿಯ ಮನದಲ್ಲೇನೋ ಆನಂದ-ತೆರೆಗಳು. ಗುಪ್ತರೀತಿಯಿಂದ ನೀರಲ್ಲಿ ತೇಲಬಿಟ್ಟ ತನ್ನ ಕಂದನು ಸೌಖ್ಯದಿಂದಿರುವನು; ಇಷ್ಟೇ ಅಲ್ಲದೆ ಶೌರ್ಯಾದಿ ಗುಣಗಳಿಂದ ನಾಲ್ಕು ಜನರ ಬಾಯಲ್ಲಾಡುತ್ತಿರುವನಲ್ಲ! ಎಂದೆನ್ನುವಳು. ಅದೇ ಕ್ಷಣಕ್ಕೆ ತನ್ನ ಮಕ್ಕಳು ಕರ್ಣನಿಗೆ ಸೂತಮಗನು ಹೀನಜಾತಿಯವನು ಎಂದು ನುಡಿದದ್ದು ಕೇಳಿ ವ್ಯಸನ ಪಡುವಳು. ಆದರೆ ಈ ಗುಟ್ಟನ್ನು ಒಡೆಯುವದೆಂತು ? ಒಡೆದರೆ ತನ್ನದೇ ಅಪಮಾನವೆಂದು ಸುಮ್ಮನಾದಳು. ದೈವದ ಲೀಲೆಯು ಇಷ್ಟಕ್ಕೇ ತೀರಲಿಲ್ಲ. ಅಂದು ತನ್ನ ಚೊಚ್ಚಲಮಗನಾದ ಕರ್ಣನಿಗೂ ತನ್ನ ಐವರು ಮಕ್ಕಳಿಗೂ ಅಕಾರಣ ಶತ್ರುವಾದದ್ದು ನೋಡಿ ದುಃಖವೂ ಉಕ್ಕೇರಿತು. ಕರ್ಣಾರ್ಜುನರಲ್ಲಿ ಯುದ್ಧಪ್ರಸಂಗವು ಬಂದದ್ದನ್ನು ನೋಡಿಯಂತೂ ಕುಂತೀದೇವಿಯು ಈ ಇಬ್ಬರೂ ಕಟ್ಟಾಳುಗಳಲ್ಲಿ ಒಬ್ಬರಾದರೂ ಸಾಯುವದು ನಿಶ್ಚಿತವೆಂದು ತಿಳಿದು ಬಲು ಹಲುಬಿದಳು. ಪ್ರಸಂಗವು ಹಾಗೂ ಹೀಗೂ ಪಾರಾಯಿತು; ಆದರೆ ನಿತ್ಯವೂ ಕರ್ಣನು ಕೌರವರನ್ನು ಕೂಡಿ ಪಾಂಡವರ ನಾಶಕ್ಕಾಗಿ ಅವರೊಡನೆಯೇ ದಿನಾಲು ರಚಿಸುತ್ತಿರುವ ದುಷ್ಟ ಒಳಸಂಚುಗಳನ್ನು ನೋಡಿ, ಕೇಳಿ, ಕುಂತೀದೇವಿಗೆ ಎಷ್ಟು ದುಃಖವಾಗಿರಬಹುದು ? ಗುಟ್ಟನ್ನೊಡೆದು ಕರ್ಣನನ್ನು

ತನ್ನ ಕಷೆಗೆ ಬರಮಾಡಿಕೊಳ್ಳಬೇಕೆಂಬ ವಿಚಾರವೂ ಕುಂತೀದೇವಿಯ ಮನದಲ್ಲಿ ಬಂದಿರಬಹುದು. ಆದರೆ ಜನಲಜ್ಜೆಯ ಭೀತಿಯು ಕುಂತಿಯನ್ನು ಬಿಡಲಿಲ್ಲ. ಇಂತಹ ವಿಲಕ್ಷಣ ಕತ್ತರಿಯಲ್ಲಿ ಸಿಕ್ಕು ಕುಂತಿಯು ಬಹು ಪೇಚಾಡಿದಳು. ಮೇಲೆ ಮೇಲೆ ಕುಂತಿಯು ನಾಲ್ಕು ಜನರ ಕಣ್ಣಿಗೆ ಕಾಣಿಸಲು ಎಷ್ಟು ಶಾಂತಳಾಗಿ ತೋರುತ್ತಿದ್ದರೂ ಮನದಲ್ಲಿ ಕರ್ಣನ ಬಗ್ಗೆ ಕರುಳಿನ ಕುದಿಯು ತಪ್ಪಿರಲಿಲ್ಲ.

---

# ೩ ನೆಯ ಪ್ರಕರಣ

---

## ಮೊದಲನೇ ವನವಾಸ.

**ದ್ವೇಷಾಂಕುರ:—** ಪಾಂಡವರ ಹಾಗೂ ಕೌರವರ ವಿದ್ಯಾಭ್ಯಾಸವು ಮುಗಿಯಿತು. ಮಕ್ಕಳ ಸದ್ಗುಣಗಳನ್ನು ನೋಡಿ ಕುಂತಿಯು ತನ್ನ ದುಃಖದ ದಿವಸಗಳು ಹಿಂಗಿದವೆಂದು ಭಾವಿಸಿದಳು; ಆದರೆ ಪಾಂಡವರ ಶೌರ್ಯ ಸದ್ಗುಣಗಳೇ ಅವರಿಗೆ ಮುಳುವಾದವು. ದುಷ್ಟಜನರು ಸದ್ಗುಣಿಗಳ ಸದ್ಗುಣಕ್ಕಾಗಿಯೇ ಅವರನ್ನು ದ್ವೇಷಿಸುವರು. ಅದಕ್ಕೆ ಸ್ವಾರ್ಥದ ಪುಟವೂ ವಿಶೇಷವಾಗಿ ದೊರಕಿತು. ಧೃತರಾಷ್ಟ್ರನು ಹುಟ್ಟುಗುರುಡನಾದ್ದರಿಂದ ಮನೆತನಕ್ಕೆ ಹಿರಿಯನಾದಾಗ್ಯೂ ಹಿಂದೂಶಾಸ್ತ್ರದ ಪ್ರಕಾರ ರಾಜ್ಯದ ಅಧಿಕಾರವು ಅವನಿಗಿರಲಿಲ್ಲ. ಪಾಂಡುರಾಯನ ನಂತರ ಆವನ ಹಿರಿಯ ಮಗನಾದ ಧರ್ಮರಾಯನು ನಿಜವಾಗಿ ರಾಜ್ಯಕ್ಕೆ ಅಧಿಕಾರಿಯು. ಪಾಂಡುರಾಜನ ತರುವಾಯ ರಾಜಪ್ರತಿನಿಧಿಯೆಂದು ಧೃತರಾಷ್ಟ್ರನು ನಿಯಮಿಸಲ್ಪಟ್ಟಿದ್ದನು. ಬರಬರುತ್ತಾ ಎಲ್ಲ ರಾಜ್ಯಸೂತ್ರಗಳು ಧೃತರಾಷ್ಟ್ರನ ಕೈಯಲ್ಲಿಯೇ ಒಂದುಗೂಡಿದವು. ಅವನ ಸಹಾಯಕ್ಕೆ ಶಕುನಿ, ಕರ್ಣರಂಥ ದುರ್ಮಂತ್ರಿಗಳು! ದುರ್ಯೋಧನನು ಹುಟ್ಟಿದೊಡನೆ ಅವನೇ ರಾಜ್ಯಾಧಿಕಾರಿಯಾಗುವನೋ ಹೇಗೆಂಬ ಪ್ರಶ್ನೆ ಹೊರಟಾಗ ಭೀಷ್ಮಾದಿಗಳು ಧರ್ಮ

ರಾಯನೇ ರಾಜಪದಕ್ಕೆ ಅಧಿಕಾರಿ ಎಂದು ಹೇಳಲು ಧೃತರಾಷ್ಟ್ರನಲ್ಲಿ ತನ್ನ ಮಕ್ಕಳಿಗಾಗಿ ರಾಜ್ಯವನ್ನು ದೊರಕಿಸುವ ಹಂಬಲವು ಪ್ರಬಲವಾಯಿತು. ಪಾಂಡವರ ವನವಾಸದಲ್ಲಿ ೧೫–೧೬ ವರುಷಗಳಲ್ಲಿ ಧೃತರಾಷ್ಟ್ರನು ಮೆಲ್ಲ ಮೆಲ್ಲನೇ ತನಗನುವಾಗುವಂಥ ಪರಿಸ್ಥಿತಿಯನ್ನೇ ಬೆಳಸಿದ್ದನಲ್ಲದೆ, ದಂಡು, ಕೋಶ ಮುಂತಾದವುಗಳನ್ನು ತನ್ನ ಕೈಯಲ್ಲಿರಿಸಿಕೊಂಡು ಅಧಿಕಾರ ಸ್ಥಳ ದಲ್ಲಿ ತನ್ನ ಪಂಗಡದ ಜನರನ್ನೇ ತುಂಬಿದ್ದನು. ಭೀಷ್ಮ ವಿದುರ ಮುಂತಾದ ನ್ಯಾಯಪ್ರಿಯ ಜನರಲ್ಲಿ ಬಾಯಿ ಬಲದ ಹೊರ್ತು ಮತ್ತಾವ ಬಲವೂ ಉಳಿ ದಿರಲಿಲ್ಲ. ಅದಕ್ಕಾಗಿ ವಿದುರನು ಕುಂತಿಗೆ ಮೇಲಿಂದಮೇಲೆ "ಅಕ್ಕಾ ಧೃತರಾಷ್ಟ್ರನ ಹಾಗೂ ಅವರ ಮಕ್ಕಳ ಕುತಂತ್ರವನ್ನು ಯಾರ ಮುಂದೆಯೂ ಉಸುರಸದಿರು. ಅದರಿಂದ ನಾಳಿನ ಮರಣವೂ ಇಂದೇ ಬರುವ ಸಂಭವ ವಿದೆ; ಆದುದರಿಂದ ಯುಕ್ತಿಯಿಂದ ಗೆಲಿಯಬೇಕೆಂದು" ಹೇಳುತ್ತಿದ್ದನು; ಹೀಗೆ ಧೃತರಾಷ್ಟ್ರನು ತನ್ನ ಮಹತ್ವಾಕಾಂಕ್ಷೆಯ ಭವ್ಯ ಮಂದಿರವನ್ನು ಚನಾ ಗಿಯೇ ತಳಸೋಸಿ ಭದ್ರವಾಗುವಂತೆ ಮಾಡಿಟ್ಟಿದ್ದನು. ವಿದ್ಯಾಭ್ಯಾಸವನ್ನು ಮುಗಿಸಿ, ತಮ್ಮ ಗುರುಗಳಿಗೆ ಗುರುದಕ್ಷಿಣೆ ಕೊಟ್ಟು ಕುರು–ಪಾಂಡವರು ಕೃತಾರ್ಥರಾದರು. ಈ ನೂರಾಆರು ರಾಜಪುತ್ರರಲ್ಲಿ ಧರ್ಮರಾಯನು ಎಲ್ಲರಿಗೂ ಬೇಕಾದವನು. ಮಿತ್ರರಂತೆ ಶತ್ರುಗಳೂ ಅವನನ್ನು ಕೊಂಡಾ ಡುವರು. ಹಾಗೆಂತಲೇ ಧರ್ಮರಾಯನಿಗೆ ಅಜಾತಶತ್ರು ಅಂದರೆ 'ಶತ್ರು ಗಳೇ ಇಲ್ಲದವನು' ಎಂಬ ಹಿರಿ ಹೆಸರು. ಧರ್ಮರಾಯನಿಗೆ ಈಗ ಸುಮಾರು ೨೮–೨೯ ವರ್ಷ ಹಸ್ತಿನಾವತಿಯ ಜನರು "ಧೃತರಾಷ್ಟ್ರನು ಹುಟ್ಟುಗುರು ಡನು; ಈಗ ಧರ್ಮರಾಯನು ಪ್ರಬುದ್ಧನಾಗಿರುವನು. ಅಂದಮೇಲೆ ಈ ಕುರುಡ ಮುದುಕನು ಇನ್ನು ಧರ್ಮರಾಯನಿಗೆ ರಾಜ್ಯವನ್ನು ಬಿಡಬೇಕು. ಭೀಷ್ಮನ ಉದಾಹರಣೆಯನ್ನು ನೋಡಿರಿ! ಒಮ್ಮೆ ಬಿಟ್ಟುಕೊಟ್ಟ ರಾಜ್ಯಾ ಧಿಕಾರವನ್ನು ಬಯಸಿದನೆ? ಧರ್ಮರಾಯನಿಗೇ ನಾವೆಲ್ಲರೂ ಕೂಡಿ ರಾಜ್ಯಾಭಿಷೇಕವನ್ನು ಮಾಡುವಾ" ಎಂದು ಆಡತೊಡಗಿದರು. ಈ ಮಾತು ಗಳು ದುರ್ಯೋಧನನ ಕಿವಿಗೆ ಬಿದ್ದವು. ಅವನ ಮತ್ಸರವು ಇದರಿಂದ ಮ್ಮಿಂದೊಮ್ಮೆ ಧಗಧಗಿಸಿತು. ಧರ್ಮರಾಯನಿಗೆ ರಾಜ್ಯವನ್ನೊಪ್ಪಿಸಿ ರವರಾದ ನಾವು ಉಂಬಳಿಗೆ ಬಾಧ್ಯಸ್ಥರಾಗಿ ಕುಳ್ಳಿರಬೇಕೇ? ಧರ್ಮ

ರಾಯನ ಗುಣಗಳಿಗಾಗಿ ಜನರು ಇಷ್ಟು ಮೋಹಿಸಿದ್ದಾರೆ. ಈ ಪಾಂಡವರು ಸದ್ಗುಣಿಗಳೇನೋ ನಿಜ. ಇವರ ಸದ್ಗುಣಗಳೇ ನಮಗೆ ಮುಳವಾಗಿವೆ ಇವರನ್ನು ಕೂಡಲೇ ನಾಶ ಮಾಡಬೇಕು. ಇಲ್ಲವಾದರೆ ಜನರು ಅವರ. ಬೆನ್ನುಗಟ್ಟುವರು. ಆಮೇಲೆ ನಮ್ಮ ಅನರ್ಥವು ತಪ್ಪಿದ್ದಲ್ಲ ಎಂಬ ವಿಚಾರ ದಿಂದ ದುರ್ಯೋಧನನ ತಲೆ ತಿರುಗಿತು; ಕೂಡಲೇ ತನ್ನ ತಂದೆಯನ್ನು ಕಂಡು ತನ್ನ ಹೊಟ್ಟೆಯಲ್ಲಿಯ ವಿಷವನ್ನು ಅವನ ಮುಂದೆ ಕಾರಲು ಧೃತ ರಾಷ್ಟ್ರನಾದರೂ ಅದೇ ಮಾತಿಗೆ ಬಲವನ್ನಿತ್ತನು. ಇದನ್ನೆಲ್ಲ ನೋಡಿ "ನನ್ನ ಮಕ್ಕಳನ್ನು ದೇವರು ಇಷ್ಟು ಗುಣಿಗಳನ್ನಾಗಿ ಏಕೆ ಹುಟ್ಟಿಸಿದನೋ ಕಾಣೆ? ಅವರ ಸದ್ಗುಣಗಳೇ ಅವರ ಮರಣಕ್ಕೆ ಔತಣ ಕೊಡುತ್ತಿವೆ. ನನ್ನ ಮಕ್ಕಳು ಎಲ್ಲಿಯಾದರೂ ಕಲ್ಲುಬಂಡೆಯಾಗಿ ಬಹಳ ದಿವಸ ಬದುಕಿದ್ದರೆ ಸಾಕು!" ಎಂಬ ವಿಚಾರಗಳು ಕುಂತಿಯ ಮನದಲ್ಲಿ ಬಂದಿರಬಹುದೇನು? ಇಲ್ಲ. ಎಂದಿಗೂ ಇಲ್ಲ. ಕಲ್ಲಾಗಿ ನೂರಾರು ವರುಷ ಬಾಳಲೆನ್ನುವ ತಾಯಿಯು ಕುಂತಿಯಲ್ಲ. ತನ್ನ ಮಕ್ಕಳು ಜೀವಕ್ಕೆರವಾದರೂ ಕೀರ್ತಿ ಯಿಂದ ಅಮರರಾಗಲೆನ್ನುವವಳು. ಭಾವೀಸಂಕಟದ ದುಶ್ಚಿಹ್ನಗಳು ತೋರಹತ್ತಿದವು. ಆದರೆ, ಕೌರವರು ತಮ್ಮೊಳಗೆ ನಡಿಸಿದ ಕಪಟಜಾಲದ ಸುಳಿವು ತಿಳಿಯದೇ ಹೋಗಲಿಲ್ಲ. ಅವರ ಗುಟ್ಟನ್ನು ಒಡೆಯದೇ ಗುಪ್ತ ವಾಗಿಯೇ ಸಂಕಟಕ್ಕೆ ತಲೆಗೊಟ್ಟು ಹೊಡೆದು ಕೆಡಹಲು ವಿದುರ-ಕುಂತಿ ಯವರು ಸಿದ್ಧತೆ ನಡೆಸಿದರು.

**ಪಾಂಡವರನ್ನು ವಾರಣಾವತಕ್ಕೆ ಕಳಿಸುವದು:-** ದುರ್ಯೋ ಧನನು ಶಕುನಿ ಮುಂತಾದ ಕುಹುಕರ ನೆರವಿನಿಂದ ಪಾಂಡವರ ನಾಶಕ್ಕಾಗಿ ಒಂದು ಹೊಸಯುಕ್ತಿಯನ್ನು ಹೂಡಿದನು; ಉಪಾಯವಾಗಿ ಪಾಂಡವ ರನ್ನು ಕಾಶಿಗೆ ಕಳುಹಿಸಿ ಅಲ್ಲಿ ಅವರಿಗಾಗಿ ಒಂದು ಅರಮನೆಯನ್ನು ಸಿದ್ಧಪಡಿಸಬೇಕು. ಅರಮನೆಯು ಮೇಲೆ ನೋಡಲು ಬಲು ರಮ್ಯ. ಒಳಗೆ ನೋಡಲು ಎಣ್ಣೆ ಮುಂತಾದ ಸ್ನಿಗ್ಧಪದಾರ್ಥಗಳನುಣಿಸಿ ಬೆಂಕಿಯು ಕೂಡಲೇ ಹಬ್ಬುವಂತೆ ಇರಬೇಕು. ಪಾಂಡವರು ಆ ಅರಮನೆಯಲ್ಲಿ ರಾತ್ರೆ ಮಲಗಿದ ವೇಳೆಯಲ್ಲಿ ಸರಿಯಾಗಿ ಆ ಮನೆಗೆ ಬೆಂಕೀ ಇಕ್ಕಿ. ಪಾಂಡವರನ್ನು ಸುಟ್ಟು ಬೂದಿಮಾಡಬೇಕೆಂದು ಗೊತ್ತಾಯಿತು. ಈ

ದುಷ್ಟಕಾರ್ಯಕ್ಕಾಗಿ? ಪುರೋಚನನೆಂಬ ಒಬ್ಬ ನೀಚನು ದುರ್ಯೋಧನ ನಿಗೆ ದೊರೆತನು. ಧೃತರಾಷ್ಟ್ರನಿಗಾದರೂ ಈ ಹಂಚಿಕೆಯು ಸರಿದೋರಿತು; ಧೃತರಾಷ್ಟ್ರನು ಪಾಂಡವರೆದುರಿಗೆ ವಾರಣಾಸಿಯನ್ನು ಕುರಿತು ಮಿತಿಮೀರಿ ಬಣ್ಣಿಸಿ "ಅಲ್ಲಿ ನಡೆಯುವ ಜಾತ್ರೆಯು ಪ್ರತಿಯೊಬ್ಬರೂ ನೋಡತಕ್ಕಂಥಾದ್ದು! ನೀವು ಬೇಕಾದರೆ ಹೋಗಿ ನೋಡಿ ಬನ್ನಿರಿ. ಬೇಕಾದಷ್ಟು ಹಣ ವೆಚ್ಚ ಮಾಡಿರಿ" ಮುಂತಾಗಿ ಪ್ರೀತಿಯ ಮಾತುಗಳನ್ನು ಆಡಿದನು. ಧೃತರಾಷ್ಟ್ರನ ಈ ಪ್ರೇಮದ ಉಬ್ಬಳಿಕೆಯು ಸಂಶಯಾಸ್ಪದವೆಂದು ಕೂಡಲೇ ಪಾಂಡವರು ತಿಳಿದರು. ವಿದುರನಂತೂ ಬೊಡ್ಡೆಯಿಂದ ತುದಿಯವರೆಗೆ ಎಲ್ಲ ಸಂಚನ್ನೂ ಬಲ್ಲವನೇ ಇದ್ದನು. ದಂಡು ಮಾರ್ಬಲ ಮುಂತಾದ ಬಲವೆಲ್ಲ ಧೃತರಾಷ್ಟ್ರನ ಅಧೀನದಲ್ಲಿ. ಭೀಷ್ಮನು ಮಾತ್ರ ತಟಸ್ಥನು; ಕೇಳಿದರೆ ಎರಡು ಬುದ್ಧಿಯಮಾತನ್ನು ಹೇಳುತ್ತಿದ್ದನು. ದ್ರೋಣಾಚಾರ್ಯರ ಮಗನಾದ ಅಶ್ವತ್ಥಾಮನು ದುರ್ಯೋಧನನ ಪರಮಮಿತ್ರನು, ಪಾಂಡವರ ಕಡುವೈರಿಯು. ದ್ರೋಣಾಚಾರ್ಯರು ಪಾಂಡವರನ್ನು ಪ್ರೀತಿಸುತ್ತಿದ್ದರು. ದುರ್ಯೋಧನಾದಿಗಳ ದುರ್ವರ್ತನೆಯು ಅವರಿಗೆ ಇಷ್ಟವಿರಲಿಲ್ಲ. ಆದರೆ ಪುತ್ರಮೋಹವೆಂಬುದು ಕೆಟ್ಟದು. ಮಗನ ವಿರುದ್ಧ ನಡೆಯಲು ಅವರು ಸಿದ್ಧರಿರಲಿಲ್ಲ. ಅದರಲ್ಲಿ ಅಶ್ವತ್ಥಾಮನು ಒಬ್ಬನೇ ಮಗನು. ಹೀಗಾಗಿ ದ್ರೋಣಾಚಾರ್ಯರು ಕೌರವರ ವಿರುದ್ಧವಾಗಿ ಪಾಂಡವರಿಗೆ ಸಹಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ. ಕೃಪಾಚಾರ್ಯರೂ ದ್ರೋಣನಂತೆಯೇ. ಈ ಪ್ರಕಾರ ದ್ರೋಣ, ಕೃಪ, ಭೀಷ್ಮರ ಸಹಾಯವೂ ಬೆಂಬಲವೂ ಪಾಂಡವರಿಗೆ ದೊರಕದೇ ಹೋಯಿತು. ಈ ಮೂವರು ಪಾಂಡವರ ಪಕ್ಷಕಟ್ಟಿಯೇ ಸಭೆಯಲ್ಲಿ ಮಾತಾಡುತ್ತಿದ್ದರು. ಧೃತರಾಷ್ಟ್ರನಿಗೆ ಛೀಹಾಕಿ ಬುದ್ಧೀ ಹೇಳುತ್ತಿದ್ದರು; ಆದರೆ ಧೃತರಾಷ್ಟ್ರನ ಕೈಹಿಡಿದು ಯೋಗ್ಯವಾದದ್ದನ್ನು ಮಾಡಿಸಲಿಕ್ಕಾಗಲೀ ಶಸ್ತ್ರವನ್ನೆತ್ತಿ ಪಾಂಡವರ ಹಿತಸಂರಕ್ಷಣೆಯನ್ನು ಮಾಡಲಿಕ್ಕಾಗಲೀ ಶಕ್ತರಿರಲಿಲ್ಲ. ಈ ವಾಗ್ವೀರರು ಎಷ್ಟೇ ಬಡಬಡಿಸಿದರೂ ಕೊನೆಯಲ್ಲಿ ಸುಮ್ಮನೇ ಕೂಡುವರೆಂದು ಕೌರವರು ಮನಗಂಡಿದ್ದರು. ಇದ್ದು ಬಿದ್ದು ವಿದುರನೊಬ್ಬನುಳಿದನು. ಪಾಪ ಒಬ್ಬೊಂಟಿಗನು. ಇಡೀ ರಾಜ್ಯಬಲದ ವಿರುದ್ಧವಾಗಿ ಏನು ಮಾಡಿಯಾನು? ಮುಂಬರುವ ಆಪತ್ತಿನ

ಸುಳುವು ಹಿಡಿದು ಮೊದಲೇ ಪಾಂಡವರನ್ನು ಎಚ್ಚರಿಸುವದು, ಬಂದ ಆಪತ್ತಿನಿಂದ ಪಾಂಡವರನ್ನುಳುಹುವದು, ಇಂಥ ಕಾರ್ಯಕ್ಕಾಗಿ ಟೊಂಕಕಟ್ಟಿರುತ್ತಿದ್ದ. ಇಂತಹ ಪರಿಸ್ಥಿತಿಯಲ್ಲಿ ಪಾಂಡವರಾದರೂ ಮಾಡುವದೇನು? ಪಾಂಡವರು ಹಸ್ತಿನಾವತಿಯಲ್ಲಿರುವದು ಧೃತರಾಷ್ಟ್ರನಿಗೆ ಇಷ್ಟವಿರಲಿಲ್ಲ. ಮಾನದಿಂದ ಹೋಗದಿದ್ದರೆ ಮತ್ತೇನಾದರೂ ಕುಯುಕ್ತಿಯಿಂದ ತನ್ನ ಕಾರ್ಯವನ್ನು ಸಾಧಿಸದೇ ಬಿಡನು. ಅಂದಮೇಲೆ ಬಲವಿಲ್ಲದಾಗ ಬಾಗಿ ನಡೆಯುವದೇ ಲೇಸು ಎಂದು ಕುಂತೀದೇವಿಯು ತನ್ನ ಮಕ್ಕಳನ್ನೊಡಗೂಡಿ ವಾರಣಾಸಿಗೆ ಹೋಗುವದನ್ನೇ ನಿಶ್ಚಯಿಸಿದಳು. ಪರ್ಯಾಯದಿಂದ ಇದು ಗಡಿಪಾರಿನ ಶಿಕ್ಷೆ ಎಂದೇ ಕುಂತೀದೇವಿಯೂ ಪಾಂಡವರೂ ಚನ್ನಾಗಿ ಬಲ್ಲವರಾಗಿದ್ದರು. ಪ್ರಜೆಗಳಿಗೂ ಕೌರವರ ಈ ಒಳಸಂಚಿನ ಸುಳುವು ಕೆಲ ಮಟ್ಟಿಗೆ ತಿಳಿದಿತ್ತೆಂದು ಹೇಳಬಹುದು. ಒಂದು ದಿವಸ ಪಾಂಡವರು ತಮ್ಮ ತಾಯ ಕೂಡ ವಾರಣಾಸಿಗೆ ಹೊರಟರು; ಪುರಜನರಿಗೆ ಪಾಂಡವರೆಂದರೆ ಪ್ರಾಣ! ಅವರು ಪಟ್ಟಣ ಬಿಟ್ಟು ಹೊರಟರೆಂದು ಕೇಳಿ ತಾವೂ ಅವರ ಬೆನ್ನ ಹಿಂದೇ ಹೊರಡಲು ಸಿದ್ಧರಾದರು. ಧರ್ಮರಾಯನು ಅವರನ್ನೆಲ್ಲ ಸಮಾಧಾನಗೊಳಿಸಿ ಕಳುಹಿದನು. ಎಲ್ಲರೂ ಹೋದಮೇಲೆ ವಿದುರನು ಮೆಲ್ಲನೆ ಗೂಢ ಯಾವನೀ ಭಾಷೆಯಲ್ಲಿ ಯುಧಿಷ್ಠಿರನಿಗೆ ವಾರಣಾಸಿಯಲ್ಲಿ ಒಡ್ಡಲ್ಪಟ್ಟಿರುವ ಆಪತ್ತನ್ನು ತಿಳುಹಿದನು. ಅದು ಒಗಟದ ಮಾದರಿಯದಾಗಿತ್ತು; ಆದುದರಿಂದ ಯಾರಿಗೂ ತಿಳಿಯುವಂತಿರಲಿಲ್ಲ. ಕುಂತೀದೇವಿಗೂ ವಿದುರನು 'ಮುಂದೆ ಸಂಕಟವಿದೆ' ಎಂದು ಮೊದಲೇ ತಿಳಿಸಿದ್ದನು. ಕುಂತೀದೇವಿಯಲ್ಲಿ ಎಲ್ಲರ ವಿಶ್ವಾಸವಿದ್ದಿತು. ಏನೇ ಆದರೂ ಅವಳು ಗುಟ್ಟನ್ನು ಬಚ್ಚಿಡುವದರಲ್ಲಿ ಗಟ್ಟಿಗಳೆಂದು ಎಲ್ಲರೂ ತಿಳಿದಿದ್ದರು. ಕರ್ಣನ ಜನ್ಮದ ಗುಟ್ಟನ್ನು ಹೇಗೆ ಬಚ್ಚಿಟ್ಟಳೆಂಬದು ವಾಚಕರಿಗಂತೂ ಗೊತ್ತೇ ಇದೆ. ಮುಂಬರುವ ಸಂಕಟದ ಸುದ್ದಿಯಿಂದ ಕುಂತಿಯು ಬೆದರುವವಳಲ್ಲ. ಆದುದರಿಂದ ಅವಳಿಂದ ಪಾಂಡವರಾಗಲೀ ಅಥವಾ ವಿದುರನಾಗಲೀ ಯಾವ ಸಂಕಟದ ಸುದ್ದಿಯನ್ನೂ ಬಚ್ಚಿಡುತ್ತಿದ್ದಿಲ್ಲ. ಇದ್ದ ಮಾತನ್ನೆಲ್ಲ ಅವಳ ಮುಂದುಸುರುವದರಿಂದ ಅವಳಿಗೆ ಲಾಭವೇ ಇತ್ತು. ವಾಡಿಕೆಯಂತೆ ಈ ಸಮಯದಲ್ಲಿಯೂ ವಿದುರನು ಅವಳಿಗೆ ಮುಂದಾಗಿ ಜಾಗರೂಕ

ಳಾಗಿರಲು ಎಚ್ಚರ ಕೊಟ್ಟಿದ್ದನು; ಎಲ್ಲರೂ ಹೋದಮೇಲೆ ಧರ್ಮರಾಯನು ಅವಳಿಗೂ ತನ್ನ ತಮ್ಮಂದಿರಿಗೂ ಎಲ್ಲ ಸಂಗತಿಯನ್ನು ತಿಳಿಸಿದನು.

**ಅರಗಿನ ಮನೆಗೆ ಬೆಂಕಿ ಇಕ್ಕಿ ಪಾಂಡವರು ಪಾರಾದದ್ದು:—** ಪಾಂಡವರು ವಾರಣಾಸಿಗೆ ಬಂದ ಸುದ್ದಿಯನ್ನು ಕೇಳಿ ಪುರದ ಜನರೆಲ್ಲರೂ ಹಿರಿಹಿರಿ ಹಿಗ್ಗಿದರು. ಅವರನ್ನು ಎದುರುಗೊಂಡು ಒಳ್ಳೇ ಸಡಗರದಿಂದ ಕರೆದೊಯ್ದರು. ಪಾಂಡವರು ತಮಗಾಗಿ ಸಿದ್ಧವಾಗಿದ್ದ ಅರಮನೆಯಲ್ಲಿ ಇದ್ದುಕೊಂಡರು. ವಿದುರನು ಸುದ್ದಿಯನ್ನು ಕಂಡುಹಿಡಿಯುವದರಲ್ಲಿ ಒಳ್ಳೆ ಜಾಣನಿದ್ದದರಿಂದ ದುರ್ಯೋಧನಾದಿಗಳ ಆಜ್ಞೆಯಂತೆ ಪುರೋಚನನು ಯಾವದಿವಸ ಬೆಂಕೆ ಇಕ್ಕುವನೆಂಬದನ್ನು ಕೂಡ ಬಲ್ಲವನು. ಪಾಂಡುನಂದನರೂ ಕುಂತಿಯೂ ಮೇಲೆ ಮೇಲೆ ಯಾವ ಸಂಗತಿಯನ್ನೂ ಅರಿಯದಂತೆ ಉಲ್ಹಾಸದಿಂದ ಕಾಲಕಳೆಯುತ್ತಿದ್ದರೂ ಮೈಯೆಲ್ಲ ಕಣ್ಣು ಮಾಡಿಕೊಂಡೇ ಇದ್ದರು. ವಿದುರನು ತನ್ನ ವಿಶ್ವಾಸದ ಸೇವಕನಾದ ಖಣಕನೆಂಬುವನನ್ನು ಪಾಂಡವರಿದ್ದಲ್ಲಿಗೆ ಕಳುಹಿದನು. ಖಣಕನು ಸುರಂಗ ಹೊಡೆದು ತಳಹಾದಿಯನ್ನು ಮಾಡುವದರಲ್ಲಿ ಬಲು ಬುದ್ಧಿವಂತನು. ಅವನು ಬಂದು ಪಾಂಡವರಿಗೆ ವಿದುರನ ಗುರುತನ್ನು ಕೊಟ್ಟು ಅವರಿಗಾಗಿ ನೆಲದಲ್ಲಿ ಸುರಂಗ ಹೊಡೆದು ಒಂದು ತಳಹಾದಿಯನ್ನು ಕೊರೆದು ತೆಗೆದನು. ಪುರೋಚನನಿಗೆ ಇದು ಕನಸಿನಲ್ಲಿಯೂ ಇರಲಿಲ್ಲ. ಆ ಹಾದಿಯು ಅರಮನೆಯಿಂದ ನೇರವಾಗಿ ಗಂಗಾನದಿಯ ದಂಡೆಗೆ ಮುಟ್ಟಿತ್ತು. ನದಿಯ ದಂಡೆಯ ಮೇಲೆ ಗೊತ್ತುಪಡಿಸಿದ ದಿವಸ ವಿದುರನ ಮತ್ತೊಬ್ಬ ನಂಬಿಕೆಯ ಆಳು ಹರಗೋಲನ್ನು ಸಿದ್ಧಪಡಿಸಿಕೊಂಡು ನಿಂತಿದ್ದನು. ಗೊತ್ತಾದ ಮೇರೆಗೆ ಪಾಂಡವರು ಒಂದು ದಿವಸ ನಡುರಾತ್ರೆಯಲ್ಲಿ ಮೆಲ್ಲನೇ ಎದ್ದು ಮೊದಲು ಪುರೋಚನನು ಮಲಗಿದ ಭಾಗಕ್ಕೆಲ್ಲ ಕೊಳ್ಳೇ ಕೊಟ್ಟು ಸಿದ್ಧಪಡಿಸಿಟ್ಟ ದಾರಿಯಿಂದ ಕುಂತೀ ಸಹಿತ ಹೊರಟರು. ಕುಂತಿಯನ್ನು ಭೀಮನು ತನ್ನ ಹೆಗಲಮೇಲೆ ಕುಳ್ಳಿರಿಸಿಕೊಂಡ. ಗಂಗಾನದಿಯ ದಂಡೆಯಲ್ಲಿ ಹರಗೋಲು ಅಣಿಯಾಗಿದ್ದಿತು. ಹರಗೋಲೇರಿ ಗಂಗಾನದಿಯ ಎರಡನೇ ದಂಡೆಗೆ ತಲ್ಪಿದರು. ಅಂಬಿಗನು ನಮಸ್ಕರಿಸಿ ಹೊರಟನು. ಕುಂತಿಗೆ ಈ ಸುಮಾರಕ್ಕೆ ೫೦-೫೨ ವರುಷ. ೩೦-೩೨ ವರುಷಗಳ ಹಿಂದೆ ಹಸ್ತಿನಾಪುರವನ್ನು ಬಿಟ್ಟು ಪಾಂಡು-ಮಾದ್ರಿ

ಯರೊಡನೆ ಕುಂತಿಯು ವನಕ್ಕಾಗಿ ತೆರಳಿದ್ದಳು. ಆ ವನವಾಸಕ್ಕೂ ಈ ವನವಾಸಕ್ಕೂ ಬಹಳೇ ಅಂತರವಿದ್ದಿತು. ಸದ್ಯದ ವನವಾಸವು ದೈವ ದುರ್ವಿಲಾಸವಾಗಿತ್ತು. ಆದರೂ ಮಕ್ಕಳ ಮೇಲಿನ ಮೋಹದಿಂದ ಈಗ ಬಂದ ಆಪತ್ತಿನಲ್ಲಿ ಅವರಿಗೆ ಧೈರ್ಯ ಕೊಡಲು ಈ ಸಾರೆಯೂ ವನವಾಸ ವನ್ನು ಆನಂದದಿಂದಲೇ ಸ್ವೀಕರಿಸಿದ್ದಳೆಂದು ಹೇಳಬಹುದು. ಕುಂತಿಯು ಮೇಲೆ ಕೌರವರ ವಕ್ರದೃಷ್ಟಿಯಿರಲಿಲ್ಲ. ಪಾಂಡವರು ಅಳಿದು ಕುಂತಿ ಯೊಬ್ಬಳೇ ಉಳಿದರೆ ಅವರಿಗೆ ಯಾವ ಬಾಧೆಯೂ ಇರಲಿಲ್ಲ. ಸಂಕಟ ಕಾಲಕ್ಕೆ ಮಕ್ಕಳೆಡೆಯಲ್ಲಿಯೇ ನಿಂತು ಬೆನ್ನು ತಟ್ಟಿ ಅವರನ್ನು ಹುರಿಗೊಳಿ ಸುವದರಲ್ಲಿಯೇ ಅವಳಿಗೆ ಅತ್ಯುಲ್ಹಾಸ. ಅಂತೆಯೇ ಕಂಡೂ ಕಂಡೂ ಪಾಂಡವರ ಕೂಡ ವಾರಣಾಸಿಗೆ ಕುಂತಿಯು ಹೋದದ್ದು.

**ಅರಣ್ಯದಲ್ಲಿ ಒಂದು ರಾತ್ರಿ:—** ಮಧ್ಯರಾತ್ರಿಯ ಸಮಯ; ಭಯಂಕರ ಅರಣ್ಯ. ಅಲ್ಲಲ್ಲಿ ಸಿಂಹ, ಹುಲಿ, ಮುಂತಾದ ಹಿಂಸ್ರಪಶು ಗಳ ಗರ್ಜನೆಯು ಕೇಳಬರುತ್ತಿತ್ತು. ಆ ಗುಡುಗಿನ ಹೊಡತಕ್ಕೆ ಮೈ ಯೆಲ್ಲ ಗಡಗುಟ್ಟಿ ನಡುಗಬಹುದಾಗಿತ್ತು. ನಕ್ಷತ್ರದ ಬೆಳಕೇ ಬೆಳಕು. ಎಲ್ಲಿ ನೋಡಿದರೂ ಸ್ಮಶಾನ ಶಾಂತತೆಯು. ಭೀಮನು ದಾರಿದೋರಕನು. ತನ್ನ ತಾಯಿಯ ಸುಕುಮಾರ ದೇಹವನ್ನು ಹೂವಿನಂತೆ ತನ್ನ ಬೆನ್ನ ಮೇಲಿ ರಿಸಿಕೊಂಡು ಗಿಡಗಂಟೆಗಳನ್ನು ತುಳಿಯುತ್ತ ಮುರಿಯುತ್ತ ಮದ್ದಾನೆ ಯಂತೆ ನಡೆದಿದ್ದ. ಹಿಂದಿನಿಂದ ಉಳಿದ ನಾಲ್ವರೂ ಅಣ್ಣತಮ್ಮಂದಿರು. ಬೆಳಗಾಗುವದರೊಳಗೆ ಜನರ ಸುಳುವು ಬಿಟ್ಟು ಯಾರಿಗೂ ಅರಿಯದ ಕಟ್ಟಾ ರಣ್ಯವನ್ನು ಸೇರಬೇಕಾಗಿದ್ದಿತು. ಅದಕ್ಕಾಗಿ ಇಷ್ಟು ಅವಸರ. ನಡು ರಾತ್ರಿಯೆಂಬುವಷ್ಟರಲ್ಲಿ ಪಾಂಡವರು ಆ ನಿಬಿಡವಾದ ಅರಣ್ಯದ ದುರ್ಗಮ ಭಾಗವನ್ನು ಬಂದು ಸೇರಿದರು. ಎಲ್ಲರೂ ದಣಿದರು. ಇನ್ನೂ ರಾತ್ರಿಯು ಬಹಳೇ ಉಳಿದಿತ್ತು. ಮೋಡ ಕವಿದು ಕತ್ತಲೆ ಹೆಚ್ಚಿತು. ಬಿರುಗಾಳಿಯು ಪ್ರಾರಂಭವಾಯಿತು. ಒಂದು ವಿಶಾಲ ಆಲದಮರವನ್ನು ಕಂಡು ಆ ರಾತ್ರಿಯನ್ನು ಆ ಮರದ ಬುಡದಲ್ಲಿಯೇ ಕಳೆಯುವದೆಂದು ಗೊತ್ತುಮಾಡಿ ದರು. ತಮ್ಮ ತಾಯಿಗಾಗಿ ಎಲೆಬಳ್ಳಿಯ ಮೆತ್ತನ್ನ ಹಾಸಿಕೆಯನ್ನು ಸಿದ್ಧ ಪಡಿಸಿ, “ಅಮ್ಮಾ, ನೀನು ಇದರ ಮೇಲೆ ವಿಶ್ರಮಿಸು” ಎಂದು ಪಾಂಡ

ವರು ಹೇಳಲು ಆ ಸುಕುಮಾರ ದೇಹದ ಯಶೋನಿಧಿಯು ಆ ಪ್ರೇಮದ ಎಲೆ ಬಳ್ಳಿಯ ಹಾಸಿಗೆಯಮೇಲೆ ಒರಗಿದಳು. ಸುತ್ತಲೂ ಪಾಂಡವರು ಮಲಗಿಕೊಂಡರು. ಕುಂತೀದೇವಿಯು ಬಹಳೇ ದಣಿದಿದ್ದಳು. ಆಯಾಸ ದಿಂದ ಬಾಯಾರಿತ್ತು. ಭೀಮನು ತಾಯಿಗಾಗಿ ನೀರು ತರಲು ಹೊರಟುಹೋದನು. ಅತ್ತಿತ್ತ ಹುಡುಕಿ ಹತ್ತಿರವಿದ್ದ ಒಂದು ಸರೋವರದಿಂದ ನೀರನ್ನು ತಂದನು. ಬಳಿಯಲ್ಲಿ ನೀರಿಗಾಗಿ ಒಂದು ಪಾತ್ರೆಯೂ ಇರಲಿಲ್ಲ. ಆದುದರಿಂದ ತಾನು ಹೊತ್ತಿರುವ ಧೋತರವನ್ನೇ ತೋಯಿಸಿಕೊಂಡು ಬಂದು ನೋಡುತ್ತಾನೆ. ಕುಂತೀದೇವಿಗೂ ಉಳಿದ ನಾಲ್ಕು ಜನ ಪಾಂಡವರಿಗೂ ಗಾಢ ನಿದ್ರೆ; ರಾತ್ರಿಯ ಆಯಾಸ, ಇಡೀ ದಿವಸ ಕಣ್ಣಿಗೆ ಕಣ್ಣು ಹತ್ತಿರಲಿಲ್ಲ. ಮೇಲೆ ತಂಪಾದ ಸೂಸುಗಾಳಿಯು ತನ್ನ ಆನಂದಕರವಾದ ಕೈಗಳಿಂದ ಮೈತಟ್ಟುತ್ತಿರುವಂತಿತ್ತು. ಮಲಗಿದ ತಾಯಿಯನ್ನೂ ಅಣ್ಣತಮ್ಮಂದಿರನ್ನೂ ಎಬ್ಬಿಸಲು ಭೀಮನ ಮನಸಾಗಲಿಲ್ಲ. ಸುಖನಿದ್ರೆಯನ್ನು ಭಂಗಪಡಿಸಲೇಕೆ ಎಂದು ಅವರನ್ನು ಹಾಗೇ ಬಿಟ್ಟನು. ಧೋತರದ ಒದ್ದೆಯನ್ನು ಬದಿಗೆ ಇರಿಸಿ ಗಿಡದ ಬುಡದಲ್ಲಿ ಕಾಲು ಚಾಚಿ ಕುಳಿತನು; ಅವನಿಗೂ ಆಯಾಸವಾಗಿತ್ತು; ಆದರೆ ಕಾಡು ಮೃಗಗಳ ಭೀತಿಯ ಮೂಲಕ ಯಾರಾದರೊಬ್ಬರು ಎಚ್ಚರದಿಂದ ಕಾವಲಿರುವದು ಅವಶ್ಯವೆಂದು ತಿಳಿದು ಭೀಮನು ಅತ್ತಿತ್ತ ನೋಡುತ್ತ ಕುಳಿತನು. ಅವನ ದೃಷ್ಟಿಯು ಮಲಗಿದ ತನ್ನ ತಾಯಿ, ಸಹೋದರರ ಕಡೆಗೆ ಹೋಗಲು ಬಹಳೇ ವ್ಯಥೆಯುಂಟಾಯಿತು. "ಏನಿದು ದುರದೃಷ್ಟ! ಅಮ್ಮಾ ಕುಂತೀ! ನೀನು ಹುಟ್ಟಿದ್ದು ಪರಮ ವಿಖ್ಯಾತ ವೃಷ್ಣಿಕುಲದಲ್ಲಿ. ಪಾಂಡುರಾಯನ ಧರ್ಮಪತ್ನಿ, ಕೌರವರ ಮೂರ್ಧಾಭಿಷಿಕ್ತ ರಾಜ್ಞಿ. ನಿನಗೆ ಇಂಥಹ ದುರವಸ್ಥೆಯೇ? ಅಹಹ! ಈ ಬಾಹುಬಲವನ್ನು ಸುಟ್ಟರೆ ಸರಿ! ನಿನ್ನ ಸುಕುಮಾರ ದೇಹವು ಎಷ್ಟು ವ್ಯಥೆಪಡುತ್ತಿರಬಹುದು? ಯುಧಿಷ್ಠಿರಾ, ಇಂತಹ ಕಷ್ಟಕಾಲದಲ್ಲಿಯೂ ನಿನ್ನ ಶಾಂತವೃತ್ತಿಯು ಅಚ್ಚಳಿಯುವದಿಲ್ಲವೇ? ಶಾಂತಿ ಕ್ಷಮೆಗಳ ಮೂರ್ತಿಯೇ ನೀನು. ಕುರುಸಾಮ್ರಾಜ್ಯದ ಮೇಲೆ ನಿನ್ನದೇ ಹಕ್ಕು; ಹೀಗಿದ್ದು ಮಾತೆಯ ಕನಿಕರ ಸ್ಥಿತಿನೋಡಿ ನಿನ್ನ ಕರಳು ಕರಗದೇ? ದುರುಳ ಕೌರವನ ದುಷ್ಟ ಪ್ರಯತ್ನಕ್ಕೆ ಪ್ರತೀಕಾರ ಮಾಡ

ಲಾಗದೇ ನೀನು ? ತಾಳ್ಮೆ, ತಾಳ್ಮೆ ಎಂದು ಕಿಚ್ಚಿನಲ್ಲಿ ಹಾರುವದು ಯಾವ ಜಾಣತನವು ! ಲೋಭಿಯಾದ ಧೃತರಾಷ್ಟ್ರನ ಕುಹಕತನವನ್ನು ಎಷ್ಟು ಸಹಿಸುವದು ? ಅರ್ಜುನನಲ್ಲಿ ಧನುರ್ಬಲ; ನನ್ನಲ್ಲಿ ಬಾಹುಬಲ; ನಕುಲ ಸಹದೇವರಲ್ಲಿ ಯಂತ್ರತಂತ್ರ-ಯುದ್ಧಕೌಶಲ್ಯ ಬಲ, ಮೇಲಾಗಿ ಯಾದವರ ಸಹಾಯ, ಮಾದ್ರರ ಸಹಾಯ; ಇಷ್ಟೆಲ್ಲ ಇದ್ದು ತಾಳ್ಮೆ ಏಕೆ ? ಅಂಧನು, ಹಿರಿಯುವನು ಎಂಬೀ ಫುಕ್ಕ ಮಹಾಮಂತ್ರದ ಪುರಶ್ಚರಣೆಯು ಕ್ಷತ್ರಿಯರಿಗೆ ಸರಿಯೇ ? ದುರ್ಯೋಧನಾ, ತಡೆ. ನಿನ್ನ ದೈವವು ನಿಜವಾಗಿಯೂ ಇನ್ನೂ ಬಲವತ್ತರವಿದೆ. ಧರ್ಮನ ಪ್ರತೀಕಾರಶೂನ್ಯತೆಯೇ ಪಾಂಡವರನ್ನು ನಿಮ್ಮ ಮಾಯಾಜಾಲಕ್ಕೆ ಈಡುಮಾಡಹತ್ತಿದೆ. ಮುಯ್ಯಿ ತೀರಿಸುವ ದಿನಗಳೂ ಬರಬಹುದು. ಧರ್ಮರಾಯನು 'ಹುಂ' ಎಂದರೆ ನಾಕು, ಅರಗಳಿಗೆಯಲ್ಲಿ ಇವರ ಹುಟ್ಟಡಗಿಸಿ ಧರ್ಮನ ಹೆಸರಿನಿಂದ ಜಯಭೇರಿಯನ್ನು ಹೊಡಿಸಬಹುದು. ಉಪಾಯವಿಲ್ಲ" ಎಂಬೀ ವಿಚಾರಗಳಿಂದ ಕಾದುಕೆಂಡಾಗಿದ್ದ. ಆದರೆ ಭೀಮನ ಸಂತಾಪವನ್ನು ಸಂತೈಸುವರಾರು? ಸಿಟ್ಟಿನರಭಸದಲ್ಲಿ ದುರ್ಯೋಧನನ ಹೆಸರು ನೆನಪಾದ ಕೂಡಲೇ ಕರಕರನೆ ಹಲ್ಲು ತಿನ್ನುತ್ತ ಎರಡೂ ಕೈಗಳನ್ನು ತಿಕ್ಕುತ್ತಿರುವಾಗ ಆ ಸಪ್ಪಳಕ್ಕೆ ಗಿಡದ ಮೇಲಿನ ಪಕ್ಷಿಗಳೂ ಕೂಡ ಬೆದರಿರಬಹುದು.

**ಹಿಡಿಂಬರಾಕ್ಷಸನ ವಧೆ:—** ಪಾಂಡವರು ವಿಶ್ರಮಿಸಿದ ಅರಣ್ಯದಲ್ಲಿಯೇ ಹಿಡಿಂಬನೆಂಬ ಮನುಷ್ಯಭಕ್ಷಕ ರಾಕ್ಷಸನಿದ್ದನು. ಅವನು ವಾಸನೆಯಿಂದ ಯಾರೋ ತನ್ನ ಗಡಿಯಲ್ಲಿ ಬಂದಿದ್ದಾರೆಂದು ಮೂಸಿದ ಕೂಡಲೇ ತನ್ನ ತಂಗಿಯಾದ ಹಿಡಿಂಬೆಯನ್ನು ಕರೆದು " ತಂಗೀ! ಮನುಷ್ಯರ ನಾತ ಬರುತ್ತಿದೆ. ಯಾರು ಇರಬಹುದು ನೋಡಿ ಬಾ " ಎಂದು ಕಳುಹಿದನು. ಹಿಡಿಂಬೆಯು ಹುಡುಕುತ್ತ ಪಾಂಡವರು ವಿಶ್ರಮಿಸಿದ ಸ್ಥಳಕ್ಕೆ ಬಂದು ನೋಡಲು ಒಬ್ಬ ಹೆಣ್ಣುಮಗಳೂ, ನಾಲ್ವರು ಗಂಡಸರೂ ಮಲಗಿದ್ದು ಮತ್ತೊಬ್ಬನು ಬದಿಯಲ್ಲಿಯೇ ಕೊಂಚ ದೂರದಲ್ಲಿ ಕುಳಿತು ಏನೋ ತನ್ನಷ್ಟಕ್ಕೆ ತಾನೇ ಮಾತಾಡುತ್ತ ಕೈಯನ್ನು ತಿಕ್ಕುತ್ತ, ಹಲ್ಲು ಕಟಿಯುತ್ತ ಕುಳಿತಿದ್ದನು. ಆಕೆ ಕ್ಷಣಹೊತ್ತು ನೋಡುತ್ತ ನಿಂತಳು. ಮನಸು ಕರಗಿತು. ನೋಟವು ಭೀಮನಲ್ಲಿ ನೆಟ್ಟಿತು. ಭೀಮನ ಮದ್ದಾನೆ

ಯಂಥ ರೂಪವು ನಯನ ಮನೋಹರವಾಗಿತ್ತು. ಕೋಪದಿಂದ ಭೀಮನ ಮೋರೆಯಮೇಲೆ ಕಿರಮಂಜೀ ಬಣ್ಣದ ಕಳೆಯೇರಿತ್ತು. ಅದರಿಂದ ಅವನ ಮುಖ ಮತ್ತಿಷ್ಟು ಅಂದವೇ ಕಾಣುತ್ತಿತ್ತು; ಹಿಡಿಂಬೆಯು ಭೀಮನಿಗೆ ಮನಸೋತಳು. ತನ್ನ ಅಣ್ಣನು ಸಿಟ್ಟಿಗೆದ್ದು ಏನು ಮಾಡಿಯಾನು ಎಂಬ ಸ್ಮೃತಿಯೂ ಉಳಿಯಲಿಲ್ಲ. ಅವಳು ಸುಂದರ ರೂಪವನ್ನು ಧರಿಸಿದಳು. ರಾಕ್ಷಸರು ಕಾಮರೂಪಿಗಳಂತೆ! ಭೀಮನಬಳಿ ಧಿಟ್ಟತನದಿಂದ ಬಂದು ಭೋಗಯಾಚನೆಯನ್ನು ಮಾಡಿದಳು. ತಾನು ರಾಕ್ಷಸಿಯೆಂದೂ ತನ್ನ ಅಣ್ಣನು ಅವರ ಮಾಂಸಕ್ಕೆ ಹೊಂಚು ಹಾಕಿರುವನೆಂದೂ ಒಡೆದು ಹೇಳಿದಳು. ಭೀಮನು ಒಪ್ಪಲಿಲ್ಲ. ಕಪಟಿಯೆಂದು ತಿಳಿದನು. ರಾಕ್ಷಸಿಯು ಅಂಗಲಾಚಿ ಬೇಡಿಕೊಳ್ಳಹತ್ತಿದಳು. ಭೀಮನು ಆಕೆಗೆ ಮನಸೋಲಲಿಲ್ಲ. ಹಿಡಿಂಬನಿಗೆ ತಂಗಿಯ ತಡವು ಸಹನವಾಗಲಿಲ್ಲ; ಕೂಡಲೇ ಅಡಬಡಿಸಿಕೊಂಡು ಎದ್ದು, ಪಾಂಡವರಿದ್ದಲ್ಲಿಗೆ ಬಂದು ತಂಗಿಯು ಭೀಮನಲ್ಲಿ ಕಾಮಯಾಚನೆಯನ್ನು ಮಾಡುತ್ತ ಕಂಗೆಟ್ಟು ನಿಂತಿರುವದನ್ನು ಕಂಡನು. ರಾಕ್ಷಸನ ತಲೆ ತಿರುಗಿತು. ಮೊದಲು ರಾಕ್ಷಸಕುಲಾಧಮಿಯಾದ ತಂಗಿಯನ್ನೇ ಕೊಲ್ಲುವದಾಗಿ ನಿಶ್ಚಯಿಸಿದನು. ರಾಕ್ಷಸನು ಅಬಲೆಯ ಮೇಲೆ ಕೈಯೆತ್ತಿದ್ದನ್ನು ನೋಡಿದ ಕೂಡಲೇ ಭೀಮನು ರಭಸದಿಂದ ಚಟ್ಟನೇ ಎದ್ದನು. ಹಿಡಿಂಬನನ್ನು ತಡೆದು, ದ್ವಂದ್ವಯುದ್ಧಕ್ಕೆ ಕರೆಯಲು ಇಬ್ಬರೂ ಮುಷ್ಟಿಯುದ್ಧಕ್ಕೆ ಸಿದ್ಧರಾದರು. ಮಲಗಿದವರ ನಿದ್ದೆಯು ಕೆಡಬಾರದೆಂದು ಸ್ವಲ್ಪ ದೂರದಲ್ಲಿ ಯುದ್ಧಕ್ಕೆ ಪ್ರಾರಂಭವಾಯಿತು. ತೊಡೆ ಚಪ್ಪರಿಸುವದು, ಸದ್ದುಹೊಡೆಯುವದು, ಮುಂತಾದ ಸಪ್ಪಳಗಳಿಂದ ಆ ಅರಣ್ಯವು ದುಮದುಮಿಸಹತ್ತಿತು. ಕುಂತಿಯು ಎಚ್ಚತ್ತಳು. ಪಾಂಡವರೂ ಎಚ್ಚತ್ತರು. ಅತ್ತಿತ್ತ ನೋಡುತ್ತಿರಲು ಸುಂದರ ರೂಪವನ್ನು ತಾಳಿದ ಹಿಡಿಂಬೆಯು ಹತ್ತರವೇ ಕುಳಿತಿದ್ದನ್ನು ಕಂಡು ಕುಂತಿಯು "ತಾಯೀ ನೀನಾರು? ಈ ಕಟ್ಟಡವಿಯಲ್ಲಿ ಒಬ್ಬಳೇ ಹೀಗೇಕೆ ಕುಳಿತಿರುವಿ? ನಿನ್ನ ರೂಪ ಆಭರಣಗಳನ್ನು ನೋಡಿದರೆ, ನೀನು ಸಾಮಾನ್ಯ ಮನುಷ್ಯಳಲ್ಲೆಂದು ಎನಿಸುತ್ತದೆ." ಎಂದು ನುಡಿದಳು. ಹಿಡಿಂಬೆಯು ಎಲ್ಲ ಸಂಗತಿಯನ್ನೂ ಬಿಚ್ಚಿ ಹೇಳಿದಳು. ಕೂಡಲೇ ಎಲ್ಲರೂ ಅಲ್ಲಿಗೆ ಹೋದರು. ಅರ್ಜುನನು ಭೀಮನ ಸಹಾಯ

ಕ್ಕಾಗಿ ಮುಂದೆ ಹೆಜ್ಜೆಯನ್ನಿಕ್ಕಲು ಭೀಮನು ತಡೆ, ಬೇಡವೆಂದು ಹೇಳಲು ಅರ್ಜುನನು ಭೀಮನಿಗೆ“ ಭೀಮಾ, ಬ್ರಾಹ್ಮಮುಹೂರ್ತವು ಸಮೀಪಿಸಹತ್ತಿದೆ. ಆ ಮುಹೂರ್ತದಲ್ಲಿ ರಾಕ್ಷಸರ ಬಲವು ಹೆಚ್ಚುವದು; ಅದುಕಾರಣ, ತೀವ್ರ ಮುಗಿಸೆ”ಂದು ಸೂಚಿಸಿದನು. ಭೀಮನು ಕೂಡಲೇ ತನ್ನ ಎಲ್ಲ ಕಸುವನ್ನು ಒಟ್ಟುಗೂಡಿಸಿ ರಾಕ್ಷಸನನ್ನು ನೆಲಕ್ಕೆ ಕೆಡಹಿ ಗುದ್ದಿ ಕೊಂದನು. ರಾಕ್ಷಸಿಯು ಭೀಮನನ್ನು ಬಿಡಲಿಲ್ಲ. ಭೀಮನು ನಿಷ್ಠುರನೆಂದು ತಿಳಿದು ಆ ರಾಕ್ಷಸಿಯು ದಯೆಯುಳ್ಳ ಕುಂತೀದೇವಿಗೆ ಸೆರಗೊಡ್ಡಿ ಬೇಡಿಕೊಳ್ಳಲು, ಆಕೆಯ ದೀನ ಸ್ಥಿತಿಯನ್ನು ನೋಡಿ ಕುಂತಿಯ ಮನಕರಗಿತು. ಆ ಕಾಲಕ್ಕೆ ರಾಕ್ಷಸರಂಥ ಜನರಕೂಡ ಆರ್ಯರು ಶರೀರಸಂಬಂಧ ಬೆಳೆಸುತ್ತಿದ್ದಂತೆ ತೋರುತ್ತದೆ. ಮನುಷ್ಯ-ರಾಕ್ಷಸರ ವಿವಾಹವು ಶಾಸ್ತ್ರಸಮ್ಮತವೋ ಹೇಗೆಂದು ಧರ್ಮರಾಯನಿಗೆ ಪ್ರಶ್ನೆಮಾಡಲು ಆ ಶಾಸ್ತ್ರಜ್ಞನು ಶಾಸ್ತ್ರಸಮ್ಮತವೆಂದು ಹೇಳಿದನು. ಕುಂತೀದೇವಿಯು ಭೀಮನಿಗೆ ಆ ರಕ್ಕಸಿಯನ್ನು ಲಗ್ನವಾಗಲು ಅಪ್ಪಣೆ ಕೊಟ್ಟಳು. ತಾಯಿಯ ವಾಕ್ಯವೇ ವೇದವಾಕ್ಯವೆಂದು ಅವನು ಒಡಂಬಟ್ಟನು. ಒಬ್ಬ ಮಗನಾಗುವವರೆಗೆ ಭೀಮನು ಅವಳ ಕೂಡ ಸಂಸಾರ ಮಾಡತಕ್ಕದ್ದು. ರಾತ್ರಿಯಲ್ಲಿ ಭೀಮನು ಪಾಂಡವರ ಬಳಿಯಲ್ಲಿರಬೇಕು. ಹಗಲು ರಕ್ಕಸಿಯು ಅವನನ್ನು ವಿಹಾರಕ್ಕಾಗಿ ಕರೆದೊಯ್ಯಬಹುದು. ಈ ಒಡಂಬಡಿಕೆಯಂತೆ ಅವರಿಬ್ಬರ ವಿವಾಹವಾಯಿತು. ಕುಂತಿಯು ತನ್ನ ಮಕ್ಕಳನ್ನು ಚನ್ನಾಗಿ ಬಲ್ಲವಳಾಗಿದ್ದಳು. ಅಂತೆಯೇ ಭೀಮನಿಗೆ ರಾಕ್ಷಸಿಯನ್ನು ಲಗ್ನವಾಗಲು ಅಪ್ಪಣೆಮಾಡಿದಳು. ಇರಲಿ.

**ಪಾಂಡವರು ಸತ್ತರೆಂದು ಕೌರವರಿಗಾದ ಹರುಷ:—** ಇತ್ತ, ಕಾಶಿಯಲ್ಲಿ ಪಾಂಡವರ ಅರಗಿನ ಮನೆಯು ಅಗ್ನಿನಾರಾಯಣನ ಲೀಲೆಯ ಅಂಗಣವಾಯಿತು. ಅರಗಿನ ಮನೆಯೇ ಅದು. ಕೇಳುವದೇನು ? ದುಷ್ಟ ಪುರೋಚನನು ತನ್ನ ಜಾಲಕ್ಕೆ ತಾನೇ ಬಲಿಬಿದ್ದು ಸತ್ತುಹೋದನು. ಬೆಂಕೆಯನ್ನಾರಿಸಲು ಪ್ರಯತ್ನ ಮಾಡಿದರೂ ಸಾಧಿಸಲಿಲ್ಲ. ಎಲ್ಲವೂ ಸುಟ್ಟು ಬೂದಿಯಾದ ಮೇಲೆ ಜನರು ಪಾಂಡವರ ಅಸ್ಥಿಗಳನ್ನಾರಿಸಬೇಕೆಂದು ಶೋಧಿಸುವಷ್ಟರಲ್ಲಿ ಒಂದೇ ಸ್ಥಳದಲ್ಲಿ ಆರು ದೇಹಗಳು ಸುಟ್ಟ ಅಸ್ಥಿಗಳು ದೊರೆತವು. ನಿಜವಾಗಿ ಅವು ಆ ದಿವಸ ಪಾಂಡವರ ಅರಮನೆಯಲ್ಲಿ ವಾಸ

ವಾಗಿದ್ದ ಒಬ್ಬ ನಿಷಾದ ಹೆಣ್ಣುಮಗಳ ಹಾಗೂ ಅವಳ ಐದು ಜನ ಮಕ್ಕಳ ಎಲಬುಗಳು. ವಾರಣಾಸಿಯ ಜನರು ಪಾಂಡವರ ಮರಣಕ್ಕಾಗಿ ಬಹಳೇ ಮಿಡುಕಿದರು. ಕುರುಡನೂ ಲೋಭಿಯೂ ಆದ ಧೃತರಾಷ್ಟ್ರನನ್ನು ಮನದಣಿಯುವಂತೆ ಬೈದರು. ಪಾಂಡವರು ಸುಟ್ಟು ಸತ್ತ ಸುದ್ದಿಯು ಹಸ್ತಿನಾಪುರಕ್ಕೆ ಮುಟ್ಟಲು ಕೌರವರಿಗೆ ಪರಮಾನಂದವಾಯಿತು. ಆದರೂ ಜನಭಯಕ್ಕಾಗಿ ಮೇಲೆ ಮೇಲೆ ದುಃಖದ ಸೋಗುಮಾಡಿ ಅವರ ಶ್ರಾದ್ಧಾದಿ ಕಾರ್ಯಗಳನ್ನು ತೀರಿಸಿದರು. ಭೀಷ್ಮದ್ರೋಣಕೃಪಾಚಾರ್ಯರಿಗೆ ಮಾತ್ರ ನಿಜವಾಗಿಯೂ ಪರಮದುಃಖವಾಯಿತು. ಭೀಷ್ಮನು ಅವರ ಮರಣಕ್ಕಾಗಿ ಅತಿ ದುಃಖಪಡುವದನ್ನು ಕಂಡು ವಿದುರನು ಗುಪ್ತವಾಗಿ ಅವನಿಗೆ ನಿಜ ಸಂಗತಿಯನ್ನು ಹೇಳಿ ಸಂತವಿಸಿದನಂತೆ. ಪಾಂಡವರು ಸುಟ್ಟು ಸತ್ತ ಸುದ್ದಿಯು ಯಾದವರಿಗೂ ಕೂಡಲೇ ತಿಳಿಯಿತು. ಶ್ರೀಕೃಷ್ಣನು ಹಸ್ತಿನಾವತಿಗೆ ಬಂದು ಅವರ ದೆಸೆಯಿಂದ ಬಹಳೇ ಶೋಕಿಸಿ ಶ್ರಾದ್ಧ ತರ್ಪಣ ಮುಂತಾದ ವಿಧಿಗಳನ್ನು ಮುಗಿಸಿಕೊಂಡು ಮರಳಿ ದ್ವಾರಕಾವತಿಗೆ ಹೋದನು. ಈ ಪ್ರಕಾರ ಪಾಂಡವರು ಸತ್ತುಹೋದರೆಂದೇ ಎಲ್ಲರೂ ಭಾವಿಸಿದರು. ತಮ್ಮ ಬಹುದಿನದ ಕಪಟವು ಒಮ್ಮಿಂದೊಮ್ಮೆ ಈಡೇರಿದ ಕ್ಕಾಗಿ ದುರ್ಯೋಧನಾದಿಗಳ ಆನಂದವು ಉಕ್ಕೇರಿತು. ಆ ಆನಂದದಲ್ಲಿ ಅವರು ಮೈಮರೆತರು. ಜನರ ಬಾಯಿಯನ್ನು ಮುಚ್ಚುವದಕ್ಕಾಗಿ ಯಾರಿಗೆ ಲಂಚ, ಯಾರಿಗೆ ಕಾಣಿಕೆ, ಯಾರಿಗೆ ಬೆದರಿಕೆ ಈ ಪ್ರಕಾರ ತರತರದ ಉಪಾಯಗಳನ್ನು ಯೋಚಿಸಿ ಬಾಯಿಬೀಗವನ್ನು ಹಾಕಿದರು.

**ಭೀಮನೊಡನೆ ಹಿಡಿಂಬೆಯ ಮದುವೆ**:— ಹಿಡಿಂಬೆಯು ರಾಕ್ಷಸ ಕುಲದಲ್ಲಿ ಹುಟ್ಟಿದಾಗ್ಯೂ ಸಾಧ್ವಿಯೆಂದು ಅವಳ ನಡೆನುಡಿಗಳಿಂದ ಕುಂತಿಗೆ ಗೊತ್ತಾಯಿತು. ಹಿಡಿಂಬೆಯಾದರೂ ಅತ್ತೆಯ ದಯಾಮಯ ಅಂತಃಕರಣಕ್ಕೆ ಶರಣು ಹೋದಳು. ಹಿಡಿಂಬಾ—ಭೀಮರ ವಿವಾಹಕ್ಕೆ ಕುಂತಿಯು ಸಮ್ಮತಿಸಿದಳು. ಇಷ್ಟೇ ಅಲ್ಲ; ಭೀಮನು ಕುರುಕುರು ಮಾಡುತ್ತಿದ್ದರೂ ಲಗ್ನವಾಗುವದು ಉಚಿತವೆಂದು ಆಗ್ರಹವನ್ನೂ ನಡೆಸಿದಳು. ಕುಂತೀ ದೇವಿಯ ಧೂರ್ತವಾದ ನೋಟವೇ ಇದಕ್ಕೆ ಕಾರಣವು. ಇಂತಹ ವಿವಾಹದಿಂದ ಮುಂದೆ ವಿಶೇಷ ಲಾಭವುಂಟೆಂದು ಕುಂತೀದೇವಿಗೆ ಕೂಡಲೇ

ಹೊಳೆಯಿತು. ಮಾರ್ಗವನ್ನರಿಯದ ಆ ಅರಣ್ಯದಲ್ಲಿ ಹಿಡಿಂಬೆಯಂತಹ ರಾಕ್ಷಸ ರಾಜಪುತ್ರಿಯ ಸಹಾಯವು ಈ ವಿವಾಹದಿಂದ ದೊರಕಬಹುದಾಗಿತ್ತು; ಮುಂದೆ ಎಂದಾದರೂ ಧೃತರಾಷ್ಟ್ರನ ಕೂಡ ಕಲಹವು ತಪ್ಪಿದ್ದಲ್ಲ. ಇಂತಹ ಸಮಯದಲ್ಲಿ ಭೀಮನಿಂದ ಹುಟ್ಟಿದ ಹಿಡಿಂಬೆಯ ಮಗನು ರಾಕ್ಷಸ ರಾಜನಾಗಿದ್ದಲ್ಲಿ ಎಷ್ಟು ಸಹಾಯವಾಗಬಹುದು ? ಎಂಬಿವೇ ಮುಂತಾದ ವಿಚಾರಗಳೂ ಕುಂತಿಯ ತಲೆಯಲ್ಲಿ ಮಿಂಚಿರಬಹುದು. ಅದಕ್ಕಾಗಿಯೇ ಅವಳು ಬಲವಂತಮಾಡಿರಬಹುದು. ಈ ಅರಣ್ಯದಲ್ಲಿ ಸುಮಾರು ೬ ತಿಂಗಳ ಮಟ್ಟಿಗೆ ಪಾಂಡವರು ಸುಖವಾಗಿ ಕಾಲಕಳೆದರು. ಮುಂದೆ ಇವಳಿಂದ ಹುಟ್ಟಿದ ಘಟೋತ್ಕಚನೇ ಕರ್ಣನ ಶಕ್ತಿಯನ್ನು ಜೊಳ್ಳುಗೊಳಿಸಿ ಅರ್ಜುನನ ಮರಣವನ್ನು ತಪ್ಪಿಸಿದನು.

**ಘಟೋತ್ಕಚನ ಹುಟ್ಟು**:—ಹಿಡಿಂಬೆಯ ಸಹಾಯದಿಂದ ಮರುದಿವಸ ಪಾಂಡವರು ಶಾಲಹೋತ್ರ ಸರೋವರಕ್ಕೆ ಬಂದರು. ಅಲ್ಲಿ ಹಿಡಿಂಬೆಯು ಎಲೆಬಳ್ಳಿಗಳಿಂದ ಒಂದು ರಮಣೀಯವಾದ ಗುಡಿಸಲವನ್ನು ಸಿದ್ಧಪಡಿಸಿದಳು. ಅದರಲ್ಲಿ ಪಾಂಡವರಿಗಾಗಿ ಬೇರೆ ಬೇರೆ ಕೋಣೆಗಳನ್ನೂ ಹಾಗೂ ತಾನೂ ಕುಂತೀದೇವಿಯೂ ಮಲಗಲು ಬೇರೆ ಕೋಣೆಗಳನ್ನೂ ಕಲ್ಪಿಸಿದಳು. ಹಗಲೆಲ್ಲ ಆ ರಮ್ಯವನದ ಪ್ರದೇಶಗಳಲ್ಲಿ ನಾನಾ ಶೃಂಗಾರ ರೂಪಗಳನ್ನು ಧರಿಸಿ ಭೀಮನೊಡನೆ ರಮಿಸಿ ಸಂಜೆಯ ಮುಂದೆ ಮರಳಿ ಪರ್ಣಕುಟೀರಕ್ಕೆ ಭೀಮನ ಸಹಿತವಾಗಿ ಬರುತ್ತಿದ್ದಳು. ರಾತ್ರಿಯಲ್ಲಿ ಐದೂ ಜನ ಅಣ್ಣತಮ್ಮಂದಿರು ತರತರದ ಮಾತು ಕಥೆಗಳನ್ನಾಡುವದರಲ್ಲಿ ಕಾಲ ಕಳೆಯುತ್ತಿದ್ದರು. ಹಿಡಿಂಬೆಯು ರಾತ್ರಿಯಲ್ಲಿ ಮನೆಗೆ ಬಂದ ಕೂಡಲೇ ತನ್ನ ಅತ್ತೆಯಾದ ಕುಂತೀದೇವಿಯ ಶುಶ್ರೂಷೆ ನಡಿಸುವಳು. ಹಿಡಿಂಬೆಯು ಬೇಕಾದ ಕೆಲಸಕ್ಕೆ ಸಿದ್ಧಳೇ ! ಸುಂದರ ರಮಣಿಯಾಗಿ ಭೀಮನನ್ನು ರಮಿಸುವಳು, ಸೌಮ್ಯರೂಪವನ್ನು ಧರಿಸಿ ಕುಂತೀದೇವಿಯ ಸೇವೆಯನ್ನು ಮಾಡುವಳು. ವಾಹನವಾಗಿ ಪಾಂಡವರನ್ನು ಬೇಕಾದಲ್ಲಿ ಒಯ್ದು ಮುಟ್ಟಿಸುವಳು. ಬಯಸಿದ ವಸ್ತುಗಳನ್ನು ಕ್ಷಣಮಾತ್ರದಲ್ಲಿ ತಂದು ಸಿದ್ಧಪಡಿಸುವಳು. ಇಂತಹ ಸೊಸೆಯು ಯಾರಿಗೆ ಬೇಡ ? ಇಂಥವರನ್ನು ಅಂಕೆಯಲ್ಲಿಡುವ ಮೂಗದಾಣವೊಂದು ಕೈಯಲ್ಲಿ ಇದ್ದರಾಯಿತು. ರಾಕ್ಷಸರು

ಬಸಿರಾದ ಕೂಡಲೇ ಹಡೆಯುವರಂತೆ ! ಹುಟ್ಟಿದ ಕೂಡಲೇ ಬೆಳೆಯುವರಂತೆ ! ಅದರಂತೆ ಘಟೋತ್ಕಚನು ಇಲ್ಲಿ ಹುಟ್ಟಿದ ಕೂಡಲೇ ತಾಯಿ ತಂದೆಗೆ ನಮಸ್ಕರಿಸಿ ಅವರ ಹೇಳಿಕೆಯ ಪ್ರಕಾರ ತನ್ನ ಕಕ್ಕಂದಿರಿಗೂ ಹಾಗೂ ಅಜ್ಜಿಯಾದ ಕುಂತಿಗೂ ನಮಸ್ಕರಿಸಿ ಏನು ಅಜ್ಞೆ ಎಂದು ನಿಂತನಂತೆ ! ಪಾಂಡವರು ನೆನಸಿದೊಡನೆ ಬರುವ ಭಾಷೆಕೊಟ್ಟು ಹಿಡಿಂಬೆ ಘಟೋತ್ಕಚರಿಬ್ಬರೂ ಹೊರಟುಹೋದರು. ಘಟೋತ್ಕಚನೇ ಕುಂತಿಯ ಹಿರಿಯ ಮೊಮ್ಮಗನು. ಚೊಚ್ಚಲ ಸೊಸೆಯಂತೆ ಚೊಚ್ಚಲ ಮೊಮ್ಮಗನೂ ವಿಲಕ್ಷಣನೇ ! ಎರಡೂ ಅಡವಿಯ ಅಮೂಲ್ಯ ರತ್ನಗಳು.

**ಶ್ರೀವೇದವ್ಯಾಸರ ದರ್ಶನ-ವೇಷಾಂತರ:**— ಈ ಶಾಲಹೋತ್ರ ವನದಲ್ಲಿ ಪಾಂಡವರಿರುವಾಗಲೇ ವ್ಯಾಸರು ಅಲ್ಲಿಗೆ ಬಂದರು. ವ್ಯಾಸರನ್ನು ಸತ್ಕರಿಸಿ ಅವರಿಗೆ ಆಸನಕೊಟ್ಟು ಕುಳ್ಳಿರಿಸಿದರು. ಯೋಗಕ್ಷೇಮದ ಮಾತುಗಳಾದವು. ವ್ಯಾಸರು ಕುಂತಿಯನ್ನು ಸಮಾಧಾನಪಡಿಸಿ “ಅಮ್ಮಾ ! ಚಿಂತೆ ಮಾಡಬೇಡ. ವ್ಯರ್ಥ ದುಃಖಿಸಿದರೇನಾಗುವದು ? ಈ ತೆರನಾದ ಅರಿಷ್ಟ ಶಕುನಗಳನ್ನು ನಾನು ಮೊದಲೇ ಕಂಡು ಹಿಡಿದಿದ್ದೆನು. ದೈವದಲ್ಲಿದ್ದುದ್ದು ಆಗಿಯೇ ತೀರಲು ಬೇಕು. ಇವೆಲ್ಲ ನಿಮ್ಮ ಭಾವೀ ಸುಖದ ಸುಚಿನ್ಹಗಳೇ ಎಂದು ತಿಳಿ. ನಿನ್ನ ಮಕ್ಕಳು ಲೋಕೈಕವೀರರಾಗುವರು. ಎಷ್ಟು ಚಿಂತೆ ಮಾಡಬೇಡ. ಧರ್ಮ, ಇಲ್ಲಿಂದ ಸಮೀಪದಲ್ಲಿಯೇ ಏಕಚಕ್ರವೆಂಬ ಒಂದು ನಗರವಿರುವದು. ನೀವೆಲ್ಲರೂ ಅಲ್ಲಿ ಹೋಗಿ ಬ್ರಾಹ್ಮಣರ ವೇಷದಿಂದ ನಾನು ಮರಳಿ ಬರುವವರೆಗೂ ವಾಸವಾಗಿರಿ. ನಾನು ಮರಳಿಬಂದು ಮುಂದೇನು ಮಾಡಬೇಕೆಂಬುದನ್ನು ಸೂಚಿಸುವೆನು; ನಾನು ಹೇಳುವ ಆಲೋಚನೆಯು ನಿಮ್ಮ ಹಿತಕ್ಕಾಗಿಯೇ” ಎಂದು ಎಲ್ಲರನ್ನೂ ಹರಸಿ ವ್ಯಾಸರು ನಡೆದರು. ಪಾಂಡವರಾದರೂ ವ್ಯಾಸರ ಹೇಳಿಕೆಯಂತೆ ಏಕಚಕ್ರನಗರಕ್ಕೆ ನಾಗಿದರು. ಪಾಂಡವರು ವೇಷಾಂತರದಲ್ಲಿರಬೇಕೆಂದು ವ್ಯಾಸರು ಹೇಳಿದ್ದರಿಂದ ಬ್ರಾಹ್ಮಣ ಭಿಕ್ಷುಗಳ ವೇಷವನ್ನು ಧರಿಸಿದ್ದರು. ವೈರಿಗಳ ಬಾಧೆಯನ್ನು ತಪ್ಪಿಸಲಿಕ್ಕೆ ಪಾಂಡವರು ವೇಷಬದಲಿಸಿದ್ದ. ೬ ಆರು ತಿಂಗಳವನವಾಸವು ಮುಗಿದು ಈಗ ಆರುತಿಂಗಳ ಅಜ್ಞಾತವಾಸವು ಪ್ರಾರಂಭವಾಯಿತು. ಏಕಚಕ್ರನಗರದಲ್ಲಿ ಪಾಂಡವರು ಒಬ್ಬ ಬ್ರಾಹ್ಮಣನ ಮನೆಯಲ್ಲಿ ಒಳಬಕ್ಕಲಾಗಿ

ಇರಹತ್ತಿದರು. ಆ ಕಾಲಕ್ಕೆ ಬ್ರಾಹ್ಮಣ ಕ್ಷತ್ರಿಯ ಮುಂತಾದ ಭೇದಗಳಿದ್ದರೂ ಈಗಿನಂತೆ ಪಂಕ್ತಿಭೋಜನಕ್ಕಾಗಲೀ ಮುಟ್ಟುಮಡಿಗಾಗಲೀ ಯಾವ ನಿರ್ಬಂಧವೂ ಇರಲಿಲ್ಲವೆಂದು ತೋರುತ್ತದೆ. ಹಾಗೆಂತಲೇ ಯುಧಿಷ್ಠಿರನಂಥ ವೇದಾಂತ ಪರಾಯಣನಾದ ಧಾರ್ಮಿಕರಾಜನು ಬ್ರಾಹ್ಮಣನೆಂದು ಗುರುತು ತಪ್ಪಿಸಿ ಬ್ರಾಹ್ಮಣರ ಮನೆಯಲ್ಲಿ ಹೊಕ್ಕು ಅವರ ಮುಟ್ಟುಮಡಿ ಮುಂತಾದವುಗಳಿಗೆ ಅಡ್ಡಿಯನ್ನುಂಟುಮಾಡುತ್ತಿರಲಿಲ್ಲ. ಇದಲ್ಲದೆ ಬ್ರಾಹ್ಮಣರು ಕ್ಷತ್ರಿಯ ಹೆಣ್ಣುಮಕ್ಕಳೊಡನೆ ಲಗ್ನವಾದ ಉದಾಹರಣೆಗಳೂ ಮಹಾಭಾರತದಲ್ಲಿ ವಿಪುಲವಾಗಿ ದೊರಕುತ್ತವೆ. ಮುಟ್ಟುಮಡಿಯ ತಿಳುವಳಿಕೆಯಲ್ಲಿಯೇ ತಮ್ಮ ಧರ್ಮವೆಲ್ಲ ಸಂಗ್ರಹವಾಗಿದೆ ಎಂಬ ಭ್ರಮೆಯೇ ಇತ್ತೀತ್ತ ರೂಢವಾದಂತೆ ತೋರುತ್ತದೆ. ಪಾಂಡವರು ಈ ನಗರದಲ್ಲಿದ್ದಾಗ ವೇದ–ಶಾಸ್ತ್ರ ಮುಂತಾದವುಗಳನ್ನು ಓದುವರು, ತಮ್ಮ ಹೊಟ್ಟೆಗಾಗಿ ದಿನಾಲು ಭಿಕ್ಷೆ ಬೇಡುವರು; ಉಳಿದ ವೇಳೆಯಲ್ಲಿ ಅಣ್ಣತಮ್ಮಂದಿರು ಕೂಡಿ ವನ ಉದ್ಯಾನ ಮುಂತಾದ ರಮ್ಯಸ್ಥಳಗಳಲ್ಲಿ ಸಹಜವಾದ ಸೃಷ್ಟಿಸೌಂದರ್ಯವನ್ನು ನೋಡುವರು. ತಂದ ಭಿಕ್ಷೆಯನ್ನು ಕುಂತೀದೇವಿಗೊಪ್ಪಿಸಿದ ನಂತರ ಕುಂತೀದೇವಿಯು ಅದರಲ್ಲಿ ಎರಡು ಭಾಗಗಳನ್ನು ಮಾಡಿ ಒಂದು ಭಾಗವನ್ನು ಭೀಮನಿಗೆ ಕೊಡುವಳು; ಉಳಿದ ಭಾಗದಲ್ಲಿ ಐದು ಭಾಗಗಳನ್ನು ಮಾಡಿ ತಾನೂ ಉಳಿದ ನಾಲ್ಕುಮಂದಿ ಮಕ್ಕಳೂ ತಿನ್ನುವರು. ಭೀಮನ ಹೊಟ್ಟೆಯು ದೊಡ್ಡದು. ಹಾಗೆಂತಲೇ ಅವನಿಗೆ ವೃಕೋದರ (ತೋಳದ ಹೊಟ್ಟೆಯುವ) ನೆಂದು ಅನ್ನುತ್ತಿದ್ದರು. ದಿನದ ಎಲ್ಲ ಕಾರ್ಯಕ್ರಮಗಳು ತೀರಿದ ಮೇಲೆ ತಮ್ಮ ತಾಯಿಯ ಬಳಿಯಲ್ಲಿ ದಿನಾಲು ಎಲ್ಲರೂ ಕೂಡ್ರುವರು. ಅನೇಕ ವಿಷಯಗಳನ್ನು ಹರಟುವರು. ಕುಂತಿಯಾದರೂ ಕಲಿತವಳು; ಬಲ್ಲವಳು, ಸುಸಂಸ್ಕೃತೆಯು. ಈಗಿನ ಹೆಣ್ಣುಮಕ್ಕಳಂತೆ ಊದುಗೊಳವೆ, ಒಲೆ, ಅಡಿಗೆ ಮುಂತಾದ ವಿಷಯಗಳನ್ನಷ್ಟೇ ಬಲ್ಲವಳಲ್ಲ. ಎಲ್ಲ ವಿಷಯಗಳಲ್ಲಿಯೂ ತನ್ನ ಮಕ್ಕಳೊಡನೆ ಸಂಭಾಷಣೆ ಚರ್ಚೆ ಮುಂತಾದ್ದನ್ನು ನಡಿಸುತ್ತಿದ್ದಳು. ಧರ್ಮನು ಹಿರಿಯನು. ಎಲ್ಲ ಪಾಂಡವರೂ ಅವನ ಅಪ್ಪಣೆಯ ಮೇರೆಗೆ ನಡೆಯುವರು. ತಮ್ಮ ತಾಯಿಯ ಜಾಣತನದಲ್ಲಿ ಅವರ ಪೂರ್ಣ ನಂಬಿಗೆಯಿತ್ತು. ಈ ಬಗೆಯಾಗಿ ಪಾಂಡವರ

ಕುಟುಂಬವು ಅಜ್ಞಾತವಾಸದಲ್ಲಿಯೇ ಪರಮಾನಂದದಿಂದ ಕಾಲಕಳೆಯುತ್ತಿದ್ದಿತು. ಕುಟುಂಬವೆಂಬುವದು ಕೆಲವೆಡೆಯಲ್ಲಂತೂ ನರಕವಾಗಿ ಪರಿಣಮಿಸಿರುತ್ತದೆ. ಪಾಂಡವರಂತಹ ಕುಟುಂಬದಲ್ಲಿ ವಿಷವು ಅಮೃತವಾಗುವದುಂಟು.

**ಏಕಚಕ್ರನಗರದಲ್ಲಿ ಪಾಂಡವರ ವಾಸ:—** ಏಕಚಕ್ರನಗರದಲ್ಲಿ ಪಾಂಡವರು ಐದಾರುತಿಂಗಳು ನೆಮ್ಮದಿಯಿಂದ ಇರುತ್ತಿರಲು ಎಲ್ಲರಿಗೂ ಪ್ರಿಯರಾದರು. ಸಂಪಿಗೆಯ ಹೂವಿನ ಕೀರ್ತಿಯು ಮುಚ್ಚುವದೆಂತು? ಒಂದು ದಿವಸ ಧರ್ಮರಾಜನು ಅರ್ಜುನ ನಕುಲ ಸಹದೇವರನ್ನು ಕೂಡಿಕೊಂಡು ಭಿಕ್ಷಾಟನೆಗಾಗಿ ಹೋಗಿದ್ದನು; ಆ ದಿನ ಭೀಮನು ಮಾತ್ರ ಮನೆಯಲ್ಲಿಯೇ ಉಳಿದಿದ್ದನು. ಕುಂತೀದೇವಿಯೂ ಭೀಮನೂ ಮಾತಾಡುತ್ತ ಕುಳಿತಿದ್ದರು. ಅಷ್ಟರಲ್ಲಿ ಅಳುವ ಧ್ವನಿ ಕೇಳಿಸಿತು. ಕಿವಿಗೊಟ್ಟುಕೇಳಲು ತಮ್ಮ ಮನೆಯ ಯಜಮಾನನಾದ ಬ್ರಾಹ್ಮಣನ ಮನೆಯಲ್ಲಿಯೇ ದುಃಖದ ರೋದನವು ನಡೆದಿತ್ತು. ಅವರ ಆರ್ತಸ್ವರವನ್ನು ಕೇಳಿ ಕುಂತಿಯ ಕೋಮಲ ಹೃದಯವು ಕರಗಿತು. ಚಟ್ಟನೆ ಎದ್ದಳು. "ಭೀಮಾ, ಈ ಬ್ರಾಹ್ಮಣನ ಮನೆಯಲ್ಲಿ ನಾವು ಇಷ್ಟು ದಿನ ಸೌಖ್ಯದಿಂದ ಕಾಲಕಳೆದಿರುವೆವು. ಬ್ರಾಹ್ಮಣನು ಏನೋ ಸಂಕಟದಲ್ಲಿದ್ದಹಾಗೆ ತೋರುತ್ತದೆ. ಪ್ರತ್ಯುಪಕಾರ ಮಾಡಿ ಅವನ ಋಣದಿಂದ ಮುಕ್ತರಾಗುವದು ನಮ್ಮ ಕರ್ತವ್ಯ" ಎಂದು ಕುಂತೀದೇವಿಯು ಭೀಮನ ಮುಖವನ್ನು ನೋಡಲು, ತಾಯಿಯ ಇಂಗಿತವನ್ನು ತಿಳಿದು "ತಾಯೀ, ಅವರಿಗೆ ಬಂದ ಸಂಕಟವಾದರೂ ಯಾವದು? ಚನ್ನಾಗಿ ಕೇಳಿಕೊಂಡು ಬಾ. ಅಂದರೆ ಪ್ರಯತ್ನಮಾಡಿ ಅವರನ್ನು ಬಿಡಿಸುವಾ" ಎಂದು ಭೀಮನು ವಿನಯದಿಂದ ನುಡಿದನು. ಮಗನ ಮಾತಿನಿಂದ ಕುಂತಿಯ ಮುಖಕಮಲವು ಅರಳಿತು. ಬ್ರಾಹ್ಮಣನ ಬಳಿಗೆ ಹೋಗಿ ಅವನನ್ನು ಕಂಡು, ಬಂದ ಸಂಕಟವಾದರೂ ಏನೆಂದು ಪ್ರಶ್ನೆ ಮಾಡಲು ಬ್ರಾಹ್ಮಣನು ಅಂದದ್ದು— ತಾಯೀ, ಈ ನಗರಕ್ಕೆ ಸಮೀಪ ಅರಣ್ಯದಲ್ಲಿಯೇ ಬಕನೆಂಬ ಒಬ್ಬ ರಾಕ್ಷಸನಿರುವನು. ಅವನು ಮಹಾ ಕ್ರೂರನು. ಮನುಷ್ಯರನ್ನು ತಿನ್ನುವವನು. ಒಂದುಸಲ ನಮ್ಮ ನಗರದ ಮೇಲೆ ದಾಳೀ ಮಾಡಿದ್ದನು. ನಮ್ಮ ರಾಜನು ಬಹು ಹೇಡಿಯು. ರಾಕ್ಷಸ

ನಿಂದ ಪ್ರಜೆಗಳ ಸಂರಕ್ಷಣೆ ಮಾಡುವ ಬದಲು ಕೈಸಾಗದೆ ಓಡಿಹೋದನು. ನಗರವಾಸಿಗಳೆಲ್ಲರೂ ಕೂಡಿ, ಆ ರಾಕ್ಷಸನ ಕೂಡ ಒಡಂಬಡಿಕೆಯನ್ನು ಮಾಡಿದರು. ದಿನಾಲು ಒಂದು ಬಂಡಿತುಂಬ ನಾನಾತರದ ರುಚಿಕರ ವಾದ ಅನ್ನವನ್ನೂ ಹಾಗೂ ಬಂಡಿಗೆ ಹೂಡಿದ ಎರಡು ಕೋಣಗಳನ್ನೂ ಒಬ್ಬ ಮನುಷ್ಯನನ್ನೂ ಬಲಿಕೊಡಬೇಕೆಂದು ನಿಶ್ಚಿತವಾಯಿತು. ಜೀವದ ಮೇಲೆ ಬಂದದ್ದು ಬಲಿಯಮೇಲೆ ಹೋಯಿತೆಂದು ಜನರು ಈ ಒಡಂಬಡಿ ಕೆಗೆ ಒಪ್ಪಿಕೊಂಡರು. ಅದರಂತೆ ಇಲ್ಲಿಯ ನಾಗರಿಕರೆಲ್ಲರೂ ಸರತಿಯಿಂದ ರಾಕ್ಷಸನಿಗೆ ಆಹಾರವನ್ನು ಮುಟ್ಟಿಸುವದಾಗಿ ಗೊತ್ತುಮಾಡಿದರು. ದಿನಾಲು ಒಬ್ಬೊಬ್ಬರ ಮನೆಯ ಬಾರಿ ಇರುವಂತೆ ಇಂದು ನಮ್ಮ ಮನೆಯ ಸರ ತಿಯು ಬಂದಿದೆ. ಅನ್ನವೆಲ್ಲ ಸಿದ್ಧವಾಗಿದೆ. ನರಬಲಿಗಾಗಿ ಮನೆಯಲ್ಲಿ ವಿಚಾರ ನಡೆದಿರುವಾಗ ದುಃಖವು ತಡೆಯದಾಯಿತು. ಏನು ಮಾಡುವದು ತಾಯಿ ? ಬಂದುದಕ್ಕೆ ಬಾಗಿನವೆಯಬೇಕಲ್ಲವೆ ?" ಎಂದು ಬ್ರಾಹ್ಮಣನಾಡಿ ದ್ದನ್ನು ಕೇಳಿ ಕುಂತೀದೇವಿಯ ಮುಖವು ದುಃಖದಿಂದ ಕುಂದದೆ ಆನಂದ ದಿಂದ ಹಿಗ್ಗಿತು. ಅವಳು "ಸ್ವಾಮೀ, ಚಿಂತಿಸಬೇಡ. ಮನೆಗೆ ನೀನೇ ಹಿರಿಯ. ನೀನು ಹೋದರೆ ಮನೆತನವು ನಾಗುವದು ಕಷ್ಟ. ನಿನ್ನ ಹೆಂಡತಿಯೂ ಸಂಸಾರಕ್ಕೆ ಅವಶ್ಯವೇ. ನಿಮಗೆ ಮಗನೂ ಒಬ್ಬನು. ಮಗಳೂ ಒಬ್ಬಳೇ. ಆದದರಿಂದ ನಿಮ್ಮಲ್ಲಿ ಯಾರೂ ಹೋಗಕೂಡದು. ನನಗೆ ಐವರು ಮಕ್ಕಳಿರುವರು. ಅವರಲ್ಲಿ ಒಬ್ಬರನ್ನು ನಾನು ಇಂದು ಕಳುಹುತ್ತೇನೆ." ಎಂದು ಬ್ರಾಹ್ಮಣನ ಉಪಕಾರದ ಭಾರವನ್ನು ಇಂದು ಇಳಿಸುವ ಹೊತ್ತು ಬಂದದ್ದಕ್ಕಾಗಿ ಕುಂತಿಯು ಹಿಗ್ಗಿದಳು. ಬ್ರಾಹ್ಮಣನು ಕುಂತಿಯ ಮಾತಿಗೆ ಒಪ್ಪದೆ "ಅಮ್ಮಾ ! ಐದು ಮಕ್ಕಳಿದ್ದರೇನಾಯಿತು? ನೀನು ಪುಣ್ಯವಂತಿಯು. ಯಾರಿಗಾದರೂ ಮಕ್ಕಳು ಭಾರವೇ ? ನೀವು ನಮ್ಮಲ್ಲಿ ಬಂದು ಇಳಿದವರು. ತಾಯೀ, ನಿನ್ನ ಮಕ್ಕಳಲ್ಲೊಬ್ಬನನ್ನು ಬಲಿ ಗೊಟ್ಟು ನಮ್ಮ ಜೀವವನ್ನುಳಿಸಿಕೊಂಡು ಯಾವ ಪಾಪಕ್ಕೆ ಹೋಗಲಿ ? ಇಂತಹ ಮಾತನ್ನಾಡಬೇಡ." ಎಂದನು. ಬ್ರಾಹ್ಮಣನ ವಿನಯೋಕ್ತಿಗಳಂತೆ ಅವನ ಹೃದಯವೂ ಗಟ್ಟಿಯಾಗಿತ್ತು. ಬ್ರಾಹ್ಮಣನು ಹೀಗಾದರೆ ಸಮ್ಮತಿಸುವ ದಿಲ್ಲೆಂದು ತಿಳಿದು ಕುಂತಿಯು ಅವನಿಗೆ— "ಅಪ್ಪಾ, ಎಷ್ಟು ಮಕ್ಕ

ಳಿದ್ದರೂ ತಾಯಿಗೆ ಭಾರವಲ್ಲ. ನಿಜವಾದ ಸಂಗತಿಯನ್ನು ಕೇಳಿರಿ! ನನ್ನ ಮಕ್ಕಳಲ್ಲೊಬ್ಬನು ಮಂತ್ರ ತಂತ್ರಗಳನ್ನು ಬಲ್ಲವನೂ ಮಹಾ ಗಟ್ಟಿಗನೂ ಇರುವನು. ರಾಕ್ಷಸನು ಅವನ ಮೈಯನ್ನೂ ಕೂಡ ಮುಟ್ಟಲು ಶಕ್ತನಾಗ ಲಾರನು. ಇದರಲ್ಲಿ ಯಾರಿಗೂ ಪಾಪ ತಟ್ಟದು. ಅದಕ್ಕಾಗಿ ದಯಮಾಡಿ ಸಮ್ಮತಿಸು; ಈ ಸುದ್ದಿಯನ್ನು ಯಾರ ಮುಂದೂ ಹೇಳಬೇಡ." ಕುಂತೀ ದೇವಿಯ ಮಾತಿಗೆ ಕೊನೆಯಲ್ಲಿ ಬ್ರಾಹ್ಮಣನು ಒಪ್ಪಿಕೊಂಡನು. ಕುಂತಿಯು ಬಂದು ಭೀಮನೆದುರಿಗೆ ಆದ ವ್ಯವಸ್ಥೆಯನ್ನು ಹೇಳಲು ಭೀಮನ ಆನಂದ ವನ್ನು ಹಿಡಿದವರಾರು? ಬಂಡಿತುಂಬ ಅನ್ನ; ಮೇಲಾಗಿ ಹಿರಿದಾದ ಮಲ್ಲ ಯುದ್ಧದ ಸುಸಂಧಿ; ಸುಮ್ಮನೆ ಮನೆಯಲ್ಲಿ ಕುಳಿತು ಮೈಯೆಲ್ಲವು ಜಿಗಿದಿತ್ತು. ತಿರುಪೆಯ ಕೂಳಿನಿಂದ ನಾಲಿಗೆ ಕೆಟ್ಟಿತ್ತು. ಅವೆರಡಕ್ಕೂ ಇಂದು ತಾಯಿಯು ಒಳ್ಳೇ ಉಪಾಯವನ್ನು ಹುಡುಕಿದಳು.

**ಭೀಮನ ಬಲದಬಗ್ಗೆ ಕುಂತಿಯ ಹೇಳಿಕೆ:**—ಧರ್ಮರಾಯನೂ ಅರ್ಜುನ ನಕುಲಸಹದೇವರೂ ಮಧ್ಯಾಹ್ನಕ್ಕೆ ಮನೆಗೆ ಬಂದರು. ಬಂದು ನೋಡುವಷ್ಟರಲ್ಲಿ ಭೀಮನ ಮುಖವು ಆನಂದದಿಂದ ಹರವಾಗಿತ್ತು. ವಿಲ ಕ್ಷಣ ಚಟುವಟಿಕೆಯಲ್ಲಿದ್ದನು. ಮೇಲಿಂದ ಮೇಲೆ ಕೈಮೈಯನ್ನು ಒಡ ಮುರಿಯುತ್ತ ನಡು–ನರ ಸಂದುಗಳನ್ನು ಸಡಲಿಸುತ್ತಿದ್ದನು. ಧರ್ಮರಾಯ ನಿಗೆ ಆನಂದದ ಕಾರಣವೇನೆಂಬುವದು ತಿಳಿಯಲಿಲ್ಲ. ಧರ್ಮನು—"ಅವ್ವಾ, ಭೀಮನ ಆನಂದಕ್ಕೆ ಕಾರಣವೇನು?" ಎಂದು ಕುಂತಿಯನ್ನು ಕೇಳಲು ಕುಂತಿಯು ಎಲ್ಲ ಸಂಗತಿಯನ್ನು ಹೇಳಿದಳು. ತಾಯಿಯ ಮಾತನ್ನು ಕೇಳಿ ಧರ್ಮನಿಗೆ ಸಂತಾಪವಾಯಿತು. "ತಾಯೀ, ಏನಿದು? ಈ ಸಾಹಸ ಗೈಯಲು ನಿನಗಾರು ಹೇಳಿದರು? ಭೀಮನ ಬಾಹುಬಲಗಳನ್ನು ನಂಬಿ ನಾವು ಕಾಲಕಳೆಯುತ್ತಿರುವೆವು. ಅದೇ ಬಾಹುಬಲದಿಂದ ಇಂದಿಲ್ಲ ನಾಳೆ ಯಾದರೂ ನಮ್ಮ ರಾಜ್ಯವನ್ನು ಮತ್ತೆ ದೊರಕಿಸಬಹುದೆಂಬ ಆಸೆ. ಅವ್ವಾ, ನಮ್ಮೆಲ್ಲರ ಆಸೆಯನ್ನೇ ಹಾರಹೊಡೆದಿ. ನಿನಗೆ ಈ ಹುಚ್ಚು ಯಾರು ಕಲಿಸಿ ದರು?" ಎಂಬ ಧರ್ಮರಾಯನ ಮಾತುಗಳನ್ನು ಕುಂತೀದೇವಿಯು ಶಾಂತ ರೀತಿಯಿಂದ ಕೇಳಿಕೊಂಡಳು. ನಡುವೆ ತಡೆಯಲಿಲ್ಲ. ಆ ಮೇಲೆ ಶಾಂತ ರೀತಿಯಿಂದ ಅಂದದ್ದು—"ಧರ್ಮಾ, ಇಷ್ಟೊಂದು ಸಂತಾಪವಾಗಲು ಯಾವ

ಕಾರಣವೂ ಇಲ್ಲ. ಪೂರ್ಣವಾಗಿ ವಿಚಾರ ಮಾಡಿಯೇ ಈ ಕಾರ್ಯವನ್ನು ನಿಶ್ಚೈಸಿರುವೆನು. ಈ ಬ್ರಾಹ್ಮಣನ ಮನೆಯಲ್ಲಿ ನಾವು ನಿಶ್ಚಿಂತೆಯಿಂದ ಕಾಲ ಕಳೆದೆವು. ಇದನ್ನು ಮರೆಯಬೇಡ. ಈ ಉಪಕಾರವನ್ನು ಪ್ರತ್ಯುಪಕಾರ ದಿಂದ ತೀವ್ರವೇ ತೀರಿಸುವದು ಮನುಷ್ಯರ ಧರ್ಮವು. ಒಂದು ಉಪ ಕಾರಕ್ಕೆ ಪ್ರತಿಯಾಗಿ ಹತ್ತು ಉಪಕಾರಗಳನ್ನು ಮಾಡಬೇಕೆಂದು ಸಜ್ಜನರು ಹೇಳಿರುವ ಧರ್ಮವನ್ನು ಮರೆಯಬೇಕೆ? ನಾನು ಭೀಮನ ಶೌರ್ಯವನ್ನು ಚನ್ನಾಗಿ ಬಲ್ಲೆನು. ತಾಯಿಗೆ ಮಕ್ಕಳು ಬೇಕು; ಆದರೆ ಅಳಲು, ಕರೆ ಯಲು, ಕಿರಿಕಿರಿ ಮಾಡಲು, ಅನ್ನದಹೊರೆ ಹೆಚ್ಚಿಸಲು ಅಲ್ಲ. ಕುಲದ ಕೀರ್ತಿ ಯನ್ನೂ, ಆರ್ಯಸಂಸ್ಕೃತಿಯನ್ನೂ ಆರ್ಯಧರ್ಮವನ್ನೂ ಬೆಳೆಸಲು ಮಕ್ಕಳು ಬೇಕು. ಇಂತಹ ಮಕ್ಕಳಿಲ್ಲದೆ ಕೂಳಿಗೆ ಭಾರಾದ ನೂರು ಮಕ್ಕಳಿದ್ದರೂ ಆ ತಾಯಿಯು ಬಂಜೆಯೇ ಸರಿ! ಇದನ್ನೆಲ್ಲ ಸಾದ್ಯಂತ ವಾಗಿ ವಿಚಾರಮಾಡಿಯೇ ಭೀಮನನ್ನು ಈ ಕಾರ್ಯಕ್ಕಾಗಿ ನಿಯಮಿಸಿ ದ್ದೇನೆ. ಈ ರಾಕ್ಷಸನ ಕಾಟಕ್ಕಾಗಿ ಇಡೀ ಏಕಚಕ್ರನಗರವೇ ಹಾಳಾಗುತ್ತ ನಡೆದಿದೆ. ಹಾಗೇ ಬಿಟ್ಟಲ್ಲಿ ಏಕಚಕ್ರನಗರವನ್ನೂ ಅದರೊಡನೆ ಆರ್ಯ ಸಂಸ್ಕೃತಿ, ಧರ್ಮವನ್ನೂ ರಾಕ್ಷಸನು ನುಂಗಿ ನೀರು ಕುಡಿಯದೇ ಇರನು. ಧರ್ಮಾ, ನನ್ನ ಮಕ್ಕಳು ವೀರಕ್ಷತ್ರಿಯರಲ್ಲವೇ? ಧರ್ಮ ಅರ್ಜುನ ಭೀಮರ ತಾಯಿಯು ವೀರಮಾತೆಯಲ್ಲವೇ? ಅಂದಮೇಲೆ ವೀರಮಾತೆಯು ವೀರಪುತ್ರರಿಗುಚಿತವಾದ ಕಾರ್ಯವನ್ನೇ ಹೇಳಿದ್ದಾಳೆ. ಇದರಲ್ಲಿ ಹುಚ್ಚು ತನವೂ ಇಲ್ಲ; ಮಕ್ಕಳನ್ನು ಕೊಲ್ಲುವ ರಾಕ್ಷಸವೃತ್ತಿಯೂ ಇಲ್ಲ. ಬ್ರಾಹ್ಮಣನ ಉಪಕಾರಕ್ಕೆ ಪ್ರತ್ಯುಪಕಾರವಿದೆ. ಇದು ಸನಾತನಧರ್ಮದ ಮಹಾಮಾರ್ಗ ವೆಂಬುದನ್ನು ನಿನಗೆ ನಾನು ಹೇಳಬೇಕೆ? ಭೀಮನಲ್ಲಿ ಆನೆಯ ಬಲವಿದೆ. ಭೀಮನು ಕೂಸಿರುವಾಗ ನನ್ನ ತೊಡೆಯ ಮೇಲಿಂದ ವಜ್ರಬಂಡೆಯ ಕಲ್ಲಿನ ಮೇಲೆ ಬೀಳಲು ಕಲ್ಲೇ ಸೀಳಿತು; ಆದರೆ ಕೂಸು ಕುಲುಕುಲು ನಗುತ್ತಿತ್ತು. ಈ ನನ್ನ ಮದ್ದಾನೆಯಂಥ ಮಗನು ಬಕನನ್ನು ಸೀಳಿ ಬರುವನು." ಕುಂತಿಯು ಶಾಂತವಾಗಿ ಮುಗುಳು ನಗೆಯಿಂದ ಗಂಭೀರ ವಾಗಿ ನುಡಿದ ಮಾತನ್ನು ಕೇಳಿ ಧರ್ಮನು ತಲೆ ಬಗ್ಗಿಸಿದನು. "ಅಮ್ಮಾ, ಸಂತಾಪದ ಭರದಲ್ಲಿ ಏನೋ ನುಡಿದೆ. ನಿನ್ನ ಇಚ್ಛೆ ಆಶೀರ್ವಾದವಿದ್ದಲ್ಲಿ

ಬಕಸು ಭೀಮನಿಗೆ ಯಾವಗಿಡದ ತೊಪ್ಪಲು?" ಎಂದಸು. ಈ ಪ್ರಕಾರ ಆ ವೀರಮಾತೆಯು ಲೋಕ ಸಂರಕ್ಷಣೆಗಾಗಿ ದುಷ್ಟರ ಹಾವಳಿಯನ್ನು ನಿವಾರಿಸಲು ತನ್ನ ಪ್ರೀತಿಯ ಮಗನನ್ನು 'ಜಯವಂತನಾಗು' ಎಂದು ಹರಸಿ ಆನಂದದಿಂದ ಸಂಕಟಕ್ಕೆ ಎದೆಗೊಟ್ಟು ಕಳುಹಿದಳು. ಎಷ್ಟೋ ಜನರು ತಮ್ಮ ಮಕ್ಕಳು ಹೇಗಾದರೂ ಮಾಡಿ ಜೀವದಿಂದಿದ್ದರೆ ಸಾಕು ಎಂದು ಮಾನಕೀರ್ತಿ ಮುಂತಾದವುಗಳನ್ನು ಕೂಡ ಮಣ್ಣುಗೂಡಿಸಿ ಅಂತಹ ಅರಗಿನ ಗೊಂಬೆಗಳನ್ನು ಪರಿಪರಿಯಿಂದ ರಕ್ಷಿಸುವರು. ಇಂಥ ಮಕ್ಕಳು ನೂರಾರಿದ್ದರೂ ಆ ತಾಯಿಯು ಬಂಜೆಯೇ ಎಂದು ಕುಂತೀ ದೇವಿಯು ಸಾರಿರುವಳು. ಲೋಕರಕ್ಷಣೆಗಾಗಿ, ಆರ್ಯಧರ್ಮ ಸಂರಕ್ಷಣೆ ಗಾಗಿ, ಆರ್ಯಸಂಸ್ಕೃತಿ ಕೀರ್ತಿಮಂದಿರದ ಕಾವಲಿಗಾಗಿ, ಹೆಚ್ಚಳಕ್ಕಾಗಿ ಮಕ್ಕಳಿರಬೇಕೆಂದು ಕುಂತೀದೇವಿಯು ಧರ್ಮನನ್ನು ಕುರಿತು ಹೇಳಿದ ಮಕ್ಕಳ ವ್ಯಾಖ್ಯೆಯನ್ನು ನೋಡಿದರೆ ಮಕ್ಕಳಿದ್ದ ಬಂಜೆಯರು ಎಷ್ಟು ಜನರು ಸಿಕ್ಕುವದಿಲ್ಲ? ಕುಂತಿಯು ವೀರಮಾತೆಯು. ಆಕೆಯ ಮಕ್ಕಳು ವೀರಪುತ್ರರು. ನಮ್ಮ ಹಿಂದೂ ಧರ್ಮಗ್ರಂಥಗಳಲ್ಲಿ ಮಕ್ಕಳಿಲ್ಲದವರಿಗೆ ಗತಿಯಿಲ್ಲವೆಂದು ಹೇಳಿದ್ದು ಇಂತಹ ವೀರ ಪುತ್ರ ಪುತ್ರಿಯರಿಲ್ಲದವರಿಗಾಗಿ ಮಾತ್ರ. ಬಕನ ವಧೆಯು ಭೀಮನಿಂದ ಎಂತಾಯಿತೆಂಬುದು ಪ್ರಸಿದ್ಧ ವಿದೆ. ಮುಂದೆ ದ್ರೌಪದಿಸ್ವಯಂವರದ ವರ್ಣನೆಯು ಪುರಾಣ ಪ್ರಸಿದ್ಧವಿದೆ.

**ಪಾಂಡವರು ಸ್ವಯಂವರಕ್ಕೆ ಹೋದದು.** :—ದ್ರೌಪದಿಯ ಪಣವನ್ನು ಪೂರ್ಣಗೊಳಿಸುವದು ಯಾವ ರಾಜರಿಗೂ ಆಗಲಿಲ್ಲ. ಅರ್ಜು ನನು ಲೀಲೆಯಿಂದ ಅದನ್ನು ನೆರವೇರಿಸಿದನು. ದ್ರೌಪದಿಯು ಅವನ ಕೊರಳಿಗೆ ಮಾಲೆಯನ್ನು ಹಾಕಿದಳು. ಮತ್ಸರದಿಂದ ಕಾದಲು ಬಂದ ಎಲ್ಲ ರಾಜರನ್ನು ಸೋಲಿಸಿ ದ್ರೌಪದಿಯನ್ನು ಕರೆದುಕೊಂಡು ಪಾಂಡವರು ತಮ್ಮ ಬಿಡಾರಕ್ಕೆ ಹೊರಟರು. ಕೃಷ್ಣ ಬಲರಾಮರಿಗೆ ಬಹು ಆನಂದ. ಮನೆಗೆ ಬಂದಕೂಡಲೇ ಕುಂತೀದೇವಿಗೆ ತನ್ನ ಮಕ್ಕಳ ವೀರತನವನ್ನು ನೋಡಿ ಹಿಗ್ಗೇ ಹಿಗ್ಗು. ದ್ರೌಪದಿಯನ್ನು ಪ್ರೇಮದಿಂದ ತಕ್ಕೈಸಿ ಮೂಸಿನೋಡಿ ಹತ್ತರ ಕುಳ್ಳಿರಿಸಿಕೊಂಡು ಮೈದಡವಿ "ತಂಗೀ ನೀನು ವೀರಪುತ್ರಿ. ವೀರನೇ ನಿನ್ನನ್ನು ಗೆದ್ದಿರುವನು. ನೀನು ವೀರಪತ್ನಿ; ಬೇಗನೇ ವೀರಮಾತೆಯೂ

ಆಗು ಎಂದು ಹರಸಿದಳು. ಅದೇ ದಿನ ಕೃಷ್ಣ ಬಲರಾಮರೂ ಮೂರುಸಂಜೆಗೆ ಬಂದು ಕುಂತಿಯ ಪಾದಕ್ಕೆರಗಿ ಕ್ಷೇಮಸಮಾಚಾರಗಳನ್ನು ಕೇಳಿ ಅವರು ಪಟ್ಟ ದುಃಖಗಳಿಂದ ದುಃಖಿತರೂ, ಆನಂದದಿಂದ ಆನಂದಿತರೂ ಆದರು. ದ್ರೌಪದಿಯನ್ನು ಕುರಿತು ಶ್ರೀಕೃಷ್ಣನು “ ತಂಗೀ, ನಿನಗೆ ತಕ್ಕ ಮನೆತನವು ಲಭಿಸಿದೆ. ವೀರಮಾತೆ, ಪರಮ ಭಾಗವತಳು, ಎಂಬುದಾಗಿ ನಿನ್ನ ಕೀರ್ತಿಯು ಭರತಖಂಡದಲ್ಲಿ ಹಬ್ಬಲಿ! ಇಂದಿನಿಂದ ನೀನು ನನ್ನ ತಂಗಿಯು.” ಎಂದು ಹರಸಿ ಇನ್ನು ಬಹಳಹೊತ್ತು ನಿಂತರೆ ಪಾಂಡವರ ವೇಷವು ಹೊರಪೀಳಬಹುದೆಂದು ಕುಂತಿಯ ಅಪ್ಪಣೆಯನ್ನು ಪಡೆದು ಹೊರಟು ಹೋದನು.

**ಸ್ವಯಂವರದ ವಿಷಯ ಕುಂತಿಗೆ ಗೊತ್ತಿರಲಿಲ್ಲವೇ?**:— ಈ ಬಗ್ಗೆ ಇನ್ನೊಂದು ಐತಿಹ್ಯ ಉಂಟು; ಪಾಂಡವರು ದ್ರೌಪದಿಯನ್ನು ತಂದ ಕೂಡಲೇ ತಾಯಿಗೆ ಭಿಕ್ಷೆಯನ್ನು ತಂದಿರುವೆವೆಂದು ಹೇಳಿದಾಗ “ ಹಾಗಾದರೆ ಸಮನಾಗಿ ಹಂಚಿಕೊಂಡು ಭಕ್ಷಣಮಾಡಿರಿ”ಎಂದು ಕುಂತೀದೇವಿಯು ಹೇಳಿದಳಂತೆ! ಮುಂದೆ ದ್ರೌಪದಿಯನ್ನು ನೋಡಿ ಗಾಬರಿಯಾಗಿ ತನ್ನ ವಾಕ್ಯವು ನಿಜವಾಗಿ ಸುಳ್ಳು ಆಡಿದ ಪಾಪದಿಂದ ಪಾರಾಗಲು ಐದೂ ಮಕ್ಕಳೂ ಕೂಡಿಯೇ ದ್ರೌಪದಿಯನ್ನು ವಿವಾಹವಾಗಬೇಕಾಗಿ ಹೇಳಿದಳು. ಹಾಗಾದಲ್ಲಿ ಐದೂಜನರು ದ್ರೌಪದಿಯನ್ನು ಭಕ್ಷಿಸಿದಂತೆ ಆಯಿತು. ಕುಂತಿಗೆ ಪಾಪತಪ್ಪಿತು ಎಂದು ಬಗೆದು ಐದೂಮಂದಿ ದ್ರೌಪದಿಯನ್ನು ಲಗ್ನವಾದರೆಂದು ಹೇಳುವದುಂಟು. ಕುಂತಿಯು ತನ್ನ ಮಕ್ಕಳಿಗೆ ಸಮನಾಗಿ ಹಂಚಿಕೊಳ್ಳಿರೆಂದು ಹೇಳಿದ ಮಾತೇ ಸುಳ್ಳು. ಏಕಚಕ್ರನಗರದಲ್ಲಿದ್ದಾಗ ಸ್ವಯಂವರದ ಸುದ್ದಿಯನ್ನು ಕೇಳಿ ಅಲ್ಲಿಗೆ ಹೋಗಬೇಕೆಂಬ ಪಾಂಡವರ ಬಲವಾದ ಇಚ್ಛೆಯನ್ನು ಕಂಡು ಪಾಂಚಾಲನಗರಕ್ಕೆ ಹೊರಡುವ ಮಾತೆತ್ತಿದಳು. ವ್ಯಾಸರಾದರೂ ಹಾಗೇ ಹೇಳಿದರು. ಸ್ವಯಂವರದಲ್ಲಿ ದ್ರೌಪದಿಯನ್ನು ಗೆಲಿಯುವದೇ ಪಾಂಡವರ ಉದ್ದೇಶವಿತ್ತೆಂಬುದು ಇದರಲ್ಲಿ ಸ್ಪಷ್ಟವಿದೆ. ಮೇಲಾಗಿ ಪಾಂಡವರು ಮಾತೃಭಕ್ತರು. ತಾಯಿಯ ಆಶೀರ್ವಾದವಿಲ್ಲದೆ ಯಾವ ಕೆಲಸವನ್ನೂ ಮಾಡರವರು. ಸ್ವಯಂವರವೇನು ಆಕಸ್ಮಾತ್ತಾಗಿ ಆದ ಸಂಗತಿಯಲ್ಲ. ಅದರ ಮುಹೂರ್ತ ಮುಂತಾದವುಗಳೆಲ್ಲ

ಮೊದಲೇ ಗೊತ್ತಾಗಿದ್ದವು. ಅಂದಮೇಲೆ ಸ್ವಯಂವರಕ್ಕಾಗಿಯೇ ಹೋದ ತನ್ನ ಮಕ್ಕಳು ಭಿಕ್ಷೆ ತಂದರೆಂದು ಕುಂತಿಯು ಹೀಗೆ ಹುಚ್ಚು ಉತ್ತರವನ್ನು ಕೊಟ್ಟಳೆಂಬುದು ಹಾಸ್ಯಾಸ್ಪದವೇ ಸರಿ. ಕುಂತಿಯು ಕಿರುಕುಳ ಹೆಂಗಸಲ್ಲ. ವೇದಶಾಸ್ತ್ರ, ಧರ್ಮಾಧರ್ಮ ಸತ್ಯಾಸತ್ಯ ಮುಂತಾದವುಗಳ ಸ್ಥೂಲ ಸೂಕ್ಷ್ಮ ಭೇದಗಳನ್ನು ಚನ್ನಾಗಿ ಅರಿತವಳು. ಆರ್ಯರಲ್ಲಿ ಒಬ್ಬ ಹೆಂಗಸಿಗೆ ಒಬ್ಬನೇ ಗಂಡನೆಂಬ ನಿಯಮವು ಆ ಕಾಲಕ್ಕೆ ಸರ್ವಸಾಮಾನ್ಯವಾಗಿತ್ತು. ಆಪತ್ ಧರ್ಮದಲ್ಲಿಕೂಡ ಗಂಡನ ಅಜ್ಞೆಯಿಂದಲೂ ಗಂಡನನ್ನು ಬಿಟ್ಟು ಮೂರು ಸಂಬಂಧಗಳಿಗಿಂತ ಹೆಚ್ಚಿನ ಸಂಬಂಧವನ್ನು ಮಾಡುವದು ಅಶಾಸ್ತ್ರವೆಂದು ಆಕೆಯು ಪಾಂಡುರಾಯನಿಗೆ ಹೇಳಿದ ವಿವೇಕವನ್ನೂ ಮರೆಯಲಾಗದು. ಹೀಗಿದ್ದು, ಕುಂತಿಯು ಪ್ರಮಾದದಿಂದ ನುಡಿದ ಮಾತನ್ನೇ ಸತ್ಯ ಮಾಡಲು ಲೋಕಾರೂಢಿಗೂ, ವೈದಿಕ ಧರ್ಮಕ್ಕೂ ವಿರುದ್ಧವಾಗಿ ಪಾಂಡವರು ನಡೆದರೆನ್ನುವದು ನಂಬಲಾಗದ ಕಟ್ಟುಕಥೆಯೆಂದು ನಮಗೆ ಎನಿಸುತ್ತದೆ.

**ಬಹುಪತಿವ್ರತವು ಶಾಸ್ತ್ರಸಮ್ಮತವೇ ?:**—ಆ ಕಾಲಕ್ಕೆ ಆರ್ಯಧರ್ಮದಲ್ಲಿ ಈ ನಡೆವಳಿಯು ಇದ್ದಿರಬಹುದೇನು? ಮಹಾಭಾರತದಿಂದಂತು ಒಬ್ಬ ಹೆಂಗಸು ಐವರನ್ನು ಮದುವೆಯಾಗುವ ವಾಡಿಕೆ ಇದ್ದಿಲ್ಲವೆಂದು ಕಂಡುಬರುತ್ತದೆ. ದ್ರೌಪದಿಯ ಉದಾಹರಣೆಯೊಂದು ಮಾತ್ರ ಅಪವಾದವು. ಈ ವಿವಾಹ ಪದ್ಧತಿಯು ಹಿಂದಕ್ಕಿದ್ದರೂ ದ್ರೌಪದಿಯ ವಿವಾಹ ಕಾಲಕ್ಕೆ ಮಾತ್ರ ಸಮೂಲನಾಶವಾಗಿತ್ತು. "ಲೋಕರೂಢಿಗೂ ವೇದಮತಕ್ಕೂ ವಿರುದ್ಧವಾದ ಈ ವಿವಾಹದ ಬಗ್ಗೆ ನಿನ್ನ ಮತವೇನಿದೆ"ಎಂದು ವ್ಯಾಸರು ಮೊದಲು ದ್ರುಪದನಿಗೆ ಪ್ರಶ್ನೆ ಮಾಡಿರುವರು. ಅಂದಮೇಲೆ ಈ ಆಚರಣೆಯು ಅಸಂಬದ್ಧವೆಂದೇ ಅವರದು ಕೂಡ ಅಭಿಪ್ರಾಯ! ಪೂರ್ವಜನ್ಮದಲ್ಲಿ "ಪತಿಂ ದೇಹಿ, ಪತಿಂ ದೇಹಿ" ಎಂದು ದ್ರೌಪದಿಯು ಐದು ಸಾರೆ ನುಡಿದದ್ದಕ್ಕಾಗಿ ಮಹಾದೇವನು ಐದು ಗಂಡರಾಗುವರೆಂದು ವರಕೊಟ್ಟ ಅದ್ಭುತ ಕಥೆಯೊಂದುಂಟು. ಇವೆಲ್ಲ ಕಥೆಗಳನ್ನು ಯಾವನೋ ಒಬ್ಬ ಅರಣ್ಯ ಪಂಡಿತನು ವ್ಯಾಸರ ಹೆಸರಿನಿಂದ ಮಹಾಭಾರತದಲ್ಲಿ ಜಡಿದು ಬಿಟ್ಟಿರಬಹುದೆಂದು ನಮ್ಮ ಮತ. ಕೆಲವು ಪಾಶ್ಚಾತ್ಯವಿದ್ವಾಂಸರು ಪಾಂಡ

ವರ ಈ ವಿವಾಹವು ಸತ್ಯವೆಂದೂ ಆದರಿಂದ ಅವರು ಸಿಥಿಯನರಿರಬಹುದೆಂದೂ ತರ್ಕಕಟ್ಟಿದ್ದಾರೆ. ಅದೂ ಸಮಂಜಸವಾಗಿ ತೋರುವದಿಲ್ಲ. ಇದೊಂದು ಆಚರಣೆಯಿಂದಲೇ ಪಾಂಡವರು ಸಿಥಿಯನ್ನರೆಂದು ಅನ್ನಬೇಕಾದರೆ ಅವರಿಗೆ ತಿಬೇತಿಯರು, ನಾಯರರು, ಸಿಂಯಾಲಿಯರು, ಎಂದೂ ಅನ್ನಬಹುದು; ಯಾಕಂದರೆ ಮೇಲ್ಕಂಡ ಜನಾಂಗಗಳಲ್ಲಿ ಬಹುಪತಿತ್ವವು ವಾಡಿಕೆಯಲ್ಲಿತ್ತು. ಇನ್ನೂ ಕೆಲವರಲ್ಲಿದೆ. ಪಾಂಡವರ ಮನೆತನದಲ್ಲಿ ಇದನ್ನು ಸಮರ್ಥಿಸುವಂಥ ಮತ್ತಾವ ಉದಾಹರಣೆಗಳೂ ದೊರೆಯುವದಿಲ್ಲ. ಇದು ಬೌದ್ಧರ ಕೀಟಲೆಯೇ ಸರಿ. ಅಂದಮೇಲೆ ಇದರಿಂದ ಹೊರಡುವ ಸಿದ್ಧಾಂತವೇನು? ದ್ರೌಪದಿಯನ್ನು ಗೆದ್ದುಕೊಂಡು ಬಂದಮೇಲೆ ಮುಂದೇನು ಮಾಡಬೇಕೆಂದು ಧರ್ಮರಾಯನನ್ನು ಕೇಳಲು ಧರ್ಮರಾಯನು "ಅರ್ಜುನನು ದ್ರೌಪದಿಯನ್ನು ಗೆದ್ದವನು, ಆದ್ದರಿಂದ ವಿಧಿಪೂರ್ವಕವಾಗಿ ಅವಳನ್ನು ಆತನೇ ಮದುವೆಯಾಗತಕ್ಕದ್ದು." ಎಂದನು. ಅರ್ಜುನನು ಸಮ್ಮತಿಸಲಿಲ್ಲ. "ಧರ್ಮರಾಯನು ಹಿರಿಯನು. ಹಿರಿಯರ ಲಗ್ನವಾದ ಮೇಲೆ ಕಿರಿಯರದಾಗಬೇಕು. ಹೀಗೆ ವಿವಾಹವಾಗುವದು ಶಾಸ್ತ್ರಸಮ್ಮತವು; ಆದಕಾರಣ ಧರ್ಮನೇ ದ್ರೌಪದಿಯನ್ನು ವರಿಸತಕ್ಕದ್ದು" ಎಂದು ನುಡಿದನು. ಆಗ ಕುಂತಿಯ ಅಪ್ಪಣೆಯಂತೆ ಧರ್ಮನು ದ್ರೌಪದಿಯನ್ನು ಅಂಗೀಕರಿಸಲು ನಿಶ್ಚಯಿಸಿದನು. ಮೇಲ್ಕಂಡ ಕುಂತೀ ಧರ್ಮಾರ್ಜುನರ ಸಂವಾದಗಳು ಯಾವ ಮಹಾಭಾರತದಲ್ಲಿ ಹಿಂದಿನಿಂದ ಸೇರಿಸಲ್ಪಟ್ಟವೋ ಅದೇ ಮಹಾಭಾರತದಲ್ಲಿ ಇದು ಸ್ಪಷ್ಟವಾಗಿದೆ. ಇಷ್ಟು ಸಂವಾದವನ್ನು ಕೊಟ್ಟು ಮುಂದೆ ದ್ರೌಪದಿಯ ರೂಪಲಾವಣ್ಯವನ್ನು ಚನ್ನಾಗಿ ಮನಮುಟ್ಟಿ ನೋಡಿದ ಮೇಲೆ ಎಲ್ಲರಿಗೂ ಕಾಮಬಾಧೆಯು ಉಂಟಾಯಿತಂತೆ! ಆಗ ತಮ್ಮ ತಮ್ಮೊಳಗೆ ಬಡಿದಾಟ ಹುಟ್ಟಬಹುದೆಂಬ ಭೀತಿಯಿಂದ ಎಲ್ಲರೂ ದ್ರೌಪದಿಯನ್ನು ವಿವಾಹವಾಗುವದಾಗಿ ನಿಶ್ಚಯಿಸಿದರಂತೆ. ಇಂತಹ ಕಲ್ಪನೆಗಳು ಮಹಾಭಾರತದಲ್ಲಿ ಸೇರಿದ್ದಾದರೂ ಹೇಗೆ? ಇದಕ್ಕೆರಡು ಕಾರಣಗಳಿರಬಹುದು. (೧) ಸದ್ಯದ ಮಹಾಭಾರತವು ಬೌದ್ಧಮತವು ಪ್ರಾರಂಭವಾದ ಮೇಲೆ ತಿದ್ದುಪಡಿಯಾಗಿರಬಹುದು. ಕೆಲಪಂಡಿತರು ಈ ಕಾಲವು ಕ್ರಿಸ್ತೀಶಕದ ಪೂರ್ವದಲ್ಲಿ ೪ ನೇ ಶತಮಾನವೆಂದು ನಿರ್ಧರಿಸಿದ್ದಾರೆ. ಈ ಕಾಲಕ್ಕೆ

ಬೌದ್ಧ ಮತಾನುಯಾಯಿಗಳು ವೈದಿಕ ಧರ್ಮಾನುಯಾಯಿಗಳಿಗೆ ಕಲಂಕ ವನ್ನು ಹಚ್ಚುವ ಈ ಕಥೆಗಳನ್ನು ಸೇರಿಸಿರಬಹುದು. ಅದಕ್ಕೆ ಕಾರಣಗಳು ಎರಡಿರಬಹುದು. (ಅ) ವೈದಿಕ ಧರ್ಮಕ್ಕೆ ಕಂಠಮಣಿಯಂತಿರುವ ಪಾಂಡವರ ಯಶಸ್ಸಿಗೆ ಕುಂದು ಅಂದರೆ ಅದು ವೈದಿಕ ಧರ್ಮಕ್ಕೇ ಎಂದು ಇಂಥವರ ಆಚರಣೆಯನ್ನು ನೋಡಿರಿ ಎಂದು ಹೀಯಾಳಿಸುವದಕ್ಕಾಗಿ ಅಥವಾ (ಬ) ಬೌದ್ಧಕಾಲದಲ್ಲಿ ಬುದ್ಧಜನರ ಸಂಬಂಧವು ತಿಬೇತಿಯರ ಹಾಗೂ ಸಿಂಯಾಲಿಯರ ಕೂಡ ನಿಕಟವಾಗಿತ್ತು; ಈ ಎರಡೂ ಪ್ರದೇಶ ಗಳಲ್ಲಿ ಈ ತರದ ವಿವಾಹ ರೂಢಿಯು ಈಗಲೂ ಕಂಡುಬರುತ್ತದೆ. ಸನಾ ತನ ಧರ್ಮಿಯರಿಗೆ ಈ ರೂಢಿಯು ನಿಂದ್ಯವಾಗಿ ತೋರುತ್ತಿತ್ತು. ಕಾರಣ ತಮ್ಮ ರೂಢಿಗೆ ಪ್ರಾಚೀನ ಮಹಾಪುರುಷರ ಆಚಾರದ ಬೆಂಬಲವನ್ನು ಕೊಟ್ಟು, ಅದರ ಹೀನತೆಯನ್ನು ಹೋಗಲಾಡಿಸುವ ಇಚ್ಛೆಯಿಂದ ಪಾಂಡ ವರಲ್ಲಿಯೂ ಇದೇ ನಡತೆ ಇತ್ತೆಂಬ ಕಥೆಗಳನ್ನು ಬುದ್ಧರು ತಮ್ಮ ಪ್ರಾಬಲ್ಯವಿದ್ದಾಗ ಸಾಧಿಸಿ ಸೇರಿರಬಹುದು. ಇದರಂತೆ ಬೌದ್ಧಕಾಲದಲ್ಲಿ ರಾಮಾಯಣದ ವಿಪರ್ಯಾಸದ ಉದಾಹರಣೆಯುಂಟು. ಗೌತಮ ಬುದ್ಧನು ಜನ್ಮತಾಳಿದ ಶಾಕ್ಯಕುಲವು ಅಣ್ಣತಂಗಿಯರ ವಿವಾಹದಿಂದ ಹುಟ್ಟಿದ ಸೂರ್ಯವಂಶೀ ಕ್ಷತ್ರಿಯರ ಕುಲವು. ಇಂತಹ ವಿವಾಹದ ಗೌಣತ್ವದಿಂದ ತಮ್ಮ ಕುಲಕ್ಕೆ ಬರುವ ಕೀಳುತನವನ್ನು ಹೋಗಲಾಡಿ ಸಲು ಪುಣ್ಯಶ್ಲೋಕನಾದ ಶ್ರೀ ಭಗವಾನ್ ರಾಮಚಂದ್ರನು ಕೂಡ ತನ್ನ ತಂಗಿಯಾದ ಸೀತಾದೇವಿಯನ್ನೇ ಲಗ್ನವಾದನೆಂದು ಬುದ್ಧರು ತಾವು ಬರೆದ ರಾಮಾಯಣದಲ್ಲಿ ತಿದ್ದುಪಾಟು ಮಾಡಿರುವದೆಂತು ? ಯಾವ ಕಾರಣ ದಿಂದಲೋ ಸನಾತನಧರ್ಮಲಲಾಮನಾದ ಶ್ರೀ ರಾಮಚಂದ್ರನ ಸಂಬಂಧ ದಲ್ಲಿ ಈ ಬೌದ್ಧ ಕಥೆಯು ಬಾಳಲಿಲ್ಲ. ಅದರಂತೆಯೇ ದ್ರೌಪದಿಯ ಕಥೆಯು ಆಗಿರಬಾರದೇಕೆ ? ಅಥವಾ ಇನ್ನೊಂದು ಕಾರಣವೆಂದರೆ ಎಷ್ಟೋ ದಿನ ಗಳವರೆಗೆ ಕಾಶ್ಮೀರವು ಸಂಸ್ಕೃತವಿದ್ಯೆಗೆ ತವರ್ಮನೆಯಾಗಿತ್ತು. ಕಾಶ್ಮೀರ ಪಂಡಿತರಿಗೆ ಹಿಂದುಸ್ಥಾನದಲ್ಲಿ ಅಗ್ರಪೂಜೆಯ ಮಾನವಿತ್ತು. ಕಾಶ್ಮೀರ ಪ್ರಾಂತವು ತಿಬೇತ ಪ್ರಾಂತಕ್ಕೆ ಸಮೀಪಿಸಿದ್ದು, ಕಾಶ್ಮೀರ, ಲಡಕ ಮುಂತಾದ ಪ್ರಾಂತಗಳಲ್ಲಿ ಎಲ್ಲ ಅಣ್ಣತಮ್ಮಂದಿರೂ ಒಬ್ಬಳನ್ನೇ ಲಗ್ನ

ವಾಗುವ ನಡೆವಳಿಯು ೧೯ ನೇಯ ಶತಮಾನದಲ್ಲಿ ಕೂಡ ಕಂಡು ಬರುತ್ತಿತ್ತೆಂದು ಪರದೇಶದ ಕೆಲ ಪ್ರವಾಸಿಕರು ಬರೆದಿದ್ದಾರೆ! ತಮ್ಮ ಪ್ರಾಂತಾಚರಣೆಯನ್ನು ಮಹಾಭಾರತದಲ್ಲಿ ಕಾಶ್ಮೀರ ಪಂಡಿತರು ಸೇರಿಸಿರಬಹುದು. ಈ ಪ್ರಕಾರವಾಗಿ ದ್ರೌಪದಿಯ ವಿವಾಹವು ಐದೂಜನ ಪಾಂಡವರಕೂಡ ಆಯಿತೆಂಬ ಕಥೆಯು ಒಮ್ಮೆ ಸೇರಿತೆಂದರೆ ಅದಕ್ಕೆ ಕಾರಣವನ್ನು ತೋರಿಸಲೂ, ಅದರ ಔಚಿತ್ಯ ಹಾಗೂ ಸತ್ಯತೆಯನ್ನು ಸಿದ್ಧಪಡಿಸಲೂ ನಾನಾತರದ ಉಪಕಥೆಗಳು ಹುಟ್ಟುವದು ಸಹಜವಾದದ್ದು. ಇರಲಿ. ಕುಂತಿಯು ಮೂರ್ಖತನದಿಂದ ತನ್ನ ಬಾಯಿಂದ ತಪ್ಪಿಬಂದ ಶಬ್ದಗಳನ್ನು ಆತ್ಮಾಚರಣೆಯಲ್ಲಿ ತರಲು ಈ ವಿವಾಹವನ್ನು ಮಾಡಿಸಿದಳೆಂದು ಕುಂತೀದೇವಿಯ ಸತ್ಕೀರ್ತಿಗೆ ತರುವ ಕಲಂಕವನ್ನು ತೊಳೆಯಲು ಆದ ಈ ವಿಷಯಾಂತರವು ಕ್ಷಮ್ಯವೇ ಸರಿ.

**ಶ್ರೀಕೃಷ್ಣಪಾಂಡವರ ಭೆಟ್ಟಿ:—** ಶ್ರೀಕೃಷ್ಣ ಬಲರಾಮರು ಪ್ರೇಮದಿಂದ ಪಾಂಡವರನ್ನು ಕಂಡು ಸದ್ದಿಲ್ಲದೆ ಹೊರಟು ಹೋದರು; ಪಾಂಡವರು ತಮ್ಮ ನಿತ್ಯಕರ್ಮದಂತೆ ಊಟ ಉಡಿಗೆಗಳನ್ನು ತೀರಿಸಿಕೊಂಡು ಮಲಗಿದರು. ದ್ರುಪದರಾಯನಿಗೆ ಯುದ್ಧದ ಗೊಂದಲ ತೀರುವವರೆಗೆ ಏನೂ ತೋಚಿರಲಿಲ್ಲ. ಆಮೇಲೆ ದ್ರುಪದನು ತನ್ನ ಮಗನನ್ನು ಕರೆದು— "ಪಣವನ್ನೇನೋ ಬ್ರಾಹ್ಮಣರು ಗೆದ್ದು ದ್ರೌಪದಿಯನ್ನು ಕರೆದೊಯ್ದರು; ಆದರೆ ಅವರ ಕುಲಗೋತ್ರವೇನು ? ನನ್ನ ಮಗಳು ಎಂತಹ ಮನೆಗೆ ಬಿದ್ದಳು ? ಎಂಬುದನ್ನೂ ನಾನರಿಯೆ. ನೀನು ಹೋಗಿ ಆ ಮಹಾತ್ಮರು ಯಾರಿರುವರೆಂಬುದನ್ನು ತಿಳಿದುಕೊಂಡು ಬಂದದ್ದಾದರೆ ಅಷ್ಟೇ ಆನಂದವಾಗುವದು." ಎಂದು ಹೇಳಲು, ಧೃಷ್ಟದ್ಯುಮ್ನನು ಗುಪ್ತವಾಗಿ ರಾತ್ರಿ ಹೊರಟು ಸದ್ದಿಲ್ಲದೆ ಕುಂಬಾರನ ಮನೆಗೆ ಬಂದು ಅಲ್ಲಿಯೇ ಮರೆಮಾಜಿ ಪಾಂಡವರ ಮಾತುಗಳನ್ನು ಕೇಳುತ್ತ ಕುಳಿತನು. ಪಾಂಡವರು ಆ ದಿವಸ ಸ್ವಯಂವರದಲ್ಲಿ ನಡೆದ ಸಂಗತಿಯನ್ನೇ ಮಾತಾಡುತಲಿದ್ದರು. ಧೃಷ್ಟದ್ಯುಮ್ನನು ಕೂಡಲೇ ಇವರು ವೀರ ಕ್ಷತ್ರಿಯರೆಂದು ಕಂಡುಹಿಡಿದು ಅದರಂತೆ ತನ್ನ ತಂದೆಗೆ ತಿಳುಹಲು ದ್ರುಪದನು ಮರುದಿವಸ ಕುಂತೀಸಹಿತವಾಗಿ ಅವರೆಲ್ಲರನ್ನೂ ತನ್ನ ಮನೆಗೆ ಕರೆದೊಯ್ದನು. ಅಲ್ಲಿ ಪಾಂಡ

ರು ಪ್ರಕಟರಾದರು. ಧರ್ಮರಾಯನು ದ್ರುಪದನಿಗೆ ಯಾವತ್ತೂ ಸಂಗತಿಯನ್ನು ವಿವರಿಸಿದನು; ಮುಂದೆ ದ್ರೌಪದಿ ಧರ್ಮರಾಯರ ವಿವಾಹವೂ ಯಥಾವಿಧಿ ನೆರವೇರಿತು. ಕುಂತಿಯು ಮಗನಿಗೆ ಅನುರೂಪಳಾದ ಹೆಂಡತಿಯು ದೊರಕಿದಳು. ದ್ರುಪದನಂಥ ಬಲಿಷ್ಠರಾಜನು ಆಪ್ತನಾದನು. ಮೇಲಾಗಿ ಯಾದವರ ಸಹಾಯ; ಅಂದಮೇಲೆ ಕೌರವರನ್ನು ಹಣ್ಣಿಗೆ ತಂದು ತಮ್ಮ ರಾಜ್ಯವನ್ನು ಮರಳಿ ದೊರಕಿಸುವದೇನೂ ಕಷ್ಟವಲ್ಲೆಂದು ಆ ವೀರಮಾತೆಯು ಹಿಗ್ಗಿದಳು. ಅಂದು ಅವಳ ಕಣ್ಣುಗಳಿಗೆ ಹಬ್ಬ. ಲಗ್ನಕ್ಕೆ ವ್ಯಾಸ ಮೊದಲಾದ ಮಹಾಮುನಿಗಳೂ ಬಂದಿದ್ದರು. ಕೌರವರಿಗೆ ಮಾತ್ರ ಇನ್ನೂ ಗೊತ್ತಿರಲಿಲ್ಲ. ವಿವಾಹ ಸಮಾರಂಭವು ತೀರಿದಮೇಲೆ ನಿತ್ಯನಿಯಮಕ್ಕನುಸರಿಸಿ ದ್ರೌಪದಿಯು ಕುಂತಿಯ ಪಾದವನ್ನು ಮುಟ್ಟಿ ನಮಸ್ಕರಿಸಿದಳು. ಕುಂತಿಯು ಅವಳನ್ನು ಮೈದಡವಿ, ತಂಗೀ ? ನೀನು ಮಹಾ ವೀರರೂ ಚಿರಾಯುಷಿಗಳೂ ಆದ ಪುತ್ರರನ್ನು ಪಡೆ. ಎಲ್ಲ ತರದ ಭೋಗೈಶ್ವರ್ಯ ಸಂಪನ್ನಳಾಗು. ಗುರು–ಹಿರಿಯರನ್ನೂ ಮುಮುಕರನ್ನೂ ಸೇವಿಸು. ಮಹಾಪತಿವ್ರತೆಯೆಂದು ನಿನ್ನ ಕೀರ್ತಿಯು ಹಬ್ಬಲಿ ಎಂದು ಹರಸಿದಳು. ಕುಂತೀದೇವಿಯು ಅಲ್ಪ ಸಂತುಷ್ಟೆಯಲ್ಲ. ಸಾಧಾರಣವಾಗಿ ಅಷ್ಟಪುತ್ರ ಸೌಭಾಗ್ಯವತಿಯಾಗು ಎಂದು ಹರಸುವ ವಾಡಿಕೆಯುಂಟು. ಆದರೆ ಗುಣವಿಲ್ಲದ ಎಷ್ಟು ಜನ ಮಕ್ಕಳಿದ್ದರೂ ತೆಗೆದುಕೊಂಡು ಮಾಡುವದೇನು ? ಆದ್ದರಿಂದ "ಗುಣವಂತ ಪುತ್ರನನ್ನು ಪಡೆ" ಎಂದಳು. ಸಂಪತ್ತಾಯಿತು, ರಾಜ್ಯವಾಯಿತು, ಮಕ್ಕಳಾಯಿತು; ಆದರೆ ಪರೋಪಕಾರವಿಲ್ಲದಿದ್ದರೆ ಅದರಿಂದೇನು ಲಾಭವು ? ಅದಕ್ಕಾಗಿ "ಮುದುಕತದಕರ ಬಡಬಗ್ಗರ ಆರೈಕೆಯಲ್ಲಿ ಹೊತ್ತುಗಳೆ" ಎಂದು ಹರಸಿದಳು. ಕುಂತೀದೇವಿಯ ಹರಕೆಯು ಉಚ್ಚತರವಾದುದು. ಆಕೆಗೆ ಸಾಧನ ಸಂಪತ್ತೆಲ್ಲವೂ ಬೇಕು. ಆದರೆ ಸ್ವಾರ್ಥಸುಖಕ್ಕಾಗಿ ಅಲ್ಲ. ಜನತಾಜನಾರ್ದನನ ಸೇವೆಗೆ. ಇದೇ ಭೋಗದಲ್ಲಿ ತ್ಯಾಗ. ತನ್ನ ಮಕ್ಕಳ ಕೀರ್ತಿಯು ದಿಗಂತ ಹಬ್ಬಲುಬೇಕು. ಅವರು ಏಕಚಕ್ರಪತಿಗಳಾಗಬೇಕು. ಸಾರ್ವಭೌಮಪದಕ್ಕೆ ಯೋಗ್ಯವಾದ ಅಶ್ವಮೇಧಾದಿಗಳನ್ನು ಮಾಡಬೇಕು. ಧರ್ಮವತ್ಸಲರಾಗಬೇಕು. ಎಂಬುವ ಉನ್ನತವಾದ ಆಕಾಂಕ್ಷೆಯುಳ್ಳವಳು ! ಎಂತಹ ಸ್ಪೃಹಣೀಯ

ಮಹತ್ವಾಕಾಂಕ್ಷೆ ಇದು! ಇಂತಹ ಮಾತೆಯ ಮುಂದೆ ನಿವೃತ್ತಿಮಾರ್ಗಿಯಾದ ಧರ್ಮನುಕೂಡ ಸಹಜವಾಗಿ ಕರ್ತವ್ಯಪರಾಯಣನಾದುದರಲ್ಲೇನಾಶ್ಚರ್ಯ? ಅವನೂ ತನ್ನ ಕ್ಷಾತ್ರತೇಜವನ್ನು ತೋರಿಸಿದನು. ಕಳೆದುಕೊಂಡ ರಾಜ್ಯವನ್ನು ಮತ್ತೆ ಮರಳಿ ದೊರಕಿಸಿದನು. ಇಂತಹ ತಾಯಂದಿರಿರಬೇಕು ಇದ್ದರೆ!

**ಪಾಂಡವರು ದ್ರೌಪದಿಯೊಡನೆ ಹಸ್ತಿನಾವತಿಗೆ ಮರಳುವದು**:—ದ್ರೌಪದಿಯ ವಿವಾಹದನಂತರ ಪಾಂಡವರು ತಮ್ಮ ತಾಯಿಯೊಂದಿಗೆ ಪಾಂಚಾಲನಗರದಲ್ಲಿಯೇ ಕೆಲಕಾಲ ಇದ್ದರು. ದ್ರೌಪದಿ–ಧರ್ಮರಾಯರ ವಿವಾಹ, ಶ್ರೀಕೃಷ್ಣನೂ ಬಲರಾಮನೂ ಪಾಂಡವರಿಗೆ ಕಳುಹಿದ ಉಡುಗರೆ ಅವೇ ಮುಂತಾದವುಗಳ ಸುದ್ದಿಯು ದುರ್ಯೋಧನಾದಿಗಳಿಗೆ ತಿಳಿಯಿತು. ಆಗ ತಮ್ಮ ಕುಯುಕ್ತಿ ನಿಷ್ಫಲವಾಯಿತು. ಅರಗಿನಮನೆಯ ವೆಚ್ಚವು ಪುಕ್ಕಟೆಯಾಯಿತು; ಎಂದು ಅವರಿಗೆ ಬಹು ಸಂತಾಪವಾಯಿತು. ಇಷ್ಟಾದರೂ ಮತ್ತೆ ಏನಾದರೂ ಉಪಾಯವನ್ನು ನಡಿಸಬೇಕೆಂದು ಅವರು ಯೋಚಿಸಹತ್ತಿದರು. ಹೊತ್ತುಕಳೆದರೆ ಪಾಂಡವರಿಗೆ ಹೊಸ ಸಹಾಯವು ಸಿಕ್ಕಬಹುದು. ಸದ್ಯಕ್ಕೆ ಪಾಂಡವರು ಪಾಂಚಾಲನಗರದಲ್ಲಿದ್ದಾರೆ. ಬಹಳವಾದರೆ ದ್ರುಪದನ ಸಹಾಯವು ಮಾತ್ರ ದೊರೆಯಬಹುದು. ತಡವಾದಲ್ಲಿ ಯಾದವರೂ ಮಾದ್ರರೂ ಪಾಂಡವರನ್ನು ಕೂಡಿ ಪಾಂಡವರ ಪಕ್ಷವು ಹೆಚ್ಚು ಬಲಿಷ್ಠವಾಗಬಹುದು. ಆದುದರಿಂದ ಈಗಲೇ ಅವರ ಸಂಹಾರಮಾಡಬೇಕೆಂದು ದುರ್ಯೋಧನಾದಿಗಳು ಪಾಂಚಾಲನಗರದಮೇಲೆ ದಂಡೆತ್ತಿ ಹೋದರು. ಆದರೆ ಸೋತು ಮಾನ ಉಳಿಸಿಕೊಂಡು ಬರಬೇಕಾದರೆ ನಾಕು ಬೇಕಾಯಿತು. ಈಗ ಧೃತರಾಷ್ಟ್ರನಿಗೂ ತನ್ನ ಮೂರ್ಖತನವು ತಿಳಿದು ಬಂದು ಇಷ್ಟುದಿನ ತಾನು ಕೈಕೊಂಡಮಾರ್ಗವು ಸರ್ವನಾಶದ್ದೆಂದು ಮನವರಿಕೆಯಾಯಿತು. ಪಾಂಡವರು ದ್ರುಪದನ ಬೀಗತನದಿಂದಲೂ ಯಾದವರ ಸಹಾಯದಿಂದಲೂ ಬಲಿಷ್ಠರಾದರೆಂದು ತಿಳಿದನು. ಸಂಧಿಯನ್ನು ಮಾಡಿಕೊಳ್ಳುವದೇ ಉತ್ತಮ ಮಾರ್ಗವೆಂದು ವಿದುರನನ್ನು ಕೊಟ್ಟು ಕುಂತೀ ಪಾಂಡವರನ್ನು ಕರೆತರಲು ಕಳುಹಿದನು. ವಿದುರನು ಆನಂದದಿಂದ ಹೊರಟನು. ಪಾಂಚಾಲನಗರಿಗೆ ಬಂದು ಎಲ್ಲ ವೃತ್ತಾಂತವನ್ನು ಹೇಳಿದನು.

ಈಗ ಪಾಂಡವರು ಸಮರ್ಥರಾಗಿದ್ದರು. ಹಾವಿನ ಹುತ್ತದಲ್ಲಿಯೇ ಕೈಹಾಕಿ ಘಟಸರ್ಪವನ್ನು ಕೆಣಕಿ ಹಿಡಿದೆಳೆದು ಹಲ್ಲು ಮುರಿಯುವ ಹಾವುಗಾರನ ಮಂತ್ರಬಲವು ಅವರಲ್ಲಿ ಉಂಟಾಗಿತ್ತು. ಅಂದಮೇಲೆ ಇನ್ನೇತರ ಹೆದರಿಕೆ? ಈಗ ಕುಂತಿಯು ಮಕ್ಕಳ ಚಿಂತೆಯನ್ನು ಮಾಡುವ ದಿವಸಗಳಿರಲಿಲ್ಲ. ಮಕ್ಕಳು ಕುಂತಿಯ ಸೇವೆಗೈಯುವ ದಿವಸಗಳು ಬಂದವು. ಪಾಂಡವರು ಪ್ರಬುದ್ಧರಾಗಿದ್ದರು. ಧೃತರಾಷ್ಟ್ರನೂ ಇದನ್ನು ಚನ್ನಾಗಿ ಬಲ್ಲವನಾಗಿದ್ದನು. ಆದುದರಿಂದಲೇ ಉಪಚಾರದ ಮಾತುಗಳು ಪ್ರಾರಂಭವಾದವು.

ಪಾಂಡವರ ಆಗಮನದಿಂದ ಹಸ್ತಿನಾವತಿಯ ಜನರು, ಚಂದ್ರ ದರ್ಶನದಿಂದ ಸಮುದ್ರವು ಪರವಶವಾಗಿ ಉಕ್ಕುವಂತೆ, ಆನಂದ ದಿಂದ ಉಕ್ಕಿದರು. ಲೋಕಮಾನ್ಯರ ಪುಣ್ಯ ದರ್ಶನದಿಂದ ಲೋಕ ಸಮುದ್ರದಲ್ಲಿ ಆನಂದಲಹರಿಗಳು ಸಹಜವಾಗಿ ಉಂಟಾಗುವಂತೆ, ಅದ ರಲ್ಲಿ ಪಾಪಾತ್ಮರು ಪದವಿ, ಹಣ, ಹೊನ್ನು ಮುಂತಾದ್ದನ್ನು ಸುರಿಸಿದರೂ ಆನಂದಲಹರಿಗಳು ಏಳಬಹುದೇ? ಸಹಜಜನ್ಯ ಆನಂದಲಹರಿಯ ಮಾತೇ ಬೇರೆ; ಅದಕ್ಕೆ ಕೃತ್ರಿಮ ಆನಂದವು ಪಾಸಟಿಯೇ?

**ಪಾಂಡವರು ಇಂದ್ರಪ್ರಸ್ಥ ರಾಜಧಾನಿಯನ್ನು ಕಟ್ಟಿದ್ದು:—** ಹಸ್ತಿನಾವತಿಯಲ್ಲಿ ಪಾಂಡವರು ತಮ್ಮ ತಾಯಿಯೊಂದಿಗೆ ಬೇರೆ ಅರಮನೆ ಯಲ್ಲಿದ್ದರು. ಪಾಂಡವರನ್ನು ಗಡಿಪಾರು ಮಾಡುವದರ ಮೊದಲೇ ಧೃತ ರಾಷ್ಟ್ರನು ಧರ್ಮರಾಯನಿಗೆ ಯೌವರಾಜ್ಯಾಭಿಷೇಕವನ್ನು ಮಾಡಿಸಿದ್ದ ನಷ್ಟೇ! ಆದರೆ ಮುಂದೆ ದುರ್ಯೋಧನನ ಪ್ರಾಬಲ್ಯವು ಬೆಳೆದು ಪಾಂಡ ವರ ಗಡಿಪಾರಿಗೆ ಕಾರಣವಾಯಿತು. ಇರಲಿ. ಈಗ ಧೃತರಾಷ್ಟ್ರನು ಕೊಟ್ಟ ಅರ್ಧರಾಜ್ಯವನ್ನು ತೆಗೆದುಕೊಳ್ಳಲು ಧರ್ಮನು ಒಪ್ಪಿದನು. ಧರ್ಮಾತ್ಮರ ಸೌಮ್ಯತನವೇ ಒಮ್ಮೊಮ್ಮೆ ದುಷ್ಟರ ದುರುಳತನದ ಬೆಳವಣಿಗೆಗೆ ಹೆಚ್ಚು ಕಾರಣವಾಗುತ್ತದೆ. ಹಾಲು ಸಾತ್ವಿಕ ಆಹಾರವೇನೋ ಸರಿ! ಅದು ಸಾತ್ವಿಕ ವೃತ್ತಿಯ ಮನುಷ್ಯನ ಅನ್ನವಾದರೆ ಸಾತ್ವಿಕ ವೃತ್ತಿಯನ್ನೂ, ಹಾವಿನ ಹೊಟ್ಟೆಯಲ್ಲಿ ಇಳಿದರೆ ಪ್ರಾಣಹಾರಕ ವಿಷವನ್ನೂ ಬೆಳೆಸುತ್ತದೆ. ಔಚಿತ್ಯ ವನ್ನರಿಯದ ತಾಳ್ಮೆಯ ಹಾಡಾದರೂ ಹೀಗೆಯೇ! ಆ ಕುರುಡ ಲೋಭಿಯು ಉತ್ತಮವಾದ ರಾಜ್ಯವನ್ನೆಲ್ಲ ತನ್ನ ಮಗನಿಗಾಗಿ ಇಟ್ಟುಕೊಂಡು ಪ್ರಸಿದ್ಧ

ಖಾಂಡವದ ಕಟ್ಟಡವಿಯನ್ನು ಧರ್ಮರಾಯನಿಗೆ ಬಿಟ್ಟನು. ಅಲ್ಲದೆ ತನ್ನ ಬಾಹುಬಲದಿಂದ ಧರ್ಮರಾಯನು ಕಾಡುಜನರನ್ನು ಗೆದ್ದು ಅಡವಿಯನ್ನು ಸಾಗುವಳಿ ಬೇಕಾದರೆ ರಾಜ್ಯವನ್ನು ಬೆಳಿಸಬಹುದೆಂದು ಅವನಿಗೆ ಆಶೀರ್ವಾದವಿತ್ತನು. ಧರ್ಮರಾಯನೇನೋ ಸಮ್ಮತಿಸಿದನು. ಕುಂತೀದೇವಿಗೆ ಈ ಮಾತು ಎಷ್ಟರಮಟ್ಟಿಗೆ ಇಷ್ಟವಿದ್ದಿತೆಂಬುದನ್ನು ಹೇಳಲಾಗುವದಿಲ್ಲ. ಈಶ ಚಿಂತನೆ, ಪರೋಪಕಾರ, ಧರ್ಮವಾತ್ಸಲ್ಯ ಮುಂತಾದ ಸಾತ್ವಿಕ ಸದ್ಗುಣಗಳೇ ಪಾಂಡವರಲ್ಲೀಗ ಪೆಗ್ಗಳಿಸಿದ್ದವು. ಪರಿಸ್ಥಿತಿಯ ಪ್ರಭಾವವು ಅಗಾಧವಾದದ್ದು. 'ತಾನು ಬಾಳುವದು, ಪರರಿಗೆ ಬಾಳಗೊಡುವದು' ಎಂಬೀ ತತ್ವವು ಧರ್ಮರಾಯನ ಚರಿತ್ರೆಯಲ್ಲಿ ನಾಕಷ್ಟು ಕಂಡು ಬರುತ್ತದೆ. ಸಂಸಾರಕ್ಕಾಗಿ ೫ ಹಳ್ಳಿಗಳನ್ನು ಕೊಟ್ಟು ಉಳಿದ ರಾಜ್ಯವನ್ನು ನೀನೇ ಭೋಗಿಸಿ ಬಾಳೆಂದು ಧರ್ಮರಾಯನು ಯುದ್ಧಪೂರ್ವದಲ್ಲಿ ಧೃತರಾಷ್ಟ್ರನನ್ನು ಬೇಡಿದ್ದು ಏನನ್ನು ತೋರಿಸುತ್ತದೆ ? ನಿರ್ವಾಹವಿಲ್ಲದೆ ಧರ್ಮರಾಯನು ಕೊನೆಯಲ್ಲಿ ಶಸ್ತ್ರವನ್ನೆತ್ತಲು ಸಮ್ಮತಿಸಿದನು. ಇರಲಿ. ತಂದೆಯು ಮರಣದನಂತರ ಸುಮಾರು ೧೫-೨೦ ವರುಷಗಳ ವರೆಗೆ ಮೀರಿದ ಕಷ್ಟಪಟ್ಟು ಪಾಂಡವರು ಮತ್ತೆ ರಾಜ್ಯವನ್ನು ದೊರಕಿಸಿದರು. ಕುಂತೀದೇವಿಗೆ ತನ್ನ ಮಗನು ಮೂರ್ಧಾಭಿಷಿಕ್ತ ರಾಜನಾದದ್ದನ್ನು ನೋಡುವ ಸುಯೋಗವು ಒದಗಿತು. ಪಾಂಡವರು ತಮ್ಮಪಾಲಿಗೆ ಬಂದ ಅಡವಿಯನ್ನೇ ಕಡಿದು ಸುಟ್ಟು ಸಾಗುವಳಿ ಮಾಡಿದರು. ಒಂದು ಉತ್ತಮ ಸ್ಥಳವನ್ನು ನೋಡಿ ಸುಮುಹೂರ್ತದಲ್ಲಿ ಅಲ್ಲಿಯೊಂದು ಪಟ್ಟಣವನ್ನು ಕಟ್ಟಲು ಶಾಸ್ತ್ರೋಕ್ತವಾಗಿ ಮೂಲೆಗಲ್ಲನ್ನಿಟ್ಟರು. ಕೆಲದಿವಸಗಳಲ್ಲಿಯೇ ಉತ್ತಮ ಶಿಲ್ಪಿಗರಿಂದ ಹೊಸ ನಗರ ನಿರ್ಮಾಣವಾಯಿತು. ದೊಡ್ಡ ದೊಡ್ಡ ಮೇಲುಪ್ಪರಿಗೆಗಳೂ, ಭವ್ಯರಾಜಬೀದಿಗಳೂ, ಪಗಡೀಕಟ್ಟಿನ ಪೇಟೆಗಳೂ ಆ ನಗರದಲ್ಲಿ ಮನಸ್ಸನ್ನಾಕರ್ಷಿಸಹತ್ತಿದವು. ಧರ್ಮರಾಯನ ಉದಾರತನವನ್ನೂ ವಿದ್ಯಾಭಿಲಾಷೆಯನ್ನೂ ಕೇಳಿ ಎಲ್ಲ ದೇಶದ ಮಹಾನ್ ಮಹಾನ್ ಪಂಡಿತರು ಆ ರಾಜನ ಆಶ್ರಯಕ್ಕಾಗಿ ಬಂದಿದ್ದರು. ರಾಯನು ವಿದ್ಯೆ ಧರ್ಮಗಳಲ್ಲಿ ಅಭಿಮಾನಿಯಿರುವದರಿಂದ ಆಯಾ ಜನರಿಗೆ ಯೋಗ್ಯ ಮನ್ನಣೆ ಆಗುತ್ತಿದ್ದಿತು. ಬಡಬಗ್ಗರಿಗಾಗಿ ಅಲ್ಲಲ್ಲಿಗೆ ಅನ್ನಛತ್ರಗಳೂ, ಅರವಟ್ಟಿಗೆಗಳೂ, ಪಾಂತಸ

ಮುಂತಾದವರಿಗೆ ಧರ್ಮಶಾಲೆಗಳೂ, ಯಜ್ಞಮಂಟಪಗಳೂ ಅಲ್ಲಲ್ಲಿ ಕಂಗೊಳಿಸುತ್ತಿದ್ದವು. ಇಂತಹ ರಾಜಧಾನಿಯಲ್ಲಿ ರಾಜಮಾತೆಯಾದ ಕುಂತೀದೇವಿಯು, ತನ್ನ ಮಕ್ಕಳು ಸೊಸೆಯರೊಂದಿಗೆ ಆನಂದದಿಂದ ಪ್ರವೇಶ ಮಾಡಿದಳು.

**ಕುಂತಿಯ ದಿನಚರ್ಯೆ**:— ಈ ಇಂದ್ರಪ್ರಸ್ಥದಲ್ಲಿಯ ೨೦–೨೫ ವರುಷಗಳು ಕುಂತೀದೇವಿಯ ಆಯುಷ್ಯದಲ್ಲಿ ಪರಮಾವಧಿಯ ಆನಂದದ ದಿವಸಗಳಾಗಿದ್ದವೆಂದು ಹೇಳಬಹುದು. ಕುಂತೀದೇವಿಯ ವಿಷಯಕ್ಕೆ ಒಂದು ಚಿಕ್ಕ ಕಥೆಯಿರುವದು. ಅದು ಇದೇ ಪ್ರಸಂಗದಲ್ಲಿ ಒದಗಿರಬಹುದು. ಪಾಂಡವರು ನಗರ ಪ್ರವೇಶಮಾಡುವ ಸಮಾರಂಭಕ್ಕೆ ಶ್ರೀಕೃಷ್ಣ ಮುಖ್ಯರಾದ ಯಾದವರೂ ಬಂದಿದ್ದರು. ಎಲ್ಲ ಸಮಾರಂಭವು ತೀರಿದ ಮೇಲೆ ಶ್ರೀಕೃಷ್ಣನು ತನ್ನ ಅತ್ತೆಯಾದ ಕುಂತೀದೇವಿಯನ್ನು "ಅಮ್ಮಾ ನೀನು ಅಪೇಕ್ಷಿಸುವದೇನು ? ಎಂದು ಕೇಳಲು ಕುಂತಿಯು "ಕೃಷ್ಣಾ, ಏನೂ ಇಲ್ಲ. ಜಗದೀಶನ ಧ್ಯಾನವೊಂದನ್ನೇ ಸರಿ. ವೈಭವದ ದಿವಸಗಳಲ್ಲಿ ಜಗನ್ನಿಯಾಮಕನ ವಿಸ್ಮರಣೆಯಾದೀತೆಂಬ ಭೀತಿಯು ಹುಟ್ಟಿ ಒಮ್ಮೊಮ್ಮೆ ಅನುಗಾಲ ಕಷ್ಟವೇ ಇದ್ದರೆ ಭಕ್ತಪರಾಯಣ ಭಗವಂತನ ಮರವು ಎಂದಿಗೂ ಆಗದೆಂದು ಅನಿಸುತ್ತದೆ. ಆದುದರಿಂದ ಆನಂದಕ್ಕಿಂತ ಕಷ್ಟವೇ ಈಶ ಚಿಂತನೆಗೆ ಒಳ್ಳೆಯ ಸಾಧನ ಸಂಪತ್ತಲ್ಲವೇ ? " ಎಂದಳು. ಈ ಕಥೆಯು ಬಲು ಮಾರ್ಮಿಕವಾಗಿದೆ. ಇದರ ಮೇಲಿಂದ ಕುಂತಿಯು ತನ್ನ ಕಷ್ಟಕಾಲದಲ್ಲಿ ಈಶ ಚಿಂತನೆಯಲ್ಲಿ ಹೇಗೆ ಕಾಲಕಳೆಯುತ್ತಿದ್ದಳೆಂಬದು ಕಂಡು ಬರುವಂತಿದೆ. ಅದರಂತೆಯೇ ಸುಖಸಾಮ್ರಾಜ್ಯ ವೈಭವ ಶಿಖರದ ಮೇಲಿದ್ದ ಕುಂತೀದೇವಿಯು ಪರವೈಭವವನ್ನು ಸಾಧಿಸುವ ಸಾಧನಗಳನ್ನು ಕುರಿತು ಚಿಂತಿಸುತ್ತಿದ್ದಳೇ ಹೊರತು ಅವಳ ಮನಸ್ಸು ಐಹಿಕ ಸುಖಸಾಧನ ಸಂಪತ್ತುಗಳ ಲೋಲುಪ್ತಿಯಲ್ಲಿ ಮಗ್ನವಾಗಿರಲಿಲ್ಲ. ಎಲ್ಲ ಸಾಧನಸಂಪತ್ತುಗಳು ಬೇಕು. ಆದರೆ ವಿಷಯಭೋಗಕ್ಕಾಗಿ ಅಲ್ಲ- ಪರಮಾರ್ಥಕ್ಕಾಗಿ, ಲೋಕಸಂಗ್ರಹಕ್ಕಾಗಿ. ಭಗವಂತನ ಸೇವೆಗಾಗಿ. ಇಂದ್ರಪ್ರಸ್ಥದಲ್ಲಿ ಕುಂತೀದೇವಿಯು ಈಶಚಿಂತನೆಯಲ್ಲಿಯೂ, ಪರೋಪಕಾರದಲ್ಲಿಯೂ ಕಾಲಕಳೆಯುತ್ತಿರುವ ಸುಮಾರಕ್ಕೆ ಅರ್ಜುನನು ದೇಶ

ಪರ್ಯಟನಕ್ಕೆಂದು ಹೊರಟಾಗ ದ್ವಾರಕಾವತಿಗೆ ಬಂದು ಕೃಷ್ಣನ ಅನುಮತಿಯಿಂದ ಸುಭದ್ರಾದೇವಿಯನ್ನು ಲಗ್ನವಾದನು. ನಕುಲ ಸಹದೇವ ಭೀಮರ ಲಗ್ನವಾದರೂ ಇದೇ ಸಮಯಕ್ಕೆ ಆಗಿರಬಹುದು. ನಕುಲನಿಗೆ ಕರ್ೇಣುವತಿಯೆಂಬ ಚೇದಿದೇಶದ ರಾಜಪುತ್ರಿಯು ಹೆಂಡತಿಯಾಗಿದ್ದಳು. ಸಹದೇವನಿಗೆ ಜರಾಸಂಧನ ಮಗಳೂ, ಭೀಮನಿಗೆ ಯಾವಾಗಲೂ ಶ್ರೀಕೃಷ್ಣನನ್ನು ಯುದ್ಧಕ್ಕೆ ಕರೆಯುತ್ತಿರುವ ಆಗಣಿತ ಸೈನ್ಯದ ಅಧಿಪತಿಯಾದ ಮಹಾರಾಜನ ತಂಗಿಯೂ ಪತ್ನಿಯಾಗಿದ್ದಳು. ಧರ್ಮರಾಯನ ಮಗನು ಪ್ರತಿವಿಂಧ್ಯನು. ಭೀಮನ ಮಗನು ಸುತಸೋಮನು. ಅರ್ಜುನನಿಗೆ ಶ್ರುತಕರ್ಮನ್ ಹಾಗೂ ಅಭಿಮನ್ಯು ಎಂಬ ಇಬ್ಬರು ಮಕ್ಕಳು. ನಕುಲನ ಮಗನ ಹೆಸರು ಶತಾನೀಕನು. ಸಹದೇವನ ಮಗನು ಶ್ರುತಸೇನನು. ದ್ರೌಪದಿಗೆ ಐದುಮಂದಿ ಗಂಡಂದಿರೆಂದೂ ಅವಳಲ್ಲಿ ಒಬ್ಬೊಬ್ಬ ಗಂಡನಿಂದ ಒಬ್ಬೊಬ್ಬ ಮಗನು ಹುಟ್ಟಿದನೆಂದೂ ಈಪ್ರಕಾರ ಒಟ್ಟಿಗೆ ದ್ರೌಪದಿಗೆ ಐದು ಜನ ಮಕ್ಕಳೆಂದೂ ಹೇಳುವದುಂಟು. ಆದರೆ ದ್ರೌಪದಿಯು ಧರ್ಮರಾಯನ ಧರ್ಮಪತ್ನಿಯು. ಉಳಿದವರಕೂಡ ಅವಳ ಸಂಬಂಧವಿರಲಿಲ್ಲ. ಧರ್ಮರಾಯನಿಂದ ಅವಳಿಗೆ ಪ್ರತಿವಿಂಧ್ಯನೆಂಬ ಒಬ್ಬ ಮಗನಿರಬಹುದು. ಉಳಿದ ಪಾಂಡವರ ಮಕ್ಕಳು ಅವರವರಿಗೆ ತಮ್ಮತಮ್ಮ ಹೆಂಡಂದಿರಿಂದಾಗಿರಬಹುದು. ಎಂಬುದಾಗಿ ನಾವು ಅಭಿಪ್ರಾಯಪಡುತ್ತೇವೆ. ಅರ್ಜುನನಿಗೆ ಬಭ್ರುವಾಹನನೆಂಬ ಮತ್ತೊಬ್ಬ ಮಗನಿದ್ದನು. ಆದರೆ ಅವನು ಮಣಿಪುರವೆಂಬ ತನ್ನ ತಾಯಿತವರ್ಮನೆಯ ರಾಜಧಾನಿಯಲ್ಲಿಯೇ ಇರುತ್ತಿದ್ದನು. ಹೀಗೆ ಕುಂತಿಯು ಮಕ್ಕಳು–ಮೊಮ್ಮಕ್ಕಳು, ಸಾಮ್ರಾಜ್ಯ–ಸೌಖ್ಯದಲ್ಲಿ ಈಗ ಓಲಾಡುತ್ತಿದ್ದಳು. ದಿನಾಲು ಮುಂಜಾನೆ ಪ್ರಾತರ್ವಿಧಿ, ತರುವಾಯ ಮೈತೊಳೆದುಕೊಂಡು ನಿತ್ಯನೈಮಿತ್ತಿಕ ಅನ್ಹಿಕಗಳನ್ನು ತೀರಿಸಿಕೊಳ್ಳುವದು; ಆಮೇಲೆ ಬಡಬಗ್ಗರಿಗೆ ಹಾಗೂ ಯೋಗ್ಯರಾದವರಿಗೆ ಏನಾದರೂ ದಾನಧರ್ಮವನ್ನು ಮಾಡುವದು; ಅತಿಥಿಶಾಲೆಯಲ್ಲಿ ಹೋಗಿ ಅತಿಥಿಗಳ ಆದರ ಸತ್ಕಾರ ಮಾಡುವದು. ಯಜ್ಞಶಾಲೆಯಲ್ಲಿಯ ವ್ಯವಸ್ಥೆಯನ್ನು ನೋಡುವದು; ಏನಾದರೂ ಪುಣ್ಯಕಥೆ ಪುರಾಣಗಳ ಶ್ರವಣ ಮಾಡುವದು. ಆ ಮೇಲೆ ದ್ರೌಪದಿಯ ಆದರಾತಿಥ್ಯವನ್ನು ತಾನು ಸ್ವೀಕರಿಸಿ ಊಟ ಉಡಿಗೆಗಳನ್ನು ತೀರಿಸಿಕೊಂಡು

ಸೊಸೆ ಮೊಮ್ಮೊಕ್ಕಳೊಂದಿಗೆ ಕೆಲಹೊತ್ತು ವಿನೋದದಲ್ಲಿ ಅಥವಾ ಉಪದೇಶ ಮಾಡುವದರಲ್ಲಿ, ಎರಡು ಹಿತದ ಮಾತುಗಳನ್ನು ಹೇಳುವದರಲ್ಲಿ ಹೊತ್ತುಗಳೆದು ಮತ್ತೆ ತನ್ನ ಧಾರ್ಮಿಕಸಾಧನದಲ್ಲಿ ತೊಡಗುವದು. ಈ ಮೇರೆಗೆ ಸಾಧಾರಣವಾಗಿ ಕುಂತೀದೇವಿಯ ನಿತ್ಯ ಕಾರ್ಯಕ್ರಮವಿತ್ತು. ದ್ರೌಪದಿಯು ಕುಂತೀದೇವಿಯ ಸೇವೆಯಲ್ಲಿ ಯಾವಾಗಲೂ ತತ್ಪರಳಾಗಿದ್ದಳು. ಆಕೆಯ ಸೇವೆಯನ್ನು ಮಾಡುವದರಲ್ಲಿ ದ್ರೌಪದಿಗೆ ವಿಲಕ್ಷಣ ಅಭಿಮಾನವೆನಿಸುತ್ತಿತ್ತು. ತಾಳ್ಮೆಯಲ್ಲಿ ಪೃಥಿವಿಯನ್ನು ಹೋಲುವ ಸತ್ಯವಾದಿನಿಯಾದ ಕುಂತೀದೇವಿಯನ್ನು ದ್ರೌಪದಿಯು ಅನ್ನವಸ್ತ್ರ ಆಭರಣಗಳಿಂದ ಮೊದಲು ಉಪಚರಿಸಿ ನಂತರ ತನ್ನ ಹಸಿವೆ ತೃಷೆಗಳನ್ನು ತಣಿಸುತ್ತಿದ್ದಳು. ಪಾಂಡವರು ಅತಿ ಮಾತೃಭಕ್ತರು. ತಮ್ಮ ತಾಯಿಯಲ್ಲಿ ಆದರವೂ ವಿಶ್ವಾಸವೂ ವಿಶೇಷವಾಗಿದ್ದು ಪ್ರತಿಯೊಂದು ಮಹತ್ವದ ವಿಷಯದಲ್ಲಿ ಆವಳ ಆಲೋಚನೆಯನ್ನು ಯಾವಾಗಲೂ ಕೇಳುತ್ತಿದ್ದರು; ಹಾಗೆಯೇ ಪುತ್ರ ಪ್ರೇಮವಾದರೂ ಕುಂತಿಯಲ್ಲಿ ಬಲವಾಗಿದ್ದಿತು. ಕುಂತಿಯಾಗಲಿ ಪಾಂಡವರಾಗಲಿ ಸನಾತನ ಧರ್ಮದ ಉಜ್ವಲ ಅಭಿಮಾನಿಗಳಾಗಿದ್ದರೆಂಬುವ ಮಾತು ಸ್ಪಷ್ಟವಿದೆ. ಪಾಂಡವರು ಮಾಡಿದ ರಾಜಸೂಯಯಜ್ಞ, ಅಶ್ವಮೇಧಯಜ್ಞ ಮುಂತಾದವುಗಳಿಂದಲೂ ಇದೇ ದೃಢವಾಗುತ್ತದೆ. ಕುಂತೀದೇವಿ ಹಾಗೂ ಪಾಂಡವರ ಸಂಭಾಷಣೆಗಳಲ್ಲಿ ಅವರ ಸನಾತನ ಧರ್ಮಾಭಿಮಾನದ ದೃಷ್ಟಾಂತಗಳು ಹೇರಳವಾಗಿ ದೊರಕುತ್ತವೆ. ಶ್ರೀಕೃಷ್ಣಪ್ರಣೀತ ಕರ್ಮಯೋಗ ಪರವಾದ ಭಾಗವತ ಧರ್ಮವನ್ನು ಕುಂತಿಯು ಅನುಸರಿಸುತ್ತಿದ್ದಳೆಂದು ಹೇಳಲು ಯಾವ ಪ್ರತ್ಯವಾಯವೂ ಇಲ್ಲ. ಕುಂತಿಯು ದೈವವಾದಿಯಾಗಲಿ, ನಿವೃತ್ತಿಮಾರ್ಗದವಳಾಗಲಿ ಇರಲಿಲ್ಲವೆಂದು ಕಾಣುತ್ತದೆ. ದೇವರಲ್ಲಿ ಭರವಸೆಯನ್ನಿಟ್ಟು ನಿನ್ನ ಕರ್ತವ್ಯವನ್ನು ಫಲಾಶೆಯನ್ನಿಡದೆ ಮಾಡು ಎಂಬೀ ಭಗವಂತನ ಉಪದೇಶವನ್ನೇ ಕುಂತಿಯು ಸ್ವತಃ ಆಚರಿಸುವಂತೆ ಉಪದೇಶಿಸುತ್ತಿದ್ದಳು.

**ಧರ್ಮರಾಜನ ರಾಜಸೂಯ ಯಾಗ**:— ಮೇಲೆ ಹೇಳಿದಂತೆ ಕುಂತೀದೇವಿಯು ತನ್ನ ಮಕ್ಕಳೊಂದಿಗೆ ವೈಭವದಲ್ಲಿ ಪರಮಾನಂದದಿಂದ ಪರವೈಭವವನ್ನು ಸಾಧಿಸುತ್ತ ಕಾಲಕಳೆಯುತ್ತಿದ್ದಳು. ಈ ಬಗೆಯಾಗಿ

ಸುಮಾರು ೨೦ ವರ್ಷ ಕಳೆದ ಮೇಲೆ ನಾರದರ ಪ್ರೋತ್ಸಾಹದಿಂದ ಧರ್ಮ ರಾಯನು ರಾಯಸೂಯಯಾಗವನ್ನು ಮಾಡುವದಾಗಿ ನಿಶ್ಚಯಿಸಿದನು. ಈ ಯಾಗವನ್ನು ಮಾಡಿದವರು ಆಕಾಲಕ್ಕೆ ಭರತಖಂಡದ ಸಾರ್ವಭೌಮರಾಗಿ ಮನ್ನಿಸಲ್ಪಡುತ್ತಿದ್ದರು. ಧರ್ಮರಾಯನಲ್ಲಿ ಸಾರ್ವಭೌಮತ್ವಕ್ಕೆ ಬೇಕಾದ ಎಲ್ಲ ಬಗೆಯ ಗುಣಗಳೂ ಇದ್ದವು. ರಾಜ್ಯದಲ್ಲಿ ಎಲ್ಲ ವಿಧದ ಸಮೃದ್ಧಿ ಯಾಗಿದ್ದಿತು. ಬೊಕ್ಕಸವು ತುಂಬಿತ್ತು. ಜನರು ಆನಂದದಲ್ಲಿದ್ದರು. ಅಣ್ಣನ ವೈಭವವು ಬೆಳೆಯುಲು ಸಾಹಸವನ್ನು ಮಾಡಲು ತಮ್ಮಂದಿರು ಸಿದ್ಧ ರಿದ್ದರು; ಸಾಲದ್ದಕ್ಕೆ ಭಗವಾನ್ ಶ್ರೀಕೃಷ್ಣನಂಥ ರಾಜಕಾರ್ಯ ಪಟುವು ಪಾಂಡವರ ಪಂಗಡಗಟ್ಟಿ ಅವರ ಕಾರ್ಯ ನೆರವೇರಿಸಲು ಯಾವಾಗಲೂ ಒಂಟಿಗಾಲಿನಮೇಲೆ ಸಿದ್ಧ; ಅಂದಮೇಲೆ ಕೇಳುವದೇನು ? ಧರ್ಮ ರಾಯನು ರಾಯಸೂಯಯಜ್ಞವನ್ನು ಮಾಡುವದನ್ನು ನಿಶ್ಚಯಿಸಿ ಕೃಷ್ಣ ನನ್ನು ಬರಮಾಡಿಕೊಂಡು ಅವನಿಂದ ಶಿಶುಪಾಲನನ್ನು ಕೊಲ್ಲಿಸಿ ಯಜ್ಞ ವನ್ನು ಮುಗಿಸಿದನು. ತಾನು ಸಾರ್ವಭೌಮ ಪದವನ್ನೇರಿದನು. ತನ್ನ ಮಗನು ಸಾರ್ವಭೌಮನಾದುದನ್ನು ಕಂಡು ಕುಂತಿಯು ಕಣ್ಣುಗಳ ಪಾರಣೆಯಾಯಿತು.

**ದುರ್ಯೋಧನನಲ್ಲಿ ವೈರದ ಉರಿ:—** ಯಜ್ಞಸಮಾರಂಭವು ಮುಗಿದ ಮೇಲೆ ವ್ಯಾಸರು ಧರ್ಮರಾಯನಿಗೆ ಆಶೀರ್ವದಿಸಿ ಅವನಿಗೆ ಮುಂಬರುವ ಭವಿಷ್ಯವನ್ನು ತಿಳಿಸಿ ಕುಂತೀದೇವಿಯಲ್ಲಿಗೆ ಬಂದು—"ಅಮ್ಮಾ ನೀನು ಪುಣ್ಯವಂತಿಯು. ಧರ್ಮಾತ್ಮಳು. ಇಗೋ ಈ ಮಹಾಯಜ್ಞದಲ್ಲಿ ಧರ್ಮನು ನನಗಿತ್ತ ಧನಕನಕ ಸಂಪತ್ತನ್ನು ತೆಗೆದುಕೋ. ಇದನ್ನು ತೆಗೆ ದುಕೊಂಡು ನಾನೇನು ಮಾಡಲಿ. ನೀನೇ ಇದನ್ನೆಲ್ಲ ದಾನಮಾಡು." ಎಂದು ಹೇಳಿ ತಮ್ಮಪಾಲಿನ ಧನವನ್ನು ಕುಂತಿಗೆ ಕೊಟ್ಟರು. ಕುಂತಿಯು ಅದನ್ನು ದಾನಮಾಡಿದಳು. ಎಲ್ಲ ರಾಜರೂ ಋಷಿಗಳೂ ಹೊರಟು ಹೋದರು. ದುರ್ಯೋಧನಾದಿಗಳು ತುಸು ದಿವಸ ಇಂದ್ರಪ್ರಸ್ಥದಲ್ಲಿದ್ದರು. ಯಜ್ಞ ಮಹೋತ್ಸವದಲ್ಲಿ ನಾನಾ ದೇಶಗಳ ರಾಜರಿಂದ ಬಂದ ಕಪ್ಪಕಾಣಿಕೆಗಳ ನ್ನೆಲ್ಲ ಸ್ವೀಕರಿಸುವ ಕೆಲಸವು ದುರ್ಯೋಧನನದಾಗಿತ್ತು. ದುರ್ಯೋಧನನು ಧರ್ಮರಾಯನ ಎಲ್ಲ ವೈಭವವನ್ನು ನೋಡಿದನು; ಅವನಲ್ಲಿ ಪಾಂಡವರ

ಬಗ್ಗೆ ಮತ್ತೆ ಹೊಟ್ಟೆಯುರಿ ಎದ್ದಿತು. ಧರ್ಮರಾಯನು ರಾಜಾಧಿರಾಜನೇ? ದ್ರೌಪದಿಯು ಮಹಾರಾಜ್ಞಿಯೇ? ಈ ವೈಭವವನ್ನಾದರೂ ಮಣ್ಣುಗೂಡಿಸಲು ಬೇಕು. ಇಲ್ಲವಾದರೆ ಪ್ರಾಣವನ್ನಾದರೂ ನೀಗಲುಬೇಕು ಎಂದು ದುರ್ಯೋಧನನು ನಿಶ್ಚಯಿಸಿ ಸಂತಾಪದಿಂದ ಮರಳಿ ಹಸ್ತಿನಾಪುರಕ್ಕೆ ತೆರಳಿದನು. ಈ ಮೇರೆಗೆ ಪಾಂಡವರ ವೈಭವದಲ್ಲಿಯೇ ಅವರ ಭಾವೀ ವಿಷವೃಕ್ಷದ ಬೀಜಾರೋಪಣವಾಯಿತು. ಪಾಂಡವರು ಈ ರಾಯಸೂಯ ಯಾಗದ ಮಟ್ಟಿಗೆ ಬೀಳದಿದ್ದರೆ, ಸಾಮ್ರಾಜ್ಯ ವೈಭವವನ್ನು ದೊರಕಿಸುವ ಮಹತ್ವಾಕಾಂಕ್ಷೆಯನ್ನು ಬಿಟ್ಟು ಇಂದ್ರಪ್ರಸ್ಥದ ರಾಜರಾಗಿಯೇ ಇದ್ದರೆ, ಮುಂದಿನ ಅನರ್ಥವು ತಪ್ಪಬಹುದಾಗಿತ್ತೋ ಹೇಗೆಂಬ ಪ್ರಶ್ನೆಯು ನಿರುಪಯುಕ್ತವಾದದ್ದು.

---

# ೪ನೆಯ ಪ್ರಕರಣ.

## ಎರಡನೇ ವನವಾಸ

**ಶ್ರೀಕೃಷ್ಣರ ವೃತ್ತಿ:—** ಕುಂತಿಯು ಐಹಿಕ ಸುಖಾನಂದದ ದಿನಗಳನ್ನು ನೋಡಿ ವಿಧಾತನಿಗೂ ಮತ್ಸರವೆನಿಸಿರಬಹುದೇ? ಅಥವಾ ಐಹಿಕ ಸೌಖ್ಯವು ಕ್ಷಣಿಕವೆಂದು ಸಿದ್ಧಪಡಿಸಲು ಹುಡುಗರು ಕಾಗದದ ಆಟದ ಮನೆಗಳನ್ನು ಬಡಿದು ಊದಿ ಹಾರಿಸುವಂತೆ, ದುಷ್ಟ ದೈವವು ತನ್ನ ದುಷ್ಟತನದ ಅಟ್ಟಹಾಸದಲ್ಲಿ ಆಕೆಯ ಸೌಖ್ಯವನ್ನು ಹಾರಹೊಡೆಯುವ ಶತಕೃತ್ಯವನ್ನು ನಡಿಸಿರಬಹುದೇ? ಮನುಷ್ಯನ ಸುಖದುಃಖಕ್ಕೆ ಮೂಲಕಾರಣವು ಮನಸ್ಸೇ! ರಾಜಬೀದಿಯಲ್ಲಿಂದ ಗಿರಿಕಂದರದ ಕೊರಚುಗಲ್ಲಿನ ಹಳ್ಳಕೊಳ್ಳದಲ್ಲಿಟ್ಟರೇನು? ಮೇಲುಪ್ಪರಿಗೆಯು ಹೋಗಿ ಪರ್ಣಕುಟೀರವಾದರೇನು? ಪಂಚಭಕ್ಷ ಪಕ್ವಾನ್ನಗಳ ಬದಲು ಕರಕನ್ನವನ್ನಾಗಲಿ ಹಣ್ಣುಎಲೆ – ಬಳ್ಳಿಗಳನ್ನಾಗಲಿ ತಿನ್ನಬೇಕಾದರೇನು? ಪಟ್ಟಾವಳಿಯು